ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತ್
ಶಾಲಾ ಶಿಕ್ಷಣ ಇಲಾಖೆ

# ಉತ್ತರ ಉನ್ನತಿ-2

## ಪ್ರಥಮ ಭಾಷೆ- ಕನ್ನಡ

2024 ನೇ ಸಾಲಿನ ಎಸ್.ಎಸ್.ಎಲ್.ಸಿ
ಪರೀಕ್ಷಾ ಫಲಿತಾಂಶವನ್ನು ಗುಣಾತ್ಮಕವಾಗಿ
ಹೆಚ್ಚಿಸುವ ನಿಟ್ಟಿನಲ್ಲಿ ರಚಿಸಲಾಗಿರುವ
ಅಭ್ಯಾಸ ಪ್ರಶ್ನೆಪತ್ರಿಕೆಗಳ ಕೈಪಿಡಿ

ಮಾದರಿ ಉತ್ತರಗಳೊಂದಿಗೆ



## ಉಪನಿರ್ದೇಶಕರು (ಆಡಳಿತ)ರವರ ಕಛೇರಿ

ಬೆಂಗಳೂರು ಉತ್ತರ ಜಿಲ್ಲೆ ಕೆ.ಜಿ.ರಸ್ತೆ, ಬೆಂಗಳೂರು

ಶಾಲಾ ಶಿಕ್ಷಣ ಇಲಾಖೆ

ಉಪನಿರ್ದೇಶಕರು(ಆಡಳಿತ)ರವರ ಕಚೇರಿ

ಬೆಂಗಳೂರು ಉತ್ತರ ಜಿಲ್ಲೆ, ಕೆ.ಜಿ.ರಸ್ತೆ, ಬೆಂಗಳೂರು

# ಉತ್ತರ ಉನ್ನತಿ-2

# ಪ್ರಥಮ ಭಾಷೆ-ಕನ್ನಡ

**2024ರ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶವನ್ನು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳ ಕೈಪಿಡಿ**

## ಮಾದರಿ ಉತ್ತರಗಳೊಂದಿಗೆ



**ಶ್ರೀ ಕಾಂತರಾಜು ಪಿ ಎಸ್** ಭಾ.ಆ.ಸೇ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

**ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಚೇರಿ**
**ಎಸ್ ಕರಿಯಪ್ಪ ರಸ್ತೆ**
**ಬನಶಂಕರಿ**
**ಬೆಂಗಳೂರು ನಗರ ಜಿಲ್ಲಾ ಪಂಚಾಯತ್**
**ಬೆಂಗಳೂರು**

## :: ಅಭಿನಂದನಾ ನುಡಿ ::

ಶಾಲಾ ಶಿಕ್ಷಣವು ವಿದ್ಯಾರ್ಥಿಗಳ ಜೀವನದಲ್ಲಿ ಅತ್ಯಂತ ಮಹತ್ವದ ಘಟ್ಟವಾಗಿದ್ದು, ಅದರಲ್ಲೂ ಎಸ್.ಎಸ್.ಎಲ್.ಸಿ ಎನ್ನುವುದು ಅತ್ಯಂತ ಪ್ರಮುಖವಾದ ಮೈಲಿಗಲ್ಲಾಗಿದೆ. ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ವಿದ್ಯಾರ್ಥಿಗಳು ವಿಶ್ವಾಸಪೂರ್ವಕವಾಗಿ ಬರೆಯುವಂತಾಗಲೂ ಮತ್ತು ಶಿಕ್ಷಕರು ವಿದ್ಯಾರ್ಥಿಗಳನ್ನು ಈ ದೆಸೆಯಲ್ಲಿ ಸಿದ್ಧಗೊಳಿಸಲು ಅನುವಾಗುವಂತೆ ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆಯ ಉಪನಿರ್ದೇಶಕರ ಕಚೇರಿಯಿಂದ **ಉತ್ತರ ಉನ್ನತಿ–2** ಎನ್ನುವ ಅಭ್ಯಾಸ ಪತ್ರಿಕೆಗಳ ಕೈಪಿಡಿಯನ್ನು ಮಾದರಿ ಉತ್ತರಗಳ ಸಮೇತ ನೀಡುತ್ತಿರುವುದು ಹರ್ಷದಾಯಕ ವಿಷಯವಾಗಿದೆ. ಪರೀಕ್ಷೆಗೆ ಉಳಿಕೆ ಇರುವ ದಿನಗಳಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರು ಸದರಿ ಕೈಪಿಡಿಯನ್ನು ಆಧರಿಸಿ ತಮ್ಮ ಹಂತದಲ್ಲಿ ಕ್ರಿಯಾಯೋಜನೆ ರಚಿಸಿಕೊಂಡು ಸದರಿ ಹೊತ್ತಿಗೆಯನ್ನು ಪರಿಣಾಮಕಾರಿ ಬಳಸಿಕೊಂಡು ಉತ್ತಮ ಫಲಿತಾಂಶ ಪಡೆಯಲು ಸಹಕಾರಿಯಾಗಲೀ ಎಂದು ಆಶಿಸುತ್ತಾ, ವಿದ್ಯಾರ್ಥಿಗಳ ಫಲಿತಾಂಶವು ಕೇವಲ ವಿದ್ಯಾರ್ಥಿಗೆ ಸಂಬಂಧಿಸಿದ ಫಲಿತಾಂಶವಾಗಿರದೇ, ಬೆಂಗಳೂರು ನಗರ ಜಿಲ್ಲೆಯ ಫಲಿತಾಂಶವೂ ಆಗಿರುವುದರಿಂದ ಜಿಲ್ಲೆಯ ಫಲಿತಾಂಶವನ್ನು ಪರಿಮಾಣಾತ್ಮಕವಾಗಿ ಮತ್ತು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ಈ ಪುಸ್ತಿಕೆಯು ದಾರಿದೀಪವಾಗಲೀ ಎಂದು ಹಾರೈಸುತ್ತಾ, ಈ ಹೊತ್ತಿಗೆಯನ್ನು ಹೊರತರುವಲ್ಲಿ ಶ್ರಮಿಸಿದ ಎಲ್ಲಾ ಅಧಿಕಾರಿಗಳು ಮತ್ತು ಸಂಪನ್ಮೂಲ ಶಿಕ್ಷಕರಿಗೆ ತುಂಬು ಹೃದಯದ ಅಭಿನಂದನೆಗಳು.

01.01.2024
ಬೆಂಗಳೂರು

**ಕಾಂತರಾಜು**
**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು**



**ಲೋಹಿತೇಶ್ವರ ರೆಡ್ಡಿ ಕೆ ಪಿ**
ಉಪನಿರ್ದೇಶಕರು (ಆಡಳಿತ)


**ಉಪನಿರ್ದೇಶಕರು (ಆಡಳಿತ)ರವರ ಕಚೇರಿ**
**ಶಾಲಾ ಶಿಕ್ಷಣ ಇಲಾಖೆ**
**ಬೆಂಗಳೂರು ಉತ್ತರ ಜಿಲ್ಲೆ**
**ಬೆಂಗಳೂರು – 560009**
**ದೂರವಾಣಿ ಸಂಖ್ಯೆ – 080 22215312**
**ಇಮೇಲ್ ವಿಳಾಸ –**
**ddpinorth@gmail.com**


# ಸಂದೇಶ

ಪ್ರತಿಯೊಂದು ವಿದ್ಯಾರ್ಥಿಯ ಜೀವನದಲ್ಲೂ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವೂ ಮಹತ್ವಪೂರ್ಣವಾಗಿದೆ. ಇಂದಿನ ವಿದ್ಯಾರ್ಥಿಗಳೇ, ಮುಂದಿನ ರಾಷ್ಟ್ರದ ಭವಿಷ್ಯತ್ತಿನ ಸಂಪತ್ತಾಗಿರುವುದರಿಂದ, ಶಿಕ್ಷಣದ ಅಂತಸತ್ವವನ್ನು ಮತ್ತಷ್ಟು ಗಟ್ಟಿಗೊಳಿಸುವ ಮತ್ತು ಗುಣಾತ್ಮಕವಾಗಿಸುವ ನಿಟ್ಟಿನಲ್ಲಿ ನಮ್ಮೆಲ್ಲರ ಜವಾಬ್ದಾರಿ ಇದೆ. ಸಾರ್ವತ್ರಿಕ ಶಿಕ್ಷಣವನ್ನು ಸಾಧಿಸಿದ ನಂತರ, ವಿದ್ಯಾರ್ಥಿಗಳನ್ನು ಸ್ವರ್ಧಾತ್ಮಕ ಜಗತ್ತಿಗೆ ಅಣಿಗೊಳಿಸುವಂತಹ ಗುಣಾತ್ಮಕ ಶಿಕ್ಷಣಕ್ಕೆ ಒತ್ತು ನೀಡಬೇಕಾದ ಈ ಸಂಧರ್ಭದಲ್ಲಿ ನಮ್ಮ ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆಯ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಹಲವಾರು ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳುತ್ತಲೇ ಬರಲಾಗಿದೆ. ಈ ನಿಟ್ಟಿನಲ್ಲಿ ಶಾಲಾ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರನ್ನು ಶೈಕ್ಷಣಿಕವಾಗಿ ಸಧೃಡರನ್ನಾಗಿ ಮಾಡುವಲ್ಲಿ ನಮ್ಮ ಕಚೇರಿಯ ಶಿಕ್ಷಣಾಧಿಕಾರಿಗಳು, ವಿಷಯ ಪರಿವೀಕ್ಷಕರು, ಸಂಪನ್ಮೂಲ ಶಿಕ್ಷಕರ ತಂಡವನ್ನು ರಚಿಸಿಕೊಂಡು ಕಾಯೋನ್ಮುಖರಾಗಿದ್ದಾರೆ.

ನಮ್ಮ ಈ ಬೆಂಗಳೂರು ಉತ್ತರ ಜಿಲ್ಲೆಯ ಶೈಕ್ಷಣಿಕ ಪಗ್ರತಿಯ ಒಂದು ಭಾಗವಾದ, ಎಸ್.ಎಸ್.ಎಲ್.ಸಿ ಪರೀಕ್ಷೆಯ ಫಲಿತಾಂಶವನ್ನು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ಪ್ರತಿವರ್ಷ "ಉತ್ತರ ಉತ್ತುಂಗ" ಎಂಬ ಹೊತ್ತಿಗೆಯನ್ನು ಹೊರತರುತ್ತಿದ್ದು ಸದರಿ ವರ್ಷ ಹೊಸ ಶೀರ್ಷಿಕೆಯೊಂದಿಗೆ ಮಾದರಿ ಉತ್ತರಗಳ ಸಮೇತ **'ಉತ್ತರ ಉನ್ನತಿ–2'** ಎಂಬ ಶೀರ್ಷಿಕೆಯಡಿಯಲ್ಲಿ ಅಭ್ಯಾಸ ಪ್ರಶ್ನೆಪತ್ರಿಕೆಗಳನ್ನೊಳಗೊಂಡ ಕೈಪಿಡಿಯನ್ನು ಹೊರತರಲಾಗುತ್ತಿದ್ದು ಇದರ ಉಪಯೋಗವನ್ನು ಎಲ್ಲಾ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಪಡೆಯುವಂತಾಗಲೀ ಎಂದು ಆಶಿಸುತ್ತೇನೆ.

ಕೇವಲ ಉತ್ತೀರ್ಣಗೊಳಿಸುವ ಒಂದೇ ಮಾನದಂಡವನ್ನು ಇಟ್ಟುಗೊಳ್ಳದೇ, ವಿದ್ಯಾರ್ಥಿಯ ಗುಣಾತ್ಮಕ ಫಲಿತಾಂಶಕ್ಕೆ ಇನ್ನೂ ಉಳಿಕೆ ಇರುವ ದಿನಗಳಲ್ಲಿ ಜಿಲ್ಲೆಯ ಎಲ್ಲಾ ಶಾಲಾ ಮುಖ್ಯ ಶಿಕ್ಷಕರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು ತಮ್ಮದೇ ಆದ ಕ್ರಿಯಾ ಯೋಜನೆಯನ್ನು ರಚಿಸಿಕೊಂಡು ಉತ್ತಮ ಸ್ಥಾನ ಪಡೆಯುವಂತಾಗಲೀ ಎಂದು ಶುಭ ಹಾರೈಸುತ್ತೇನೆ.

ಈ ಕೈಪಿಡಿಯನ್ನು ಹೊರತರುವಲ್ಲಿ ನಮ್ಮ ಕಚೇರಿಯ ಶಿಕ್ಷಣಾಧಿಕಾರಿಗಳು ಹಾಗೂ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳಾದ ಶ್ರೀ ರಮೇಶ್ ವಿ ರವರಿಗೂ , ಎಲ್ಲಾ ವಿಷಯ ಪರಿವೀಕ್ಷಕರು ಮತ್ತು ಅವರ ಸಂಪನ್ಮೂಲ ತಂಡಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ.

01.01.2024

ಬೆಂಗಳೂರು

ಲೋಹಿತೇಶ್ವರ ರೆಡ್ಡಿ ಕೆ ಪಿ

ಉಪನಿರ್ದೇಶಕರು (ಆಡಳಿತ)



**ರಮೇಶ್ ವಿ**
**ಶಿಕ್ಷಣಾಧಿಕಾರಿಗಳು &**
**ಜಿಲ್ಲಾ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು**


**ಉಪನಿರ್ದೇಶಕರು (ಆಡಳಿತ)ರವರ ಕಚೇರಿ**
**ಶಾಲಾ ಶಿಕ್ಷಣ ಇಲಾಖೆ**
**ಬೆಂಗಳೂರು ಉತ್ತರ ಜಿಲ್ಲೆ**
**ಬೆಂಗಳೂರು – 560009**
**ದೂರವಾಣಿ ಸಂಖ್ಯೆ – 080 22215312**
**ಇಮೇಲ್ ವಿಳಾಸ –**
**ddpinorth@gmail.com**


# ಮುನ್ನುಡಿ

ಶಿಕ್ಷಣವು ವಿದ್ಯಾರ್ಥಿಯ ವ್ಯಕ್ತಿತ್ವ ಬೆಳವಣಿಗೆಯಲ್ಲಿ ತನ್ನದೇ ಆದ ಮಹತ್ವವನ್ನು ಹೊಂದಿದೆ. ಅದರಲ್ಲೂ ಮಾಧ್ಯಮಿಕ ಶಿಕ್ಷಣವೂ ವಿದ್ಯಾರ್ಥಿಯ ಮುಂದಿನ ಭವಿಷ್ಯದ ತಳಪಾಯವಾಗಿದ್ದು, ರಾಷ್ಟ್ರದ ಉತ್ತಮ ನಾಗರೀಕ ಪ್ರಜೆಯನ್ನಾಗಿಸುವಲ್ಲಿ ಮಹತ್ತಮ ಘಟ್ಟವಾಗಿದೆ. ಕರ್ನಾಟಕ ಶಿಕ್ಷಣ ಸಂರಚನೆಯ ವ್ಯವಸ್ಥೆಯಲ್ಲಿ ಮಾಧ್ಯಮಿಕ ಶಿಕ್ಷಣದ ಮಹತ್ತರ ಘಟ್ಟವೆಂದೇ ಪರಿಗಣಿತವಾಗಿರುವ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳು ಮುಂದಿನ ಶೈಕ್ಷಣಿಕ ಆಯ್ಕೆ ಮತ್ತು ವೃತ್ತಿ ಜೀವನ ನಿರ್ಧಾರದ ಕೈಗೊಳ್ಳುವ ಪ್ರಥಮತಃ ಹಂತವಾಗಿದ್ದು, ಈ ತರಗತಿಯ ಫಲಿತಾಂಶವೂ ಅತ್ಯಂತ ಮಹತ್ತರವಾಗಿರುತ್ತದೆ.

ಪ್ರತೀ ವರ್ಷ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯಿಂದ ನಡೆಸಲ್ಪಡುವ ಹತ್ತನೇ ತರಗತಿಯ ಪರೀಕ್ಷೆಗೆ ಬೆಂಗಳೂರು ಉತ್ತರ ಶೈಕ್ಷಣಿಕ ಜಿಲ್ಲೆಯಿಂದ ಪ್ರಸಕ್ತ ವರ್ಷ 44378 ಶಾಲಾ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗುತ್ತಿದ್ದು, ಈ ವಿದ್ಯಾರ್ಥಿಗಳ ಫಲಿತಾಂಶವನ್ನು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ಶಾಲಾ ಶಿಕ್ಷಕರಿಂದ ಮೊದಲುಗೊಂಡು, ಮುಖ್ಯ ಶಿಕ್ಷಕರು ಅಲ್ಲದೇ ತಾಲ್ಲೂಕು ಹಂತ, ಜಿಲ್ಲಾ ಹಂತ, ರಾಜ್ಯ ಹಂತದ ಎಲ್ಲಾ ಅಧಿಕಾರಿಗಳು ವಿವಿಧ ಕಾರ್ಯತಂತ್ರಗಳ ಮುಖೇನ ಪ್ರಯತ್ನಿಸುತ್ತಲೇ ಇದ್ದಾರೆ. ಈ ನಿಟ್ಟಿನಲ್ಲಿ ನಮ್ಮ ಕಚೇರಿಯಿಂದಲೂ 22 ಮೇ 2023 ರಂದು ಸರ್ಕಾರಿ ಮತ್ತು ಅನುದಾನಿತ ಪ್ರೌಢಶಾಲಾ ಮುಖ್ಯ ಶಿಕ್ಷಕರ ಸಭೆ ಕರೆದು ಪ್ರಸಕ್ತ ವರ್ಷದ ಎಸ್.ಎಸ್.ಎಲ್.ಸಿ ಫಲಿತಾಂಶವನ್ನು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ಕ್ರಿಯಾ ಯೋಜನೆಯನ್ನು ರಚಿಸಿ, ವಿವಿಧ ಕಾರ್ಯಚಟುವಟಿಕೆಗಳ ಮೂಲಕ ಶಿಕ್ಷಕರು ಮತ್ತು ವಿದ್ಯಾರ್ಥಿಗಳನ್ನು ಮುಟ್ಟುವಂತಹ ಕೆಲಸವನ್ನು ಜೂನ್ 2023ರಿಂದಲೂ ಮಾಡುತ್ತಲೇ ಬರುತ್ತಿದೆ.

ಈ ಕಾರ್ಯಚಟುವಟಿಕೆಯ ಒಂದು ಭಾಗವಾಗಿ **"ಉತ್ತರ ಉನ್ನತಿ-2"** ಎಂಬ ಮಾದರಿ ಉತ್ತರಗಳನ್ನು ಒಳಗೊಂಡ ಅಭ್ಯಾಸ ಪತ್ರಿಕೆಗಳ ಸಂಪನ್ಮೂಲ ಸಾಹಿತ್ಯವನ್ನು ರಚಿಸಿ, ಪ್ರಸ್ತುತ ಶಿಕ್ಷಕರಿಗೆ ನೀಡುತ್ತಿದ್ದೇವೆ. ಈ ಸಂಪನ್ಮೂಲ ಸಾಹಿತ್ಯವನ್ನು ಗುಣಾತ್ಮಕ ಫಲಿತಾಂಶದ ಒಂದು ಕಾರ್ಯತಂತ್ರವಾಗಿ ಹೇಗೆ ಬಳಕೆ ಮಾಡಬೇಕೆಂದು ವಿಷಯ ಪರಿವೀಕ್ಷಕರು ಮತ್ತು ವಿಷಯವಾರು ಸಂಪನ್ಮೂಲ ವ್ಯಕ್ತಿಗಳ ಮುಖೇನ ಮಾರ್ಗದರ್ಶನ ಮಾಡಿದ್ದು, ಇದು ಈ ಶೈಕ್ಷಣಿಕ ವರ್ಷದ ಬೆಂಗಳೂರು ಉತ್ತರ ಜಿಲ್ಲೆಯ ಫಲಿತಾಂಶವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುವುದೆಂಬ ಆಶಯದೊಂದಿಗೆ ಈ ಕೈಪಿಡಿಯನ್ನು ಶಿಕ್ಷಕರ ಮತ್ತು ವಿದ್ಯಾರ್ಥಿಗಳ ಕೈಗಿಡಲಾಗುತ್ತಿದೆ. ಇದರ ಸದುಪಯೋಗವನ್ನು ಜಿಲ್ಲೆಯ ಎಲ್ಲಾ ವಿದ್ಯಾರ್ಥಿಗಳು, ಶಿಕ್ಷಕರು ಪಡೆದು, ಉತ್ತಮ ಫಲಿತಾಂಶಕ್ಕಾಗಿ ಶುಭ ಹಾರೈಸುತ್ತೇನೆ.

01.01.2024

ಬೆಂಗಳೂರು

**ರಮೇಶ್ ವಿ**

ಶಿಕ್ಷಣಾಧಿಕಾರಿಗಳು & ಜಿಲ್ಲಾ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು

**ಉಪನಿರ್ದೇಶಕರು (ಆಡಳಿತ)ರವರ ಕಚೇರಿ**
**ಶಾಲಾ ಶಿಕ್ಷಣ ಇಲಾಖೆ**
**ಬೆಂಗಳೂರು ಉತ್ತರ ಜಿಲ್ಲೆ**
**ಬೆಂಗಳೂರು – 560009**
**ದೂರವಾಣಿ ಸಂಖ್ಯೆ – 080 22215312**
**ಇಮೇಲ್ ವಿಳಾಸ –**
**ddpinorth@gmail.com**



**ಪಂಕಜ ಜಿ ಸಿ**
ಶಿಕ್ಷಣಾಧಿಕಾರಿ

# ಶುಭ ಹಾರೈಕೆ

ಶಿಕ್ಷಣವು ಜ್ಞಾನವನ್ನು ಕಟ್ಟಿಕೊಳ್ಳುವ, ಜ್ಞಾನವನ್ನು ಸಂರಚಿಸಿಕೊಳ್ಳುವ ಹಾಗೂ ಜ್ಞಾನಾನ್ವೇಷಣೆಯತ್ತ ನಮ್ಮನ್ನು ಪ್ರೇರೇಪಿಸುವ ಒಂದು ಅದ್ಭುತ ಪ್ರಕ್ರಿಯೆ. ಬೋಧನೆ, ಕಲಿಕೆ, ಕಲಿಕೆಯ ದೃಢೀಕರಣ ಹಾಗೂ ಮೌಲ್ಯಮಾಪನ ಕ್ರಿಯೆಗಳು ಈ ಪ್ರಕ್ರಿಯೆಯ ಪ್ರಮುಖ ಭಾಗಗಳಾಗಿವೆ. ಮೌಲ್ಯಮಾಪನವು ವಿದ್ಯಾರ್ಥಿಗಳ ಗುಣಾತ್ಮಕ ಕಲಿಕೆಯನ್ನು ಹಾಗೂ ಕಲಿಕಾಫಲಗಳನ್ನು ಒರೆಹಚ್ಚುವ ಒಂದು ಸಾಧನವಾಗಿದೆ. ಈ ಮೌಲ್ಯಮಾಪನ ಪ್ರಕ್ರಿಯೆಯನ್ನು ಸದೃಢಗೊಳಿಸುವ ಹಿನ್ನೆಲೆಯಲ್ಲಿ ಹಾಗೂ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳನ್ನು 2023–24ನೇ ಸಾಲಿನ ಪರೀಕ್ಷೆಗಾಗಿ ಸಿದ್ಧಗೊಳಿಸುವ ನಿಟ್ಟಿನಲ್ಲಿ ಬೆಂಗಳೂರು ಉತ್ತರ ಜಿಲ್ಲೆಯಿಂದ ಅಭ್ಯಾಸ ಪ್ರಶ್ನೆಪತ್ರಿಕೆಗಳನ್ನು ಒಳಗೊಂಡಿರುವ "**ಉತ್ತರ ಉನ್ನತಿ–2**" ಎಂಬ ಕೈಪಿಡಿಯನ್ನು ಹೊರತರಲಾಗುತ್ತಿದೆ. 2023–24ನೇ ಸಾಲಿನ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗಾಗಿ ಹೊರತರುತ್ತಿರುವ ಈ ಆವೃತ್ತಿಯು ವಿದ್ಯಾರ್ಥಿಗಳಿಗೆ ಪ್ರಶ್ನೆಗಳನ್ನು ಅರ್ಥೈಸಿಕೊಳ್ಳುವ, ವಿಶ್ಲೇಷಿಸುವ ಹಾಗೂ ಸೂಕ್ತ ರೀತಿಯಲ್ಲಿ ಉತ್ತರಿಸುವ ಪ್ರಕ್ರಿಯೆಯನ್ನು ಸದೃಢಗೊಳಿಸುವತ್ತ ಬಹಳ ಪರಿಣಾಮಕಾರಿಯಾಗಿದೆ. ಈ "ಉತ್ತರ ಉನ್ನತಿ–2" ನೂತನ ಆವೃತ್ತಿಯು 2023–24ನೇ ಸಾಲಿನ ಎಸ್.ಎಸ್.ಎಲ್.ಸಿ ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ಸಾಮಗ್ರಿಯಾಗಿ ಉಪಯೋಗವಾಗಲಿ ಎಂಬುವುದು ನಮ್ಮ ಆಶಯ. ಈ ಕೈಪಿಡಿಯನ್ನು ಹೊರತರುವಲ್ಲಿ ತಮ್ಮ ಅಮೂಲ್ಯ ಸಲಹೆ ಹಾಗೂ ಮಾರ್ಗದರ್ಶನವನ್ನು ನೀಡಿದ ಉಪನಿರ್ದೇಶಕರು (ಆಡಳಿತ), ಬೆಂಗಳೂರು ಉತ್ತರ ಜಿಲ್ಲೆ, ಇವರಿಗೂ ಹಾಗೂ ಜಿಲ್ಲಾ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳಿಗೂ ಮತ್ತು ಈ ಕಾರ್ಯಕ್ಕೆ ಶ್ರಮಿಸಿದ ಎಲ್ಲಾ ಸಂಪನ್ಮೂಲ ವ್ಯಕ್ತಿಗಳು, ವಿಷಯ ಪರಿವೀಕ್ಷಕರು ಹಾಗೂ ಅಧಿಕಾರಿ ವೃಂದದವರಿಗೂ ಹೃತ್ಪೂರ್ವಕ ಅಭಿನಂದನೆಗಳು. 2023–24ನೇ ಸಾಲಿಗೆ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೂ ಶುಭ ಹಾರೈಸುತ್ತಾ ಜಿಲ್ಲೆಯ ಎಸ್.ಎಸ್.ಎಲ್.ಸಿ ಫಲಿತಾಂಶವು ಉತ್ತುಂಗಕ್ಕೆ ಏರಲೆಂದು ಮನದುಂಬಿ ಆಶಿಸುತ್ತೇನೆ.

01.01.2024

ಬೆಂಗಳೂರು

**ಪಂಕಜ ಜಿ ಸಿ**

ಶಿಕ್ಷಣಾಧಿಕಾರಿ



**ಮಂಜುನಾಥ ಎನ್ ಎಸ್**
ವಿಷಯ ಪರಿವೀಕ್ಷಕರು
ಸಮಾಜ ವಿಜ್ಞಾನ & ಕನ್ನಡ(ಹೆ.ಪ್ರ)

**ಉಪನಿರ್ದೇಶಕರು (ಆಡಳಿತ)ರವರ ಕಚೇರಿ**
**ಶಾಲಾ ಶಿಕ್ಷಣ ಇಲಾಖೆ**
**ಬೆಂಗಳೂರು ಉತ್ತರ ಜಿಲ್ಲೆ**
**ಬೆಂಗಳೂರು – 560009**
**ದೂರವಾಣಿ ಸಂಖ್ಯೆ – 080 22215312**
**ಇಮೇಲ್ ವಿಳಾಸ –**
**ddpinorth@gmail.com**

## ಕೈಪಿಡಿಯ ಕುರಿತು

2024 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ನಡೆಸುವ ವಿಧಾನದಲ್ಲಿ ಹಲವಾರು ಬದಲಾವಣೆಗಳನ್ನು ತರಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಿರ್ಧರಿಸಿರುವುದು ತಮಗೆಲ್ಲಾ ತಿಳಿದಿರುವ ವಿಷಯವೇ ಆಗಿದೆ. ಈ ಬಗ್ಗೆ ಈಗಾಗಲೇ ನಡೆಸಿರುವ ಮುಖ್ಯ ಶಿಕ್ಷಕರ ಮತ್ತು ಶಿಕ್ಷಕರ ಸಭೆಗಳಲ್ಲಿ ವಿಸ್ತೃತವಾಗಿ ತಿಳಿಯಪಡಿಸಿದೆ. ಈ ಬದಲಾವಣೆಗಳೊಂದಿಗೆ ಶಿಕ್ಷಕರನ್ನು ಶೈಕ್ಷಣಿಕವಾಗಿ ಬಲಪಡಿಸಲು ಮತ್ತು ವಿದ್ಯಾರ್ಥಿಗಳು ಆತ್ಮವಿಶ್ವಾಸದಿಂದ ಪರೀಕ್ಷೆಯನ್ನು ಬರೆಯುವಂತೆ ಮಾಡಲು ಪ್ರತಿ ವರ್ಷದಂತೆ ಈ ವರ್ಷವೂ 'ಉತ್ತರ ಉನ್ನತಿ–2' ಎಂಬ ಅಭ್ಯಾಸ ಪತ್ರಿಕೆಗಳ ಕೈಪಿಡಿಯನ್ನು ಹಲವಾರು ಬದಲಾವಣೆಗಳೊಂದಿಗೆ ತಮ್ಮ ಮುಂದಿಡಲು ನಾವು ಹರ್ಷಿಸುತ್ತೇವೆ. ಇದು 'ಉತ್ತರ ಉತ್ತುಂಗ'ದ ಹೊಸ ಶೀರ್ಷಿಕೆಯ ಹೊಸ ಆವೃತ್ತಿ ಎಂಬುದನ್ನು ತಿಳಿಸಲು ಖುಷಿ ಎನಿಸುತ್ತದೆ.

ಹಿಂದಿನ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಪ್ರಸ್ತುತ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು 2019–20 ರಲ್ಲಿ ಪ್ರಕಟಿಸಿರುವ "ದೀವಿಗೆ" ಎಂಬ ಪ್ರಶ್ನೆಪತ್ರಿಕೆ ವಿನ್ಯಾಸ ಕೈಪಿಡಿ, ಮಂಡಳಿಯು ಈ ಹಿಂದಿನ ವರ್ಷಗಳಲ್ಲಿ ಪ್ರಕಟಿಸಿರುವ ಮಾದರಿ ಪ್ರಶ್ನೆಪತ್ರಿಕೆಗಳು ಮತ್ತು ಸದರಿ ವರ್ಷ ಮೌಲ್ಯಮಾಪನಕ್ಕೆ ಪರಿಗಣಿಸಿರುವ ಪರಿಷ್ಕೃತ ಅಧ್ಯಾಯಗಳ ಆಧಾರದ ಮೇಲೆ ಈ ಅಭ್ಯಾಸ ಪ್ರಶ್ನೆಪತ್ರಿಕೆಗಳನ್ನು ಸಂಪನ್ಮೂಲ ಶಿಕ್ಷಕರ ತಂಡದಿಂದ ರಚಿಸಲಾಗಿದ್ದು, ಸದರಿ ಸಾಹಿತ್ಯವು 10 ಅಭ್ಯಾಸ ಪ್ರಶ್ನೆಪತ್ರಿಕೆಗಳನ್ನು ಒಳಗೊಂಡಿದೆ. ವಿಶೇಷವಾಗಿ ಈ ವರ್ಷದ ನೂತನ ಆವೃತ್ತಿಯಲ್ಲಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಪ್ರಕಟಿಸಿರುವ ಮಾದರಿ ಉತ್ತರಗಳ ಮಾದರಿಯಲ್ಲಿ ಪ್ರತಿ ಪ್ರಶ್ನೆಪತ್ರಿಕೆಗಳಿಗೂ ಉತ್ತರ ಕೀಲಿಯನ್ನು ನೀಡಲಾಗಿದೆ. ಇದು ವಿದ್ಯಾರ್ಥಿಗಳ ಸ್ವ ಮೌಲ್ಯಮಾಪನಕ್ಕೆ ಹೆಚ್ಚು ಅನುಕೂಲಕರವಾಗಿದೆ.

ಸದರಿ ಅಭ್ಯಾಸ ಪ್ರಶ್ನೆಪತ್ರಿಕೆಗಳನ್ನು ವಿವಿಧ ಕಾರ್ಯತಂತ್ರಗಳನ್ನು ಬಳಕೆ ಮಾಡಿ ವಿದ್ಯಾರ್ಥಿಗೆ ಅಭ್ಯಾಸ ಮಾಡಿಸಬಹುದಾಗಿದ್ದು, ಪ್ರತಿ ಅಭ್ಯಾಸ ಪ್ರಶ್ನೆಪತ್ರಿಕೆಯ ಬಳಕೆಯ ನಂತರ ವಿದ್ಯಾರ್ಥಿಗಳಿಗೆ ಹಿಮ್ಮಾಹಿತಿ ನೀಡಿ ಫಲಿತಾಂಶ ಸುಧಾರಣೆಗೆ ಶ್ರಮಿಸುವುದು.

ಸದರಿ "ಉತ್ತರ ಉನ್ನತಿ–2" ನೂತನ ಕೈಪಿಡಿಯು ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳ ಅಭ್ಯಾಸಕ್ಕಾಗಿ ಪ್ರಕಟಿಸುತ್ತಿರುವ ಅಭ್ಯಾಸ ಪ್ರಶ್ನೆಪತ್ರಿಕೆಗಳಾಗಿದ್ದು, ಈ ಸಾಹಿತ್ಯವನ್ನು ತರಲು ಸೂಕ್ತ ಮಾರ್ಗದರ್ಶನ ನೀಡಿದ ನಮ್ಮ ಜಿಲ್ಲೆಯ ಶೈಕ್ಷಣಿಕ ನಾಯಕರು ಆದಂತಹ ಶ್ರೀ ಲೋಹಿತೇಶ್ವರ ರೆಡ್ಡಿ ಕೆ.ಪಿ ರವರು, ಉಪನಿರ್ದೇಶಕರು (ಆಡಳಿತ)ರವರಿಗೆ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಅದರಂತೆ ಈ ಕಾರ್ಯದ ಪ್ರತಿ ಹಂತದಲ್ಲೂ ಅಗತ್ಯ ಸಲಹೆ, ಸಹಕಾರ ನೀಡಿ ಈ ಸುಂದರ ಹೊತ್ತಿಗೆ ಹೊರತರಲು ಪರಿಶ್ರಮಿಸಿದ ನಮ್ಮ ಕಚೇರಿ ಶಿಕ್ಷಣಾಧಿಕಾರಿಗಳು ಹಾಗೂ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು ಆದಂತಹ ಶ್ರೀ ರಮೇಶ ವಿ ರವರಿಗೂ, ಮತ್ತೊಬ್ಬ ಶಿಕ್ಷಣಾಧಿಕಾರಿಗಳಾದ ಪಂಕಜ ಜಿ ಸಿ ರವರಿಗೂ ಧನ್ಯವಾದಗಳು. ಇನ್ನೂ ನಮ್ಮ ಈ ಪರಿಶ್ರಮದಲ್ಲಿ ಜೊತೆಯಲ್ಲಿದ್ದು, ಸಹಕರಿಸಿದ ನಮ್ಮ ಕಚೇರಿಯ ಎಲ್ಲಾ ವಿಷಯ ಪರಿವೀಕ್ಷಕರಿಗೂ ಮುಖ್ಯವಾಗಿ ಕಳೆದ ಐದು ವರ್ಷಗಳಿಂದ ನಮ್ಮ ಕಚೇರಿಯ ಎಲ್ಲಾ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಕೈ ಜೋಡಿಸುತ್ತಿರುವ ಎಲ್ಲಾ ವಿಷಯ ಸಂಪನ್ಮೂಲ ಶಿಕ್ಷಕರಿಗೂ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ. ಈ ಸಾಹಿತ್ಯವನ್ನು ತಮ್ಮ ಉಪಯೋಗಕ್ಕೆ ನೀಡಲು ಆನಂದವೆನಿಸುತ್ತದೆ.

ವಂದನೆಗಳೊಂದಿಗೆ,

01.01.2024

ಬೆಂಗಳೂರು



ಮಂಜುನಾಥ.ಎನ್.ಎಸ್

## ❁ ಪರಿಕಲ್ಪನೆ ಮತ್ತು ಮಾರ್ಗದರ್ಶನ ❁

ಶ್ರೀ ಲೋಹಿತೇಶ್ವರ ರೆಡ್ಡಿ ಕೆ ಪಿ
ಉಪನಿರ್ದೇಶಕರು (ಆಡಳಿತ)
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

## ಸಲಹೆ ಮತು ಸಹಕಾರ

ಶ್ರೀ ರಮೇಶ್ ವಿ
ಶಿಕ್ಷಣಾಧಿಕಾರಿಗಳು ಹಾಗೂ ಜಿಲ್ಲಾ ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು
ಉಪನಿರ್ದೇಶಕರ ಕಚೇರಿ
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

ಶ್ರೀಮತಿ ಪಂಕಜ ಜಿ ಸಿ
ಶಿಕ್ಷಣಾಧಿಕಾರಿಗಳು
ಉಪನಿರ್ದೇಶಕರ ಕಚೇರಿ
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

## ಪರಿಶೀಲನೆ

ಮಂಜುನಾಥ.ಎನ್.ಎಸ್
ವಿಷಯ ಪರಿವೀಕ್ಷಕರು–ಸಮಾಜ ವಿಜ್ಞಾನ & ಕನ್ನಡ (ಹೆ.ಪ್ರ)
ಉಪನಿರ್ದೇಶಕರ ಕಚೇರಿ
ಶಾಲಾ ಶಿಕ್ಷಣ ಇಲಾಖೆ
ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

## ಸಂಪನ್ಮೂಲ ರಚನಾ ಸಮಿತಿ

1. ಈರಪ್ಪ ಮಹಾಲಿಂಗಪೂರ, ಸಹಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಪೋಲಿಸ್ ಕಾಲೋನಿ, ಉತ್ತರ ವಲಯ-1
2. ಉಮೇಶ್, ಸಹಶಿಕ್ಷಕರು, ಸರ್ಕಾರಿ ಪ್ರೌಢಶಾಲೆ, ಕೇತಮಾರನಹಳ್ಳಿ, ಉತ್ತರ ವಲಯ-1
3. ಶಿವಶಂಕರ ಬಿ ಬಿ, ಸಹಶಿಕ್ಷಕರು, ಸ.ಪ.ಪೂ.ಕಾಲೇಜು (ಪ್ರೌಢಶಾಲಾ ವಿಭಾಗ), ಯಲಹಂಕ, ಉತ್ತರ ವಲಯ–4
4. ಬಸವರಾಜ ತಳವಾರ್, ಸಹಶಿಕ್ಷಕರು, ಜ್ಯೋತಿ ಪ್ರೌಢಶಾಲೆ, ಕಾಚರಕನಹಳ್ಳಿ, ಉತ್ತರ ವಲಯ–03
5. ವಿಜಯಕುಮಾರ್ ಟಿ ಎಸ್, ಸಹಶಿಕ್ಷಕರು, ಅಂಬೇಡ್ಕರ್ ಸ್ಮಾರಕ ಪ್ರೌಢಶಾಲೆ,ಮಹಾಲಕ್ಷ್ಮೀಪುರಂ, ಉತ್ತರ ವಲಯ–1

## ತಾಂತ್ರಿಕ ಸಹಕಾರ

ಶ್ರೀ ಉಸ್ಸೈದ್ ಬೇಗ್, ಶಿಕ್ಷಣ ಸಂಯೋಜಕರು, ಉಪನಿರ್ದೇಶಕರ ಕಚೇರಿ, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ

# ಉತ್ತರ ಉನ್ನತಿ–2

## ಪ್ರಥಮ ಭಾಷೆ – ಕನ್ನಡ

**2024ರ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶವನ್ನು ಗುಣಾತ್ಮಕವಾಗಿ ಹೆಚ್ಚಿಸುವ ನಿಟ್ಟಿನಲ್ಲಿ ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳ ಕೈಪಿಡಿ**

## ಪರಿವಿಡಿ


| ಕ್ರ.ಸಂ | ವಿವರ | ಪುಟ ಸಂಖ್ಯೆ |
|---|---|---|
| **1** | ಅಭ್ಯಾಸ ಪತ್ರಿಕೆ – 01 | 01 – 04 |
| | ಮಾದರಿ ಉತ್ತರಗಳು– ಅಭ್ಯಾಸ ಪತ್ರಿಕೆ – 01 | 05 – 26 |
| **2** | ಅಭ್ಯಾಸ ಪತ್ರಿಕೆ – 02 | 27 – 30 |
| | ಮಾದರಿ ಉತ್ತರಗಳು– ಅಭ್ಯಾಸ ಪತ್ರಿಕೆ – 02 | 31 – 49 |
| **3** | ಅಭ್ಯಾಸ ಪತ್ರಿಕೆ – 03 | 50 – 53 |
| | ಮಾದರಿ ಉತ್ತರಗಳು– ಅಭ್ಯಾಸ ಪತ್ರಿಕೆ – 03 | 54 - 72 |
| **4** | ಅಭ್ಯಾಸ ಪತ್ರಿಕೆ – 04 | 73 - 76 |
| | ಮಾದರಿ ಉತ್ತರಗಳು– ಅಭ್ಯಾಸ ಪತ್ರಿಕೆ – 04 | 77 – 92 |
| **5** | ಅಭ್ಯಾಸ ಪತ್ರಿಕೆ – 05 | 93 - 96 |
| | ಮಾದರಿ ಉತ್ತರಗಳು– ಅಭ್ಯಾಸ ಪತ್ರಿಕೆ – 05 | 97 – 111 |

# ಉಪನಿರ್ದೇಶಕರು (ಆಡಳಿತ) ರವರ ಕಚೇರಿ
# ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

## 2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು

## ವಿಷಯ : ಪ್ರಥಮ ಭಾಷೆ – ಕನ್ನಡ (01–K)

**ಅವಧಿ : 3 ಗಂಟೆ 15 ನಿಮಿಷ    ಅಭ್ಯಾಸ ಪತ್ರಿಕೆ – 01    ಗರಿಷ್ಠ ಅಂಕಗಳು : 100**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 6 x 1 = 6**

**1. 'ಮುಕ್ಕಣ್ಣು' ಪದ ಈ ಸಮಾಸಕ್ಕೆ ಉದಾಹರಣೆಯಾಗಿದೆ:**

A. ತತ್ಪುರುಷ ಸಮಾಸ B. ದ್ವಿಗು ಸಮಾಸ C. ಗಮಕ ಸಮಾಸ D. ಕ್ರಿಯಾ ಸಮಾಸ

**2. ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಬಳಸುವ ಲೇಖನ ಚಿಹ್ನೆ ಇದು:**

A. ಉದ್ಧರಣ B. ಅರ್ಧವಿರಾಮ C. ಅಲ್ಪವಿರಾಮ D. ಭಾವಸೂಚಕ

**3. ಹಳಗನ್ನಡದ ಸಪ್ತಮಿ ವಿಭಕ್ತಿ ಪ್ರತ್ಯಯವಿದು:**

A. ಇಂದಂ B. ಅನ್ನು C. ಅತ್ತಣಿಂ D. ಒಳ್

**4. 'ಚೆನ್ನಾಗಿ' ಎಂಬ ಪದ ಈ ಅವ್ಯಯಕ್ಕೆ ಉದಾಹರಣೆಯಾಗಿದೆ :**

A. ಅನುಕರಣಾವ್ಯಯ B. ಸಾಮಾನ್ಯಾರ್ಥಕಾವ್ಯಯ C. ಕ್ರಿಯಾರ್ಥಕಾವ್ಯಯ D. ಭಾವಸೂಚಕಾವ್ಯಯ

**5. 'ಸಿಡದ್ಹಾಂಗ' ಪದದ ಗ್ರಾಂಥಿಕ ರೂಪವಿದು:**

A. ಸಿಡಿದಂತೆ B. ಸಿಡಿದುದು C. ಸಿಡಿದಹಾಗೆ D. ಸಿಡದಹಾಂಗ

**6. ಇವುಗಳಲ್ಲಿ ನಿಷೇಧಾರ್ಥಕ ಕ್ರಿಯಾರೂಪವಿದು:**

A. ಮಾಡೀತು B. ಮಾಡದು C. ಮಾಡಲಿ D. ಮಾಡಿಯಾವು

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4 x 1 = 4**

7. ಕವಿ : ಕಬ್ಬಿಗ : : ದೃಷ್ಟಿ : ________

8. ಸ್ವರಗಳು : ಹದಿಮೂರು : : ಯೋಗವಾಹಗಳು : ________

9. ಬಳಿ : ದಾರಿ : : ಪೆರೆ : ________

10. ಮೈದೋರು : ಆದೇಶಸಂಧಿ : : ಸಂಪನ್ನರಾದ : ________

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7 x 1 = 7**

11. ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು?
12. ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು?
13. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
14. 'ವೆಸ್ಟ್ ಮಿನ್‌ಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?
15. ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಯಾರಿಗೆ ಹೇಳುವನು?
16. ಯಜ್ಞಾಶ್ವವನ್ನು ಕಟ್ಟಿದವರು ಯಾರು?
17. ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10 x 2 = 20**

18. ಗುರೂಪದೇಶವು ಯಾರಿಗೆ ಮೆಚ್ಚಿಕೆಯಾಗುವುದಿಲ್ಲ? ಯಾಕೆ? ತಿಳಿಸಿ.
19. ಗುರೂಪದೇಶದ ಗುಣಗಳನ್ನು ಪಟ್ಟಿಮಾಡಿ.
20. ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು?
21. ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು?
22. ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?
23. ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?
24. ಭಗತ್ ಸಿಂಗ್‌ನ ಕುಟುಂಬದ ಸದಸ್ಯರಿಗೆ ಬಹಳ ಆತಂಕವಾಗಿತ್ತು ಏಕೆ?
25. ಸ್ವಾತಂತ್ರ್ಯಪೂರ್ವದಲ್ಲಿ ಹೋರಾಟಗಾರರು ಗಿರಾಕಿಗಳು ಮತ್ತು ಅಂಗಡಿಯವರನ್ನು ಏನೆಂದು ವಿನಂತಿಸಿಕೊಂಡರು?
26. ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು?
27. ಯಾರ್‍ಯಾರಿಗೆ ವಸಂತ ಮುಖ ತೋರಲಿಲ್ಲ?

**V. ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 x 3 = 6**

28. ಪು.ತಿ. ನರಸಿಂಹಾಚಾರ್
29. ಪಂಪ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಅತಿಕುಟಿಲಮನಂ ಧನಲು
ಬ್ಧತೆಯಿಂದಂ ದುಷ್ಟಬುದ್ಧಿ ನುಡಿದಂ ಪುಸಿಯಂ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ. ಲಕ್ಷಣ ಬರೆದು ಸಮನ್ವಯಗೊಳಿಸಿ. 1 x 3 = 3**

31. ಸೀತೆಯ ಮುಖಕಮಲ ಅರಳಿತು

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.**

32. ಕೈ ಕೆಸರಾದರೆ ಬಾಯಿ ಮೊಸರು **1 x 3 = 3**

**ಅಥವಾ**

ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x 3 = 18**

33. "ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ"
34. "ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ"
35. "ಪೊನ್ನನೆಲ್ಲಮಂ ನೀನೆ ಕೊಂಡೆ"
36. "ಸಾರ್ವಭೌಮರಾ ನೆತ್ತಿಯ ಕುಕ್ಕಿ"
37. "ಹಸುರಾದುದು ಕವಿಯಾತ್ಮಂ"
38. "ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 x 4 = 4**

39. ಕಲುಷಿತವಾದೀ ________ **ಅಥವಾ** ಮತಗಳೆಲ್ಲವೂ ________

________ ________

________ ________

________ ಮುಟ್ಟೋಣ. ________ಬಿತ್ತೋಣ.

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1 x 4 = 4**

40. ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ ।

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 4 = 8**

41. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು? ವಿವರಿಸಿ.

**ಅಥವಾ**

ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.

42. ಹಲಗಲಿ ದಂಗೆಗೆ ಕಾರಣವೇನು? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?

**ಅಥವಾ**

ಹಲಗಲಿ ದಂಗೆಯ ಪರಿಣಾಮವೇನು? ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1 x 4 = 4 (2 + 2)**

ನಮ್ಮ ದೇಶ ನೂರಾರು ವರ್ಷಗಳಿಂದ ಎದುರಿಸುತ್ತಿರುವ ಜಟಿಲಾತಿಜಟಿಲವಾದ ಸಮಸ್ಯೆಗಳನ್ನು ಸಹ ವೈಜ್ಞಾನಿಕ ಮಾರ್ಗಗಳಿಂದ ಪರಿಹರಿಸಲು ಸಾಧ್ಯವಿದೆ. ನಮ್ಮ ಸಮಾಜ ಎದುರಿಸುತ್ತಿರುವ ಜಾತಿಯಂತಹ ಸಾಮಾಜಿಕ ಪಿಡುಗುಗಳ ಪರಿಹಾರವೂ ಸಹ ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವಗಳಿಂದ ಸಾಧ್ಯ.

ವಿಶ್ವಮಾನ್ಯತೆಯನ್ನು ಹೊಂದಿದ ವಿಜ್ಞಾನದ ತತ್ವಗಳನ್ನು ಅನ್ವಯಿಸಿಕೊಳ್ಳುವುದರಿಂದ ಮಾನವೀಯ ಮೌಲ್ಯ ಹಾಗೂ ನೀತಿಯಾಧರಿತ ವಿಶ್ವಧರ್ಮ ರೂಪಿತವಾಗಬಲ್ಲದು. ವಿಜ್ಞಾನದ ಯಾವುದೇ ವಿಭಾಗ ಸಮಾಜದ ಒಳಿತಿಗಾಗಿ ನೆರವಾಗಬಲ್ಲದು. ವಿಶೇಷವಾಗಿ ರಸಾಯನಶಾಸ್ತ್ರ ಜೀವನದ ಅನೇಖ ಕ್ಷೇತ್ರಗಳಲ್ಲಿ ಬಳಕೆಯಾಗಿರುವುದು ಕಂಡುಬರುತ್ತದೆ. ರಸಾಯನಿಕ ಕ್ರಿಯೆಗಳಿಲ್ಲದ ಕಾರ್ಯಗಳೇ ಅಪರೂಪ. ವಿಜ್ಞಾನದ ಈ ವಿಭಾಗಗಳಲ್ಲಿ ಆಳವಾದ ಸಂಶೋಧನೆಗಳು ನಡೆದು ಮನುಕುಲದ ಪ್ರಗತಿಗೆ ಕಾರಣೀಭೂತವಾಗಬೇಕಿದೆ. ವಿಜ್ಞಾನಿಗಳು ತಮ್ಮ ಅಮೂಲ್ಯವಾದ ಜ್ಞಾನವನ್ನು ಸಾಮಾನ್ಯ ಜನರ ಮನೋಭಾವನೆಗಳನ್ನು ತಿದ್ದುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಸಮಾಜದ ಸುಧಾರಣಗೆ ನೆರವಾಗಬೇಕು. ವಿಜ್ಞಾನಿಗಳು ಹಲವಾರು ಸಂಧರ್ಭಗಳಲ್ಲಿ ಪರಸ್ಪರ ವೈರುಧ್ಯದ ಮನೋಭಾವವನ್ನು ವ್ಯಕ್ತಪಡಿಸುತ್ತಿರುತ್ತಾರೆ. ಅವರು ಪ್ರಯೋಗಶಾಲೆಯಲ್ಲಿ ತಮ್ಮ ಹೆಚ್ಚಿನ ವಿಚಾರ ಶಕ್ತಿಯನ್ನು, ವೈಜ್ಞಾನಿಕ ಮನೋಭಾವನ್ನು ಪ್ರದರ್ಶಿಸುತ್ತಾರೆ. ಆದರೆ ನಿಜ ಜೀವನದಲ್ಲಿ ಅವರ ಯೋಚನಾ ಶಕ್ತಿ ರಜೆ ತೆಗೆದುಕೊಂಡಿದಿಯೋ ಎಂಬಂತೆ ವರ್ತಿಸುತ್ತಾರೆ. ತರಗತಿಯಲ್ಲಿ ಡಾರ್ವಿನನ ಸಿದ್ಧಾಂತವನ್ನು ವೈಜ್ಞಾನಿಕವಾಗಿ ಬೋಧಿಸುತ್ತಾನೆ. ಆದರೆ ಅದೇ ವ್ಯಕ್ತಿ ಗುಡಿ, ಚರ್ಚು, ಮಸೀದಿಗಳಲ್ಲಿ ಯಾವುದೇ ಸಂಕೋಚವಿಲ್ಲದೆ ವಿಜ್ಞಾನಕ್ಕೆ ಅಸಂಗತವಾದ ವಿಕಾಸವಾದವನ್ನು ನಂಬಿಕೆಯ ಮೂಲಕ ಬೋಧಿಸುತ್ತಾನೆ. ಬಹುತೇಕ ವಿಜ್ಞಾನಿಗಳು ಪಾಠ ಹೇಳತ್ತಾ ಹಸ್ತಮುದ್ರಿಕೆಯನ್ನು ನಂಬುವುದು ಉಂಟು.

**ಪ್ರಶ್ನೆಗಳು :**

43. ಅ) ವಿಜ್ಞಾನಿಗಳು ಯಾವ ರೀತಿಯಾಗಿ ವೈರುಧ್ಯ ಭಾವನೆಗಳನ್ನು ವ್ಯಕ್ತಪಡಿಸುತ್ತಿರುತ್ತಾರೆ.?
    ಆ) ನೀತಿಯಾಧರಿತ ವಿಶ್ವಧರ್ಮ ಯಾವಾಗ ರೂಪಿತವಾಗಬಲ್ಲದು ?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 x 5 = 5**

44. ನಿಮ್ಮನ್ನು ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ವೆಂಕಟೇಶ್' ಎಂದು ಭಾವಿಸಿ ಕೊಂಡು ಬರಗಾಲ ಉಂಟಾದ ನಿಮಿತ್ಯ ಪರಿಹಾರ ನೀಡಬೇಕೆಂದು ನಿಮ್ಮ ಜಿಲ್ಲಾಧಿಕಾರಿಗಳಿಗೊಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಶಿವಶಂಕರ' ಎಂದು ಭಾವಿಸಿಕೊಂಡು ನಿಮ್ಮ ಪರೀಕ್ಷಾ ಸಿದ್ಧತೆಯನ್ನು ಕುರಿತು ರಾಮನಗರದಲ್ಲಿರುವ ನಿಮ್ಮ ದೊಡ್ಡಪ್ಪನವರಿಗೆ ಒಂದು ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1 x 5 = 5**

45. ರಾಷ್ಟ್ರೀಯ ಭಾವೈಕ್ಯತೆ

**ಅಥವಾ**

ಸಾಮಾಜಿಕ ಪಿಡುಗುಗಳು

# ಉಪನಿರ್ದೇಶಕರು (ಆಡಳಿತ) ರವರ ಕಚೇರಿ
# ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

## 2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ
## ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು
## ವಿಷಯ : ಪ್ರಥಮ ಭಾಷೆ – ಕನ್ನಡ (01–K)

**ಅವಧಿ : 3 ಗಂಟೆ 15 ನಿಮಿಷ      ಅಭ್ಯಾಸ ಪತ್ರಿಕೆ – 01      ಗರಿಷ್ಠ ಅಂಕಗಳು : 100**

## ಮಾದರಿ ಉತ್ತರಗಳು

| ಕ್ರ. ಸಂ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.<br><br>ಅಂಕ ಸೂಚಿ : ಪ್ರತಿ ಸರಿಯುತ್ತರಕ್ಕೆ 1 ಅಂಕ ನೀಡುವುದು. | **6 x 1 = 6** |
| 1. | ‘ಮುಕ್ಕಣ್ಣು’ ಪದ ಈ ಸಮಾಸಕ್ಕೆ ಉದಾಹರಣೆಯಾಗಿದೆ:<br>A. ತತ್ಪುರುಷ ಸಮಾಸ    B. ದ್ವಿಗು ಸಮಾಸ<br>C. ಗಮಕ ಸಮಾಸ    D. ಕ್ರಿಯಾ ಸಮಾಸ<br>ಉತ್ತರ : **B. ದ್ವಿಗು ಸಮಾಸ** | |
| 2. | ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಬಳಸುವ ಲೇಖನ ಚಿಹ್ನೆ ಇದು:<br>A. ಉದ್ಧರಣ    B. ಅರ್ಧವಿರಾಮ<br>C. ಅಲ್ಪವಿರಾಮ    D. ಭಾವಸೂಚಕ<br>ಉತ್ತರ : **B. ಅರ್ಧವಿರಾಮ** | |

| | | |
|---|---|---|
| 3. | **ಹಳಗನ್ನಡದ ಸಪ್ತಮಿ ವಿಭಕ್ತಿ ಪ್ರತ್ಯಯವಿದು:**<br>A. ಇಂದಂ B. ಅನ್ನು<br>C. ಅತ್ತಣಿಂ D. ಒಳ್<br>**ಉತ್ತರ : D. ಒಳ್** | |
| 4. | **'ಚೆನ್ನಾಗಿ' ಎಂಬ ಪದ ಈ ಅವ್ಯಯಕ್ಕೆ ಉದಾಹರಣೆಯಾಗಿದೆ :**<br>A. ಅನುಕರಣಾವ್ಯಯ B. ಸಾಮಾನ್ಯಾರ್ಥಕಾವ್ಯಯ<br>C. ಕ್ರಿಯಾರ್ಥಕಾವ್ಯಯ D. ಭಾವಸೂಚಕಾವ್ಯಯ<br>**ಉತ್ತರ : B. ಸಾಮಾನ್ಯಾರ್ಥಕಾವ್ಯಯ** | |
| 5. | **'ಸಿಡದ್ಹಾಂಗ' ಪದದ ಗ್ರಾಂಥಿಕ ರೂಪವಿದು:**<br>A. ಸಿಡಿದಂತೆ B. ಸಿಡಿದುದು<br>C. ಸಿಡಿದ ಹಾಗೆ D. ಸಿಡದಹಾಂಗ<br>**ಉತ್ತರ : C. ಸಿಡಿದ ಹಾಗೆ** | |
| 6. | **ಇವುಗಳಲ್ಲಿ ನಿಷೇಧಾರ್ಥಕ ಕ್ರಿಯಾರೂಪವಿದು:**<br>A. ಮಾಡೀತು B. ಮಾಡದು<br>C. ಮಾಡಲಿ D. ಮಾಡಿಯಾವು<br>**ಉತ್ತರ : B. ಮಾಡದು** | |

| | | |
|---|---|---|
| **II.** | **ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿ ಹೊಂದುವ ಸಂಬಂಧೀ ಪದವನ್ನು ಬರೆಯಿರಿ.** | **4 x 1 = 4** |
| **7.** | ಕವಿ : ಕಬ್ಬಿಗ : : ದೃಷ್ಟಿ : **ದಿಟ್ಟಿ** | |
| **8.** | ಸ್ವರಗಳು : ಹದಿಮೂರು : : ಯೋಗವಾಹಗಳು : **ಎರಡು** | |
| **9.** | ಬಳಿ : ದಾರಿ : : ಪೆರೆ : **ಚಂದ್ರ** | |
| **10.** | ಮೈದೋರು : ಆದೇಶಸಂಧಿ : : ಸಂಪನ್ನರಾದ : **ಲೋಪ ಸಂಧಿ** | |
| **III.** | **ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**<br><br>**ಅಂಕ ಸೂಚಿ : ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿಯುತ್ತರಕ್ಕೆ 1 ಅಂಕ ನೀಡುವುದು** | **7 x 1 = 7** |
| 11. | **ಧರ್ಮಾಧಿಕರಣರು ಏಕೆ ವಿಸ್ಮಯ ಹೊಂದಿದರು?**<br>**ಉತ್ತರ:** ದುಷ್ಟಬುದ್ಧಿಯು **ವಟವೃಕ್ಷವೇ ಸಾಕ್ಷಿ** ಎಂದು ಹೇಳಿದ್ದನ್ನು ಕೇಳಿ ಧರ್ಮಾಧಿಕರಣರು ವಿಸ್ಮಯ ಹೊಂದಿದರು. | |
| 12. | **ಸುಕುಮಾರಸ್ವಾಮಿಗೆ ಯಾವ ಪಟ್ಟವನ್ನು ಕಟ್ಟಲಾಯಿತು?**<br>**ಉತ್ತರ:** ಸುಕುಮಾರಸ್ವಾಮಿಗೆ **ಸೆಟ್ಟಿಯ ಪಟ್ಟವನ್ನು** ಕಟ್ಟಲಾಯಿತು. | |
| 13. | **ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?**<br>**ಉತ್ತರ:** ಶ್ರೀರಾಮನಿಗೆ ಸಮರ್ಪಿಸಲು ಶಬರಿ ಪರಿಮಳದ ಹೂವು, ಮಧುಪರ್ಕ ಮತ್ತು ರುಚಿಕರವಾದ ಹಣ್ಣು ಹಂಪಲು ಸಂಗ್ರಹಿಸಿದ್ದಳು. | |
| 14. | **'ವೆಸ್ಟ್ ಮಿನ್‌ಸ್ಟರ್ ಅಬೆ' ಯಾರ ಸ್ಮಾರಕವಾಗಿದೆ?**<br>**ಉತ್ತರ: '**ವೆಸ್ಟ್ ಮಿನ್‌ಸ್ಟರ್ ಅಬೆ**'** ದಿವಂಗತರಾದ **ಸಂತರ, ಸಾರ್ವಭೌಮರ** ಹಾಗೂ **ಕವಿಪುಂಗವರ** ಸ್ಮಾರಕವಾಗಿದೆ. | |
| 15. | **ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನ ಯಾರಿಗೆ ಹೇಳುವನು?**<br>**ಉತ್ತರ:** ನಿಮಗೆ ನಮಸ್ಕರಿಸಿ ಹೋಗಲು ಬಂದೆನಷ್ಟೇ ಎಂದು ದುರ್ಯೋಧನನು **ಭೀಷ್ಮನಿಗೆ** ಹೇಳುವನು. | |

| | | |
|---|---|---|
| 16. | **ಯಜ್ಞಾಶ್ವವನ್ನು ಕಟ್ಟಿದವರು ಯಾರು?**<br>**ಉತ್ತರ:** ಯಜ್ಞಾಶ್ವವನ್ನು ಕಟ್ಟಿದವನು **ಲವ.** | |
| 17. | **ರಾಜಕೀಯ ಸ್ವಾತಂತ್ರ್ಯದ ಮಹತ್ವವೇನು?**<br>**ಉತ್ತರ:** ರಾಜಕೀಯ ಸ್ವಾತಂತ್ರ್ಯದ ಮಹತ್ತ್ವವೆಂದರೆ ಆಯ್ಕೆಯಾದ ವ್ಯಕ್ತಿಗೆ ಶಾಸನಗಳನ್ನು ರಚಿಸುವುದರಲ್ಲಿ, ಸರಕಾರಗಳ ಸ್ಥಾಪನೆ, ವಿಸರ್ಜನೆಗಳಲ್ಲಿ ಪಾಲು ಇರುವ ಹಕ್ಕಿನಲ್ಲಿ ಎಂದು ಹೇಳಬಹುದು. | |
| **IV.** | **ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**<br>**ಅಂಕ ಸೂಚಿ : ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳನ್ನು ನೀಡುವುದು.** | |
| **18.** | **ಗುರೂಪದೇಶವು ಯಾರಿಗೆ ಮೆಚ್ಚಿಕೆಯಾಗುವುದಿಲ್ಲ? ಯಾಕೆ? ತಿಳಿಸಿ.**<br>**ಉತ್ತರ:** ಮೂರ್ಖರು ಮತ್ತು ರಾಜಮನೆತನದಲ್ಲಿ ಹುಟ್ಟಿದವರಿಗೆ ಗುರೂಪದೇಶವು ಮೆಚ್ಚಿಕೆಯಾಗುವುದಿಲ್ಲ. ಏಕೆಂದರೆ ಮೂರ್ಖನ ಕಿವಿಗೆ ಅದು ಒಂದು ಹೊರೆ. ಅಂಥವರ ಕಿವಿಯೊಳಗೆ ಹಿತವಚನ ಹೊಕ್ಕಾಗ ತಿಳಿನೀರು ಹೊಕ್ಕಂತೆ ಸಂಕಟಪಟ್ಟುಕೊಳ್ಳುತ್ತಾರೆ. ರಾಜರ ಮನೆತನದಲ್ಲಿ ಹುಟ್ಟಿದರೆ ಸಾಕು. ಅಹಂಕಾರದಿಂದ ಅವರ ಕಿವಿ ಕಿವುಡಾಗಿಬಿಡುತ್ತದೆ. ಎಂಥ ಉಪದೇಶವೂ ಅವರ ಕಿವಿಗೆ ನಾಟುವುದಿಲ್ಲ. "ತನಗೆ ಉಪದೇಶಿಸಬೇಕಾದ್ದು ಏನೂ ಉಳಿದಿಲ್ಲ" ಎನ್ನುವಂಥ ಭಾವ ಹೊಂದಿರುವುದರಿಂದ ಗುರೂಪದೇಶವು ಇವರಿಗೆ ಮೆಚ್ಚಿಕೆಯಾಗುವುದಿಲ್ಲ. | |
| **19.** | **ಗುರೂಪದೇಶದ ಗುಣಗಳನ್ನು ಪಟ್ಟಿಮಾಡಿ.**<br>**ಉತ್ತರ:** ಗುರೂಪದೇಶ ಎಂದರೆ ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ 'ಮೀಹ'(ಸ್ನಾನ). ತಲೆ ನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು; ಬೊಜ್ಜು ಬೆಳೆಯದೆ ಬರುವ ಗುರುತ್ವ; ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ; ಪಂಜು ಇಲ್ಲದೆ ಬೆಳಗುವ ಬೆಳಕು; ಉದ್ವೇಗ ಬರಿಸದ ಜಾಗರಣೆ. | **10x2= 20** |
| **20.** | **ಅರಸ ವೃಷಭಾಂಕನು ಆಶ್ಚರ್ಯಗೊಳ್ಳಲು ಕಾರಣವೇನು?**<br>**ಉತ್ತರ:–** ಒಂದು ದಿನ ರತ್ನದೀಪದಿಂದ ಬಂದ ವ್ಯಾಪಾರಿಯೊಬ್ಬ ಲಕ್ಷ ದೀನಾರುಗಳ ಬೆಲೆಯುಳ್ಳ ಸರ್ವರತ್ನ ಕಂಬಳಿಗಳನ್ನು ತಂದು ಉಜ್ಜೇನಿ ಅರಸನಾದ ವೃಷಭಾಂಕನಿಗೆ ತೋರಿಸಿದಾಗ ಅವನು ಅದರ ಬೆಲೆಯನ್ನು ಕೇಳಿಕೊಳ್ಳಲಾಗದೆ ಹಿಂದಕ್ಕೆ ಕಳುಹಿಸಿದನು. ಆಗ ಆ ವ್ಯಾಪಾರಿಯು ಆ ರತ್ನಕಂಬಳಿಗಳನ್ನು ಯಶೋಭದ್ರೆಗೆ ತೋರಿಸಿದಾಗ ಅವಳು ಲಕ್ಷ ದೀನಾರುಗಳನ್ನು ಕೊಟ್ಟು ಕೊಂಡುಕೊಂಡು ಅದನ್ನು ಮೂವತ್ತೆರಡು ತುಂಡುಗಳಾಗಿ ಮಾಡಿ ತನ್ನ ಸೊಸೆಯಂದಿರಿಗೆ ಹಂಚಿಕೊಟ್ಟಳು. ಅವಳ ಸೊಸೆಯರು ಅವುಗಳನ್ನು ತಮ್ಮ | |

| | | |
|---|---|---|
| | ಪಾದರಕ್ಷೆಗಳಿಗೆ ಹಾಕಿಕೊಂಡರು. ಇದನ್ನು ಕೇಳಿ ಉಜ್ಜೇನಿ ಅರಸ ವೃಷಭಾಂಕನು ಆಶ್ಚರ್ಯಗೊಂಡನು. | |
| 21. | **ಸುಕುಮಾರಸ್ವಾಮಿಯು ಹೇಗೆ ಸುಖಭೋಗಗಳನ್ನು ಅನುಭವಿಸುತ್ತಿದ್ದನು?**<br>**ಉತ್ತರ:–** ಸುಕುಮಾರಸ್ವಾಮಿಯು ಅತ್ಯಂತ ರೂಪಲಾವಣ್ಯ ಸೌಭಾಗ್ಯ ಕಾಂತಿಯಿಂದ ಕೂಡಿದ ಯುವಕನಾಗಿದ್ದನು. ಅವನಿಗೆ ಮೂವತ್ತೆರಡು ಲತಾಗೃಹಗಳಲ್ಲಿ ಅತ್ಯಂತ ರೂಪ ಲಾವಣ್ಯ ಸೌಭಾಗ್ಯ ಕಾಂತಿ ಹಾವಭಾವ ವಿಲಾಸ ಸೌಂದರ್ಯಗಳಿಗೆ ಒಡತಿಯರಾದ ದೇವಲೋಕದ ಅಪ್ಸರೆಯನ್ನು ಹೋಲುವಂತಹ ಮೂವತ್ತೆರಡು ಜನ ದಿವ್ಯರಾದ ಹೆಂಡತಿಯರು ಇದ್ದರು. ಅವನ ಮನೋರಂಜನೆಗಾಗಿ ಮೂವತ್ತೆರಡು ನೃತ್ಯಾಂಗನೆಯರು ನಾಟ್ಯವನ್ನು ಮಾಡುತ್ತಿದ್ದರು. ಅವನ ಬಳಿ ಮೂವತ್ತೆರಡು ಕೋಟಿ ಚಿನ್ನ, ಪಂಚರತ್ನಗಳು ಇದ್ದವು. ಇವುಗಳಿಂದ ಸುಕುಮಾರಸ್ವಾಮಿಯು ಸುಖಭೋಗಗಳನ್ನು ಅನುಭವಿಸುತ್ತಿದ್ದರು. | |
| 22. | **ಪಾರ್ಥ–ಭೀಮರ ಬಗೆಗೆ ದುರ್ಯೋಧನನ ಅಭಿಪ್ರಾಯವೇನು?**<br>**ಉತ್ತರ:–** ತನ್ನ ಪ್ರೀತಿಯ ಬಂಟನಾದ ಕರ್ಣನನ್ನು, ಪ್ರೀತಿಯ ತಮ್ಮನಾದ ದುಶ್ಯಾಸನನನ್ನು ಕೊಂದ ಅರ್ಜುನ ಭೀಮರನ್ನು ಕೊಲ್ಲುವ ತನಕ ಸಂಧಿಯನ್ನು ಮಾಡಿಕೊಳ್ಳುವುದಿಲ್ಲ" ಎಂಬುದೇ ದುರ್ಯೋಧನನ ಅಭಿಪ್ರಾಯವಾಗಿದೆ. | |
| 23. | **ಪರಶುರಾಮನು ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಡಲು ಕಾರಣವೇನು?**<br>**ಉತ್ತರ:–** ಪರಶುರಾಮನು ತನ್ನ ಆಸ್ತಿಯನು ಬೇಡಿದವರಿಗೆ ಕೊಟ್ಟಿದ್ದನು. ಭೂಮಂಡಲವನ್ನು ಗುರುವಿಗೆ ಕೊಟ್ಟಿದ್ದನು. ಈಗ ಅವನ ಬಳಿ ಒಂದು ಅಡಕೆಯೂ ಇರಲಿಲ್ಲ, ಚಿನ್ನದ ಪಾತ್ರೆಯೂ ಇರಲಿಲ್ಲ. ಆದುದರಿಂದ ಪರಶುರಾಮನು ದ್ರೋಣನಿಗೆ ಮಣ್ಣಿನ ಪಾತ್ರೆಯಲ್ಲಿ ಅರ್ಘ್ಯವನ್ನು ಕೊಟ್ಟನು. | |
| 24. | **ಭಗತ್ ಸಿಂಗ್‌ನ ಕುಟುಂಬದ ಸದಸ್ಯರಿಗೆ ಬಹಳ ಆತಂಕವಾಗಿತ್ತು ಏಕೆ?**<br>**ಉತ್ತರ :** ಎಲ್ಲ ಮಕ್ಕಳೂ ಸಂಜೆ ಶಾಲೆಯಿಂದ ಮನೆಗೆ ಬಂದಿದ್ದರು. ಆದರೆ, 12 ವರ್ಷದ ಬಾಲಕನಾದ ಭಗತ್ ಸಿಂಗ್ ಮಾತ್ರ ಮನೆಗೆ ಬಂದಿರಲಿಲ್ಲ ಹಾಗಾಗಿ ಭಗತ್ ಸಿಂಗ್‌ನ ಕುಟುಂಬದ ಸದಸ್ಯರಿಗೆ ಆತಂಕವಾಗಿತ್ತು. | |
| 25. | **ಸ್ವಾತಂತ್ರ್ಯಪೂರ್ವದಲ್ಲಿ ಹೋರಾಟಗಾರರು ಗಿರಾಕಿಗಳು ಮತ್ತು ಅಂಗಡಿಯವರನ್ನು ಏನೆಂದು ವಿನಂತಿಸಿಕೊಂಡರು?**<br>**ಉತ್ತರ:** "ಹಬ್ಬ, ಹುಣ್ಣಿಮೆಗಳು ಸಮೀಪಿಸಿದ ದಿನಗಳಲ್ಲಿ ಪರದೇಶಿ ವಸ್ತುಗಳನ್ನು ಕೊಳ್ಳುವುದು ಸರಿಯಲ್ಲ. ಬಣ್ಣದ ಕಾಗದ, ಗಾಜಿನ ಮಣಿಗಳು, ಬೇಗಡಿ, ಇಮಿಟೇಶನ್ ಮುತ್ತು, ತುರಾಯಿಗಳು ನಮ್ಮ ಹಿಂದುಸ್ತಾನದಂತಹ ಬಡದೇಶಕ್ಕೆ ಅನವಶ್ಯಕ. ಪಟಾಕಿ, ಧಡಾಕಿ, ನೆಲಗುಮ್ಮ ಮುಂತಾದ ವಸ್ತುಗಳು, ವಿದೇಶಿ ಎಂದು ಮಾರಲ್ಪಡುವ ಕರ್ಪೂರ, ಪರದೇಶಿ ಅತ್ತರುಗಳನ್ನು ಖರೀದಿಸಿ ದೇಶಕ್ಕೆ ಒದಗಿರುವ ಸಂಕಟ ಪರಂಪರೆಯನ್ನು ಯಾರೂ ಹೆಚ್ಚಿಸಬಾರದು! ದೇವರ ಪೂಜಾದಿಗಳನ್ನು ಶುದ್ಧ ಶುಭ್ರ ದೇಶೀ ವಸ್ತುಗಳಿಂದಲೇ ಮಾಡಿರಿ, | |

| | | |
|---|---|---|
| | ಪರದೇಶಿ ವಸ್ತುಗಳಿಂದ ದೇವರ ಮೂರ್ತಿಗಳನ್ನು ಭ್ರಷ್ಟ ಮಾಡಬೇಡಿರಿ!" – ಎಂದು ಸ್ವಾತಂತ್ರ್ಯಪೂರ್ವದಲ್ಲಿ ಹೋರಾಟಗಾರರು ಗಿರಾಕಿಗಳು ಮತ್ತು ಅಂಗಡಿಯವರನ್ನು ವಿನಂತಿಸಿಕೊಂಡರು. | |
| **26.** | **ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಏನೇನು ಸಿದ್ಧತೆಗಳಾಗುತ್ತಿದ್ದವು?**<br>**ಉತ್ತರ** : ಪೈಗಳ ತಮ್ಮನ ನೂಲುಮದುವೆಯ ದಿನ ಅಂಗಳದಲ್ಲಿ ಒಂದು ಕಡೆಯಲ್ಲಿ ಲಡ್ಡುಗೆಗಳನ್ನು ಕಟ್ಟುತ್ತಿದ್ದರು, ಮತ್ತೊಂದು ಕಡೆ ಮಂಡಿಗೆಗಳನ್ನು ಮಡುಚುತ್ತಿದ್ದರು, ಬೇರೊಂದು ಕಡೆ ಸೇವಿಗೆಯನ್ನು ಒತ್ತುತ್ತಿದ್ದರು ಹೀಗೆ ಇನ್ನೂ ಮುಂತಾದ ಸಿದ್ಧತೆಗಳಾಗುತ್ತಿದ್ದವು. | |
| **27.** | **ವಸಂತ ಮುಖ ತೋರಲಿಲ್ಲ ಕವನದಲ್ಲಿ ಶ್ರಮಿಕರ ಬದುಕನ್ನು ಹೇಗೆ ಚಿತ್ರಿಸಲಾಗಿದೆ.?**<br>**ಉತ್ತರ:** ಕಮ್ಮಾರನ ಕುಲುಮೆ ಉರಿಯಲಿಲ್ಲ, ಕುಂಬಾರನ ತಿಗುರಿ (ಚಕ್ರ) ತಿರುಗಲಿಲ್ಲ, ನೇಕಾರನ ಮಗ್ಗ ಉಸಿರಾಡಲಿಲ್ಲ, ಕೇರಿಯ ಮಾರನ ಒಲೆ ಹೊತ್ತಲಿಲ್ಲ. ಇವರಾರಿಗೂ ವಸಂತ ಮುಖ ತೋರಲಿಲ್ಲ! ಅಂದರೆ ಇವರಾರಿಗೂ ಒಳ್ಳೆಯ ದಿನಗಳ ಬರಲಿಲ್ಲ, ಹಾಗೆಯೇ ಬಡವರಾಗಿಯೇ ಇದ್ದಾರೆ, ಶೋಷಣೆಯಿಂದ ಮುಕ್ತಿಹೊಂದಿಲ್ಲ. ಶ್ರಮಕ್ಕೆ ತಕ್ಕ ಫಲವಿಲ್ಲ ಎಂದು ಶ್ರಮಿಕರ ಬದುಕನ್ನು ಕುರಿತು ಮಾರ್ಮಿಕವಾಗಿ ಚಿತ್ರಿಸಲಾಗಿದೆ. | |
| **V.** | **ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**<br>**ಅಂಕ ಸೂಚಿ:**<br>**ಕಾಲ, ಸ್ಥಳ – 1 ಅಂಕ**<br>**ಕೃತಿಗಳು, ಪ್ರಶಸ್ತಿಗಳು/ಬಿರುದುಗಳು – 1 ಅಂಕ**<br>**ವಾಕ್ಯರೂಪ, ಭಾಷಾ ಶೈಲಿ – 1 ಅಂಕ** | **2 x 3 = 6** |
| **28.** | **ಪು.ತಿ. ನರಸಿಂಹಾಚಾರ್**<br>ಪು.ತಿ.ನ. ಕಾವ್ಯನಾಮದಿಂದ ಪ್ರಸಿದ್ಧರಾಗಿರುವ ಪುರೋಹಿತ ತಿರುನಾರಾಯಣಯ್ಯಂಗಾರ್ಯ ನರಸಿಂಹಾಚಾರ್ ಇವರು **ಕ್ರಿ.ಶ. 1905**ರಲ್ಲಿ **ಮಂಡ್ಯ ಜಿಲ್ಲೆಯ ಮೇಲುಕೋಟೆ** ಎಂಬ ಊರಿನಲ್ಲಿ ಜನಿಸಿದ್ದಾರೆ.<br>ಇವರು **ಶಬರಿ, ಅಹಲ್ಯೆ, ಗೋಕುಲ ನಿರ್ಗಮನ, ವಿಕಟಕವಿವಿಜಯ, ಹಂಸದಮಯಂತಿ ಮತ್ತು ಇತರ ರೂಪಕಗಳು, ಹಣತೆ, ರಸಸರಸ್ವತಿ, ಗಣೇಶದರ್ಶನ, ಶಾರದಯಾಮಿನಿ, ಶ್ರೀಹರಿಚರಿತೆ, ರಥಸಪ್ತಮಿ** ಮುಂತಾದ ಕೃತಿಗಳನ್ನು ರಚಿಸಿದ್ದಾರೆ.<br>ಇವರ **ಹಂಸದಮಯಂತಿ ಮತ್ತು ಇತರ ರೂಪಕಗಳು** ಕೃತಿಗೆ **'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ'** ಹಾಗೂ **ಶ್ರೀಹರಿಚರಿತೆ** ಕಾವ್ಯಕ್ಕೆ **'ಪಂಪ ಪ್ರಶಸ್ತಿ'** ಗಳನ್ನು ಪಡೆದಿದ್ದಾರೆ. | |

**29.** **ಪಂಪ**

ಕನ್ನಡದ ಆದಿಕವಿ ಎನಿಸಿಕೊಂಡ ಮಹಾಕವಿ ಪಂಪನು **ಕ್ರಿ.ಶ.ಸುಮಾರು 902**ರಲ್ಲಿ ವೆಂಗಿಮಂಡಲದ **ವೆಂಗಿಪಳು** ಎಂಬ ಅಗ್ರಹಾರದಲ್ಲಿ ಜನಿಸಿದನು.

ಚಾಲುಕ್ಯರ ದೊರೆ ಅರಿಕೇಸರಿಯ ಆಸ್ಥಾನ ಕವಿಯಾಗಿದ್ದ ಪಂಪನು **'ವಿಕ್ರಮಾರ್ಜುನ ವಿಜಯ ಮತ್ತು ಆದಿ ಪುರಾಣ'** ಎಂಬ ಮಹಾಕಾವ್ಯಗಳನ್ನು ರಚಿಸಿದ್ದಾನೆ.

ಕನ್ನಡದ ರತ್ನತ್ರಯರಲ್ಲಿ ಒಬ್ಬನಾಗಿದ್ದ ಈತನಿಗೆ **'ಸರಸ್ವತಿ ಮಣಿಹಾರ', 'ಸಂಸಾರ ಸಾರೋದಯ', 'ಕವಿತಾ ಗುಣಾರ್ಣವ'** ಎಂಬ ಬಿರುದುಗಳು ಇದ್ದವು.

**VI.** **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ.** **1 x 3 = 3**

**ಅಂಕ ಸೂಚಿ: ಪ್ರಸ್ತಾರ ಹಾಕುವುದು – 1 ಅಂಕ**
**ಗಣ ವಿಭಾಗ – 1 ಅಂಕ**
**ಛಂದಸ್ಸಿನ ಹೆಸರು – 1 ಅಂಕ**

**30.** **ಪುಟ್ಟಿದ ನೂರ್ವರುಮೆನ್ನೊಡ।**
**ವುಟ್ಟಿದ ನೂರ್ವರುಮಿದಿರ್ಚಿ ಸತ್ತೊಡೆ ಕೋಪಂ॥**

| 4 | 4 | 4 | = 12 |
|---|---|---|---|
| – ∪∪ | – ∪ ∪ | – ∪ ∪ | |
| ಪುಟ್ಟಿದ | ನೂರ್ವರು | ಮೆನ್ನೊಡ | |

| 4 | 4 | 4 | 4 | 4 | = 20 |
|---|---|---|---|---|---|
| – ∪∪ | – ∪ ∪ | ∪ – ∪ | – ∪ ∪ | – – | |
| ವುಟ್ಟಿದ | ನೂರ್ವರು | ಮಿದಿರ್ಚಿ | ಸತ್ತೊಡೆ | ಕೋಪಂ | |

**ಛಂದಸ್ಸು – ಕಂದ ಪದ್ಯ**

**VII.** **ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ.** **1 x 3 = 3**

**ಅಂಕಸೂಚಿ: ಅಲಂಕಾರದ ಹೆಸರು – 1 ಅಂಕ**
**ಲಕ್ಷಣ ಬರೆಯುವುದು – 1 ಅಂಕ**
**ಅಂಶಗಳನ್ನು ಗುರುತಿಸಿ ಸಮನ್ವಯಗೊಳಿಸುವುದು – 1 ಅಂಕ**

**31.**

**ಸೀತೆಯ ಮುಖಕಮಲ ಅರಳಿತು**

**ಅಲಂಕಾರ:– ರೂಪಕಾಲಂಕಾರ**

**ಲಕ್ಷಣ:–** ಉಪಮೇಯ ಮತ್ತು ಉಪಮಾನಗಳಿಗೆ ಅಭೇದತೆಯನ್ನು ಹೇಳುವುದು **ರೂಪಕ ಅಲಂಕಾರ.**

**ಉಪಮೇಯ:–** ಸೀತೆಯ ಮುಖ

**ಉಪಮಾನ:–** ಕಮಲ

**ಸಮನ್ವಯ:–** ಇಲ್ಲಿ ಉಪಮೇಯವಾದ ಸೀತೆಯ ಮುಖಕ್ಕೂ ಉಪಮಾನವಾದ ಕಮಲಕ್ಕೂ ಅಭೇದವಾಗಿ ರೂಪಿಸಿ ವರ್ಣಿಸಲಾಗಿದೆ. ಹಾಗಾಗಿ ಇದು ರೂಪಕ ಅಲಂಕಾರವಾಗಿದೆ.

**VIII.** **ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1 x 3 = 3**

**ಅಂಕ ಸೂಚಿ: ಗಾದೆಯ ಮಹತ್ವದ ವಿವರಣೆ – 1 ಅಂಕ**
**ಉದಾಹರಣೆಯೊಂದಿಗೆ ಅರ್ಥವಿವರಣೆ – 1 ಅಂಕ**
**ಭಾಷಾ ಶೈಲಿ ಮತ್ತು ಪದಬಂಧ – 1 ಅಂಕ**

**32.** **ಕೈ ಕೆಸರಾದರೆ ಬಾಯಿ ಮೊಸರು**

**ಅಥವಾ**

**ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ**

**ಕೈ ಕೆಸರಾದರೆ ಬಾಯಿ ಮೊಸರು**

ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತು ಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ **ಕೈ ಕೆಸರಾದರೆ ಬಾಯಿ ಮೊಸರು** ಎಂಬ ಗಾದೆಯು ಪ್ರಸಿದ್ಧವಾಗಿದೆ.

ಕರ್ಮವಿದ್ದಷ್ಟು ಫಲ ಎಂಬುದೊಂದು ಮಾತಿನಂತೆ ಕಷ್ಟಪಟ್ಟು ದುಡಿದರೆ ಮಾತ್ರ ಸುಖವಾಗಿ ಬಾಳು ಸಾಗಿಸ ಬಹುದು. ಮಂತ್ರದಿಂದ ಹಣ್ಣು ಉದುರಲು ಸಾಧ್ಯವಿಲ್ಲ. ಶಕ್ತಿ ಇಲ್ಲದೆ ನೆಡೆಯಲು ಸಾಧ್ಯವಿಲ್ಲ. ಹಾಗೆಯೇ ಕೈಮುಟ್ಟಿ ದುಡಿಯದಿದ್ದರೆ ಹೊಟ್ಟೆ ತುಂಬುವುದಿಲ್ಲ. ಕಷ್ಟಪಟ್ಟು ದುಡಿದರೆ ಹೊಟ್ಟೆ ತುಂಬುತ್ತದೆ. ರೈತನೊಬ್ಬ ಜಮೀನಿನಲ್ಲಿ ಕಷ್ಟಪಟ್ಟು ದುಡಿಯುತ್ತಾನೆ. ಫಲ ಬಂದಾಗ ಹಾಯಾಗಿ ಕುಳಿತು ಊಟ ಮಾಡಬಹುದು. ಅವನು ದುಡಿಯದಿದ್ದರೆ ಹೊಟ್ಟೆಗೆ ತಣ್ಣೀರ ಬಟ್ಟೆಯೇ ಗತಿ. ವಿದ್ಯಾರ್ಥಿಗಳು ಆಸಕ್ತಿಯಿಂದ ಕಷ್ಟಪಟ್ಟು ಓದಿದರೆ ಉತ್ತಮ ಅಂಕಗಳನ್ನು ಗಳಿಸಬಹುದೆಂದು ಹೇಳಬಹುದು. ಒಟ್ಟಿನಲ್ಲಿ ಕಷ್ಟಪಟ್ಟವರಿಗೆ ಸುಖಬಾಳು ಎಂಬುದನ್ನು ಮರೆಯಬಾರದು.

| | | |
|---|---|---|
| | **ಅಥವಾ**<br>**ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ**<br>ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿ ಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಈ ಮೇಲಿನ **ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ** ಎಂಬ ಗಾದೆಯು ಪ್ರಸಿದ್ಧವಾಗಿದೆ.<br>ಯಾವುದೇ ಕೆಲಸವನ್ನು ಸರಿಯಾಗಿ ಮಾಡಬೇಕಾದರೆ ಕಷ್ಟಪಡಬೇಕು. ಆದರೆ ಹಾಳು ಮಾಡಲು ಕಷ್ಟ ಪಡಬೇಕಾಗಿಯೂ ಇಲ್ಲ. **"ಕಟ್ಟುವುದು ಕಠಿಣ ಕೆಡವುಹುದು ಸುಲಭ"** ಎಂಬ ಗಾದೆಯು ಇದೆ ಅರ್ಥವನ್ನು ಹೋಲುತ್ತದೆ. ಒಬ್ಬ ಕುಂಬಾರ ಮಡಕೆಗಳನ್ನು ಮಾಡಲು ಮಣ್ಣು ತಂದು ಅರಳನ್ನು ಬೇರ್ಪಡಿಸಿ ಮಣ್ಣನ್ನು ಹದಮಾಡಿ ಕಷ್ಟಪಟ್ಟು ಮಡಿಕೆಯನ್ನು ಮಾಡುತ್ತಾನೆ. ಆದರೆ ಆ ಮಡಿಕೆಯನ್ನು ಒಡೆಯಲು ಒಂದು ದೊಣ್ಣೆ ಪೆಟ್ಟು ಸಾಕು. ಯಾವುದೇ ಒಂದು ಉತ್ತಮ ಕೆಲಸ ಮಾಡುವುದು ತುಂಬಾ ಕಠಿಣ. ಆದರೆ ಅದೇ ಕೆಲಸವನ್ನು ಹಾಳು ಮಾಡುವುದು ಸುಲಭ. ಪ್ರಾಚೀನ ಭಾರತೀಯರು ಕಠಿಣ ಶ್ರಮವಹಿಸಿ ಭಾರತದ ಪ್ರಾಚೀನ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಆದರೆ ವಿದೇಶಿಯರು ಒಂದು ಕ್ಷಣಮಾತ್ರದಲ್ಲಿ ವಾಸ್ತುಶಿಲ್ಪಗಳನ್ನು ಕೆಡವಿ ಹಾಕಿದರು. ಹಾಗೆಯೇ ಮನುಷ್ಯ ತನ್ನ ಉತ್ತಮವಾದ ಜೀವನದ ಭವಿಷ್ಯವನ್ನು, ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳಲು ಜೀವನವೆಲ್ಲ ಕಷ್ಟಪಡಬೇಕು. ಆದರೆ ವ್ಯಕ್ತಿತ್ವ ಹಾಳುಮಾಡಿಕೊಳ್ಳುವುದಕ್ಕೆ ಒಂದರಗಳಿಗೆ ಸಾಕು. ಒಂದು ಕೊಡ ಹಾಲು ಕೆಡಲು ತೊಟ್ಟು ಹುಳಿ ಸಾಕಲ್ಲವೇ? ಆದ್ದರಿಂದ ಮಾನವ ತನ್ನ ಘನತೆಯನ್ನರಿತು ಕಾರ್ಯನಿರ್ವಹಿಸಬೇಕು ಎಂಬುದನ್ನು ಪ್ರಸ್ತುತ ಗಾದೆಯು ತಿಳಿಸುತ್ತದೆ. | |
| **IX.** | **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**<br>**ಅಂಕ ಸೂಚಿ: ಆಯ್ಕೆ – 1 ಅಂಕ**<br>**ಸಂದರ್ಭ ಮತ್ತು ಸ್ವಾರಸ್ಯ – 1 ಅಂಕ**<br>**ವಾಕ್ಯರೂಪ, ಭಾಷಾ ಶೈಲಿ –1 ಅಂಕ** | **6x3 = 18** |
| **33.** | **"ನಿಮ್ಮ ದೇಶದ ಗೌರವವನ್ನು ಕಾಯಿರಿ! ಇದು ದೊಡ್ಡದಾದ ರಾಷ್ಟ್ರ"**<br>**ಆಯ್ಕೆ:–** ಈ ವಾಕ್ಯವನ್ನು ವಿ.ಕೃ. **ಗೋಕಾಕ್** ಅವರು ರಚಿಸಿರುವ **'ಸಮುದ್ರದಾಚೆಯಿಂದ'** ಎಂಬ ಪ್ರವಾಸಕಥನದಿಂದ ಆಯ್ದ **'ಲಂಡನ್ ನಗರ'** ಎಂಬ ಗದ್ಯಪಾಠದಿಂದ ಆರಿಸಿಕೊಳ್ಳಲಾಗಿದೆ.<br>**ಸಂದರ್ಭ:–** ಲೇಖಕರು ಲಂಡನ್ ನಗರದ ಟ್ರಾಫಲ್ಗಾರ್ ಸ್ಕ್ವೇರ್‌ನಲ್ಲಿರುವ ಶಿಲಾಮೂರ್ತಿಗಳ ದರ್ಶನ ಮಾಡಿದ ಸಂದರ್ಭದಲ್ಲಿ "ತಮ್ಮ ದೇಶಕ್ಕಾಗಿ ದುಡಿದ ಇತಿಹಾಸ ಪ್ರಸಿದ್ಧ ಪುರುಷರ ಶಿಲಾಪ್ರತಿಮೆಗಳು ಕೈಯೆತ್ತಿ ಈ ಮಾತನ್ನು ಹೇಳುತ್ತಿರುವಂತೆ ತೋರುತ್ತದೆ" ಎಂದು ಲೇಖಕರು ಹೇಳುತ್ತಾರೆ.<br>**ಸ್ವಾರಸ್ಯ:–** ಲಂಡನ್ ನಗರದ ಬೀದಿಬೀದಿಗೆ ಮೂಲೆಮೂಲೆಗೆ ಇರುವ ಇತಿಹಾಸ ಪ್ರಸಿದ್ಧ | |

| | | |
|---|---|---|
| | ಪುರುಷರ ಶಿಲಾಪ್ರತಿಮೆಗಳು ಇಂಗ್ಲೆಂಡ್ ದೇಶದ ಜನರ ರಾಷ್ಟ್ರಪ್ರೇಮ ಹಾಗೂ ಐತಿಹಾಸಿಕ ಪ್ರಜ್ಞೆಯ ದ್ಯೋತಕವಾಗಿದೆ ಎಂಬುದು ಈ ಮಾತಿನಲ್ಲಿ ಬಹುಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ. | |
| **34.** | **"ನನ್ನ ಮೊಮ್ಮಗುವಿನ ಹೆಣವಿದೆ ಅಲ್ಲಿ; ಅದನ್ನೂ ನೋಡಿ!"**<br>**ಆಯ್ಕೆ:** ಈ ವಾಕ್ಯವನ್ನು **ಶ್ರೀಮತಿ ಸಾರಾ ಅಬೂಬಕರ್** ಅವರು ರಚಿಸಿರುವ **'ಚಪ್ಪಲಿಗಳು'** ಕಥಾ ಸಂಕಲದಿಂದ ಆಯ್ದ **'ಯುದ್ಧ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.<br>**ಸಂದರ್ಭ:** ಶತ್ರು ದೇಶದ ಸೈನಿಕರು ತಮ್ಮ ದೇಶದ ಗಡಿಯೊಳಗೆ ಅವಿತಿರಬಹುದು ಎಂದು ಭಾವಿಸಿ, ಹುಡುಕುತ್ತ ಬಂದ ಸೈನಿಕರು ಮುದುಕಿಯ ಮನೆಯಲ್ಲಿ ಶೋಧನೆ ಮಾಡಲು ತೊಡಗಿದ ಸಂದರ್ಭದಲ್ಲಿ ಮುದುಕಿಯು ಈ ಮಾತನ್ನು ತನ್ನ ದೇಶದ ಸೈನಿಕರಿಗೆ ಹೇಳುತ್ತಾಳೆ.<br>**ಸ್ವಾರಸ್ಯ:** ಯುದ್ಧದಿಂದಾಗಿ ತನ್ನ ಮೊಮ್ಮಗುವನ್ನು ಉಳಿಸಿಕೊಳ್ಳಲು ಸಾಧ್ಯವಾಗದೆ ಹೋದುದರಿಂದ ದುಃಖಿತಗೊಂಡ ಮುದುಕಿಯು ಹೇಳುವ ಈ ಮಾತುಗಳು ಯುದ್ಧದಿಂದಾಗುವ ಅನಾಹುತಗಳ ಪರಂಪರೆಯನ್ನು ವ್ಯಂಗ್ಯ ಧ್ವನಿಯಾಗಿ ಅಭಿವ್ಯಕ್ತಪಡಿಸುತ್ತದೆ. | |
| **35.** | **"ಪೊನ್ನನೆಲ್ಲಮಂ ನೀನೆ ಕೊಂಡೆ"**<br>**ಆಯ್ಕೆ:** ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.<br>**ಸಂದರ್ಭ:** ದುಷ್ಟಬುದ್ಧಿಯು ಧರ್ಮಬುದ್ಧಿಯನ್ನು ಮೋಸಗೊಳಿಸಿ ಹೂತಿಟ್ಟ ಹೊನ್ನೆಲ್ಲವನ್ನು ತೆಗೆದುಕೊಂಡು ಗುಳಿಯನ್ನು ಮೊದಲಿನಂತೆ ಮುಚ್ಚಿ, ತಾನೇ ಧರ್ಮಬುದ್ಧಿಯ ಹತ್ತಿರ ಬಂದು "ಖರ್ಚಿಗೆ ಹೊನ್ನು ಇಲ್ಲ, ಸ್ವಲ್ಪ ಹೊನ್ನನ್ನು ತೆಗೆದುಕೊಳ್ಳೋಣ ಬಾ" ಎಂದು ಜೊತೆಯಲ್ಲಿ ಕರೆದುಕೊಂಡು ಹೋಗಿ, ಹೂತಿಟ್ಟ ಸ್ಥಳದಲ್ಲಿ ಹೊನ್ನನ್ನು ಕಾಣದೆ ಇದ್ದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.<br>**ಸ್ವಾರಸ್ಯ:** ದುಷ್ಟಬುದ್ಧಿಯು ಇನ್ನು ಮಾತನಾಡದಿದ್ದರೆ ಅಪವಾದವು ತನ್ನ ಮೇಲೆ ಬರುವುದೆಂದು, "ಹೊನ್ನೆಲ್ಲವನ್ನು ನೀನೆ ತೆಗೆದುಕೊಂಡಿದ್ದೀಯೆ" ಎಂದನು ಎಂದು ಕವಿ ಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾನೆ. | |
| **36.** | **"ಸಾರ್ವಭೌಮರಾ ನೆತ್ತಿಯ ಕುಕ್ಕಿ"**<br>**ಆಯ್ಕೆ:** ಈ ವಾಕ್ಯವನ್ನು ಕವಿ **'ಅಂಬಿಕಾತನಯದತ್ತ'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ.ರಾ.ಬೇಂದ್ರೆ ಅವರು ರಚಿಸಿರುವ **'ಗರಿ'** ಎಂಬ ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.<br>**ಸಂದರ್ಭ:** ಕವಿ ದ.ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ | |

| | | |
|---|---|---|
| | ನೆತ್ತಿಯನ್ನು ತುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ ಎಂಬ ಈ ಮಾತನ್ನು ಹೇಳುತ್ತಾರೆ.<br>**ಸ್ವಾರಸ್ಯ:** ಕಾಲದ ಗತಿಯಲ್ಲಿ ವೈಭವದಿಂದ, ಅಹಂಕಾರದಿಂದ ಮೆರೆದ ಸಾರ್ವಭೌಮರೆಲ್ಲರೂ ನಾಮಾವಶೇಷವಾಗಿದ್ದಾರೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ. | |
| **37.** | **“ಹಸುರಾದುದು ಕವಿಯಾತ್ಮಂ”**<br>**ಆಯ್ಕೆ:–** ಈ ವಾಕ್ಯವನ್ನು **‘ಕುವೆಂಪು’** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ** ಅವರು ರಚಿಸಿರುವ **‘ಪಕ್ಷಕಾಶಿ’** ಕವನ ಸಂಕಲನದಿಂದ ಆಯ್ದ **‘ಹಸುರು’** ಎಂಬ ಕವನದಿಂದ ಆರಿಸಲಾಗಿದೆ.<br>**ಸಂದರ್ಭ:–** ಕುವೆಂಪು ಅವರು ಕುಪ್ಪಳ್ಳಿಯ ಕವಿಶೈಲದಲ್ಲಿ ಆಶ್ವಯುಜ ಮಾಸದ ನವರಾತ್ರಿಯಲ್ಲಿ ಕುಳಿತು, ಆನಂದದಿಂದ ಸವಿದ ಪ್ರಕೃತಿಯ ಹಚ್ಚಹಸುರಿನ ಸೌಂದರ್ಯದ ನವರಾತ್ರಿಯಲ್ಲಿ ಮಾಡುವ ಸಂದರ್ಭದಲ್ಲಿ ಈ ಮಾತು ಬಂದಿದೆ.<br>**ಸ್ವಾರಸ್ಯ:–** ಆಶ್ವಯುಜ ಮಾಸದ ನವರಾತ್ರಿಯಲ್ಲಿ ಮಲೆನಾಡಿನ ಹಚ್ಚಹಸುರಿನ ನೋಟ ಕವಿಯ ಆತ್ಮವನ್ನು ಹಸುರಾಗಿಸಿ/ಶಾಂತವಾಗಿಸಿ ಆನಂದಾನುಭೂತಿಯನ್ನು ಅನುಭವಿಸುತ್ತಿತ್ತು ಎಂಬುದನ್ನು ಈ ನೋಡಿ ಭಾವಪೂರ್ಣವಾಗಿ ಅಭಿವ್ಯಕ್ತಪಡಿಸುತ್ತದೆ. | |
| **38.** | **“ತನ್ನ ಮಾತೆಯಂ ಸರ್ವಜನಮುಂ ಬಂಜೆಯೆನ್ನದಿರ್ದಪುದೆ”**<br>**ಆಯ್ಕೆ:–** ಈ ವಾಕ್ಯವನ್ನು **ಕವಿ ಲಕ್ಷ್ಮೀಶನು** ರಚಿಸಿರುವ **‘ಜೈಮಿನಿ ಭಾರತ’** ಮಹಾಕಾವ್ಯದಿಂದ ಆಯ್ದ **‘ವೀರಲವ’** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.<br>**ಸಂದರ್ಭ:** ಲವನು ತನ್ನ ಆಶ್ರಮದ ತೋಟವನ್ನು ಧ್ವಂಸ ಮಾಡಿದ ಶ್ರೀರಾಮನ ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯ ಬರಹವನ್ನು ಓದಿ ಅದನ್ನು ಕಟ್ಟಿಹಾಕಲು ನಿರ್ಧರಿಸಿದ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.<br>**ಸ್ವಾರಸ್ಯ:** ಕ್ಷತ್ರಿಯನಾದ ವೀರಲವನು ಬಾಲಕನಾದರೂ ಹೆದರದೆ ಕುದುರೆಯನ್ನು ಕಟ್ಟಲು ನಿರ್ಧರಿಸಿ, ತನ್ನ ವೀರತ್ವವನ್ನು ಪ್ರದರ್ಶಿಸುವುದು, ವೀರಕ್ಷತ್ರಿಯ ವಂಶದಿಂದ ಬಂದ ತನ್ನ ತಾಯಿಗೂ ಅವಮಾನ ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ. | |
| **X.** | **ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.**<br>**ಅಂಕಸೂಚಿ: ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣ ಸಾಲಿಗೆ – 1 ಅಂಕ** | **1 x 4 = 4** |

| | | |
|---|---|---|
| **39.** | ಕಲುಷಿತವಾದೀ ನದೀಜಲಗಳಿಗೆ<br>ಮುಂಗಾರಿನ ಮಳೆಯಾಗೋಣ.<br>ಬರಡಾಗಿರುವೀ ಕಾಡುಮೇಡುಗಳ<br>ವಸಂತವಾಗುತ ಮುಟ್ಟೋಣ.<br><br>**ಅಥವಾ**<br><br>ಮತಗಳೆಲ್ಲವೂ ಪಥಗಳು ಎನ್ನುವ<br>ಹೊಸ ಎಚ್ಚರದೊಳು ಬದುಕೋಣ<br>ಭಯ–ಸಂಶಯದೊಳು ಕಂದಿದ ಕಣ್ಣೊಳು<br>ನಾಳಿನ ಕನಸನು ಬಿತ್ತೋಣ. | |
| **XI.** | **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**<br>**ಅಂಕ ಸೂಚಿ: ವಿಷಯಾಂಶಕ್ಕೆ – 3 ಅಂಕ**<br>**ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾ ಶೈಲಿ – 1 ಅಂಕ** | **1 x 4 = 4** |
| **40.** | ಮರುಳು ಮಾಧವ ಮಹಿಯ ರಾಜ್ಯದ<br>ಸಿರಿಗೆ ಸೋಲುವನಲ್ಲ ಕೌಂತೇ<br>ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ<br>ಹೊರೆದ ದಾತಾರಂಗೆ ಹಗೆವರ<br>ಶಿರವನರಿದೊಪ್ಪಿಸುವೆನೆಂಬೀ<br>ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ ।<br>ಈ ಚರಣವನ್ನು **'ಕುಮಾರವ್ಯಾಸ'** ಎಂದು ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾ ಮಂಜರಿ' ಎಂಬ** ಮಹಾಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.**<br>ಕರ್ಣನು ಕೃಷ್ಣನಿಗೆ "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ, ಪಾಂಡವರು, ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನ ಕೊಂದೆ" ಎಂದನು.<br>ಅಸಾಮಾನ್ಯನೂ ಶೌರ್ಯಕ್ಕೆ, ದಾನಕ್ಕೆ, ಉದಾತ್ತತೆಗೆ, ಕರುಣೆಗೆ ಹೆಸರಾಗಿದ್ದ ಕರ್ಣನಿಗೆ | |

| | | |
|---|---|---|
| | ವಿಧಿಯು ಎಂತಹ ಸಂಕಟ ವನ್ನು ಉಂಟು ಮಾಡಿತು ಹಾಗೂ ಅವನ ಸ್ವಾಮಿನಿಷ್ಠೆಯ ಮುಂದೆ ಶ್ರೀಕೃಷ್ಣನ ಪ್ರಲೋಭನೆ ಹೇಗೆ ವ್ಯರ್ಥಗೊಂಡಿತು ಎಂಬುದು ಈ ಪದ್ಯದ ಆಶಯವಾಗಿದೆ. **'ನಿರ್ದಿಷ್ಟ ಗುರಿಸಾಧನೆಗೆ ವಿವಿಧ ಭಾವನಾತ್ಮಕ ತಡೆಗೋಡೆಗಳು ಉದಿಸಿದರೂ ಅದನ್ನು ಮೀರಿ ಸಾಗುವ ಛಲವನ್ನು ಹೊಂದಿರಬೇಕು'** ಎಂಬ ಮೌಲ್ಯಯುತ ಸಂದೇಶವು ಈ ಪದ್ಯಭಾಗದಲ್ಲಿ ವ್ಯಕ್ತವಾಗಿದೆ. | |
| **XII.** | **ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**<br><br>**ಅಂಕ ಸೂಚಿ: ಅಂಶಗಳನ್ನಾಧರಿಸಿ ಪತ್ಯಾಂಶಕ್ಕೆ – 3 ಅಂಕ**<br>**ಪದಬಂಧ ಮತ್ತು ಭಾಷಾ ಶೈಲಿ – 1 ಅಂಕ** | **2 x 4 = 8** |
| **41.** | **ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು 'ಮಾದರಿ ಮೈಸೂರು ರಾಜ್ಯ' ಹೇಗಾಯಿತು? ವಿವರಿಸಿ.**<br>**ಉತ್ತರ:–** ಕ್ರಿ. ಶ. 1902 ರಿಂದ ರಾಜ್ಯದ ನೇರ ಉಸ್ತುವಾರಿಯನ್ನು ತಮ್ಮ ಸುಪರ್ದಿಗೆ ಪಡೆದ ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾದರು. ಇವರು ಕ್ರಿ. ಶ. 1907 ರಲ್ಲಿ **'ನ್ಯಾಯ ವಿಧಾಯಕ ಸಭೆ'**ಯನ್ನು ಸ್ಥಾಪಿಸಿದರು. ಇದು ಪ್ರಜಾಪ್ರತಿನಿಧಿ ಸಭೆಯಲ್ಲಿ ಮಂಡಿಸಿದ ಎಲ್ಲಾ ವಿಷಯಗಳನ್ನು ವಿಮರ್ಶಿಸುವ ಅಧಿಕಾರವನ್ನು ಹೊಂದಿತ್ತು. **ಕ್ರಿ. ಶ. 1923 ರಲ್ಲಿ 'ಪ್ರಜಾಪ್ರತಿನಿಧಿ ಸಭೆ'** ಯನ್ನು ಶಾಸನಬದ್ಧ ಸಂಸ್ಥೆಯನ್ನಾಗಿ ಮಾರ್ಪಡಿಸಿದರು. ಇವರು ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಟ್ಟರು. ಇವರ ಕಾಲದಲ್ಲಿ ಗ್ರಾಮ ನಿರ್ಮಲೀಕರಣ, ವೈದ್ಯ ಸಹಾಯ, ವಿದ್ಯಾಪ್ರಚಾರ, ನೀರಿನ ಸೌಕರ್ಯ, ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು. ಸಾಮಾಜಿಕ ಕಾನೂನುಗಳ ಹರಿಕಾರ ಎಂಬ ಬಿರುದಿಗೆ ಪಾತ್ರರಾದ ಇವರು ಸಾಹಿತ್ಯ, ಸಂಗೀತ, ವಾಸ್ತುಶಿಲ್ಪಗಳ ಅಭಿವೃದ್ಧಿಗೆ ಒತ್ತು ನೀಡಿದರು. **ಬೆಂಗಳೂರಿನಲ್ಲಿ 'ಕನ್ನಡ ಸಾಹಿತ್ಯ ಪರಿಷತ್'** ಎಂಬ ಸಂಸ್ಥೆಯು ಪ್ರಾರಂಭಗೊಳ್ಳಲು ಕಾರಣಕರ್ತರಾದರು. ಮೈಸೂರು ರಾಜ್ಯದಲ್ಲಿ ರೈಲು ಮಾರ್ಗಗಳ ನಿರ್ಮಾಣ ಕಾರ್ಯವು ಭರದಿಂದ ಸಾಗಿತು. ಕ್ರಿ. ಶ. 1900 ರಲ್ಲಿ ಶಿವನಸಮುದ್ರದ ಬಳಿಯ ಕಾವೇರಿ ಕಣಿವೆಯಲ್ಲಿ **ಏಷ್ಯಾದ ಮೊಟ್ಟ ಮೊದಲ ವಿದ್ಯುತ್ ಉತ್ಪಾದನಾ ಕೇಂದ್ರ ಪ್ರಾರಂಭ ಮಾಡಿದರು.** ವಾಣಿವಿಲಾಸ ಸಾಗರ ಹಾಗೂ ಕೃಷ್ಣರಾಜಸಾಗರ ಅಣೆಕಟ್ಟು ನಿರ್ಮಾಣ ಮಾಡಿ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ನೀಡಿದರು. ಹೀಗೆ ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಮೈಸೂರು **'ಮಾದರಿ ಮೈಸೂರು ರಾಜ್ಯ'**ವಾಗಿ ಮಾರ್ಪಾಡಾಯಿತು.<br><br>**ಅಥವಾ** | |

| | | |
|---|---|---|
| | **ವಿಶ್ವೇಶ್ವರಯ್ಯ ಅವರು ಮೈಸೂರು ದಿವಾನರಾಗಿ ಸಲ್ಲಿಸಿದ ಸೇವೆಯನ್ನು ಕುರಿತು ಬರೆಯಿರಿ.**<br>**ಉತ್ತರ:–** ವಿಶ್ವೇಶ್ವರಯ್ಯ ಮೈಸೂರು ಸಂಸ್ಥಾನದ ದಿವಾನರಾಗಿ ಆಡಳಿತದಲ್ಲಿ ಹೊಸ ಮಾದರಿಯನ್ನು ಅನುಷ್ಠಾನಗೊಳಿಸಿದರು. ಕಛೇರಿಯ ಕೆಲಸ ಕಾರ್ಯಗಳಲ್ಲಿ ಸಾಕಷ್ಟು ಸುಧಾರಣೆ ಮಾಡಿದರು ಆಡಳಿತದಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಗೆ ಒತ್ತು ನೀಡಿದರು. ಸಂಸ್ಥಾನದಲ್ಲಿ ಸ್ಥಳೀಯ ಮಟ್ಟದಲ್ಲಿ ಕೇಂದ್ರೀಕೃತವಾಗಿದ್ದ ನ್ಯಾಯಾಂಗ ಮತ್ತು ಕಾರ್ಯಾಂಗಗಳ ಅಧಿಕಾರವನ್ನು ಪ್ರತ್ಯೇಕಗೊಸಿದರು. ರಾಜ್ಯ ಪ್ರವಾಸ ಮಾಡಿ ಅಜಮಾಯಿಸಿ ಕಾರ್ಯ ನಡೆಸಿದರು. ಸಮರ್ಥ ಕಾರ್ಯನಿರ್ವಹಣೆಗಾಗಿ ಸಮಿತಿಗಳನ್ನು ರಚಿಸಿದರು. ನೇಮಕಾತಿಯಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಿದರು. ತಾಂತ್ರಿಕ ವೃತ್ತಿಪರ ಶಿಕ್ಷಣಕ್ಕೆ ಆದ್ಯತೆ ನೀಡಿದರು. ಭಾಷೆ ಸಾಹಿತ್ಯ ಮತ್ತು ಸಂಶೋಧನೆಗೆ ಪ್ರೋತ್ಸಾಹ ನೀಡಿದರು. ಮೈಸೂರು ಸಂಸ್ಥಾನದಲ್ಲಿ ಕೈಗಾರಿಕೆಗೆ ಅಗ್ರ ಪ್ರಾಶಸ್ತ್ಯ ನೀಡಿದರು. ರಾಜ್ಯದ ಆರ್ಥಿಕ ಚಟುವಟಿಕೆಗಳಿಗೆ ಭದ್ರ ಬುನಾದಿ ಹಾಕುವ ಉದ್ದೇಶದಿಂದ ಹಣಕಾಸು ನೀತಿಯಲ್ಲಿ ಮಾರ್ಪಾಡು ಮಾಡಿದರು. | |
| **42.** | **ಹಲಗಲಿ ದಂಗೆಗೆ ಕಾರಣವೇನು? ಸರಕಾರ ಅದನ್ನು ಹೇಗೆ ನಿಯಂತ್ರಿಸಿತು?**<br>**ಉತ್ತರ :**<br>ಕ್ರಿ.ಶ. 1857ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರ್ಕಾರ "ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು" ಎಂಬ ಆದೇಶವನ್ನು ನೀಡಿತು. ಈ ಆದೇಶವನ್ನು ವಿರೋಧಿಸಿ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ಇದ್ದದ್ದು, ಹಲಗಲಿಯ ಬೇಡರು ದಂಗೆ ಏಳಲು ಕಾರಣವಾಯಿತು. ನಿಶ್ಯಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಹಲಗಲಿಯ ಬೇಡರನ್ನು ಬ್ರಿಟೀಷರ ದಂಡಿನ ಸಿಪಾಯಿಗಳು ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು. ಆಗ ಹಲಗಲಿಯ ವೀರರೆಲ್ಲರೂ ಬ್ರಿಟಿಷ್ ಸಿಪಾಯಿಗಳ ವಿರುದ್ಧ ಹೋರಾಡಿ ವೀರಮರಣವನ್ನಪ್ಪಿದರು. ಸಿಪಾಯಿಗಳು ಹಲಗಲಿಯನ್ನು ಲೂಟಿ ಮಾಡಿ, ಊರಿಗೆ ಬೆಂಕಿ ಹಚ್ಚಿದ್ದರಿಂದ ಹಲಗಲಿ ಗುರುತು ಸಿಕ್ಕದಂತೆ ಸುಟ್ಟು ಹೋಯಿತು.<br>**ಅಥವಾ**<br>**ಹಲಗಲಿ ದಂಗೆಯ ಪರಿಣಾಮವೇನು?** ವಿವರಿಸಿ.<br>**ಉತ್ತರ :**<br>ಕ್ರಿ.ಶ. 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರ್ಕಾರ "ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು" ಎಂಬ ಆದೇಶವನ್ನು ನೀಡಿತು. ಈ ಆದೇಶವನ್ನು ವಿರೋಧಿಸಿ | |

| | | |
|---|---|---|
| | **ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ** ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ಇದ್ದದ್ದು, ಹಲಗಲಿಯ ಬೇಡರು ದಂಗೆ ಏಳಲು ಕಾರಣವಾಯಿತು. ಬ್ರಿಟಿಷರ ದಂಡು ದಂಗೆಯನ್ನು ಅಡಗಿಸಲು ಹಲಗಲಿಗೆ ಬಂದಿತು. ಸೈನ್ಯವು ಜನರನ್ನು ಬೆಂಬತ್ತಿ ಕಡಿದು ಹಾಕಿದವು. ಜನರ ಮೇಲೆ ಕರುಣೆಯಿಲ್ಲದಂತೆ ಗುಂಡು ಹಾರಿಸಿತು. ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ಹೋರಾಡಿ ವೀರಮರಣವನ್ನು ಹೊಂದಿದರು. ಬ್ರಿಟೀಷರ ಸೈನಿಕರು ಕೊಡಲಿ, ಕೋರೆ, ಕುಡ, ಕಬ್ಬಿಣ, ಮೊಸರು, ಬೆಣ್ಣೆ, ಹಾಲು, ಉಪ್ಪು, ಎಣ್ಣೆ, ಅರಿಶಿನ, ಜೀರಿಗೆ, ಅಕ್ಕಿ, ಸಕ್ಕರೆ, ಬೆಲ್ಲ, ಗಂಗಳ, ಚರಿಗೆ, ಮಂಗಳಸೂತ್ರ ಎಲ್ಲವನ್ನು ಲೂಟಿ ಮಾಡಿ, ಊರಿಗೆ ಬೆಂಕಿ ಇಟ್ಟು, ಬೂದಿ ಮಾಡಿದರು. ಹಲಗಲಿಯು ಗುರುತಿಸಲಾಗದಷ್ಟು ಸಂಪೂರ್ಣನಾಶವಾಯಿತು. | |
| **XIII.** | **ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**<br>ನಮ್ಮ ದೇಶ ನೂರಾರು ವರ್ಷಗಳಿಂದ ಎದುರಿಸುತ್ತಿರುವ ಜಟಿಲಾತಿಜಟಿಲವಾದ ಸಮಸ್ಯೆಗಳನ್ನು ಸಹ ವೈಜ್ಞಾನಿಕ ಮಾರ್ಗಗಳಿಂದ ಪರಿಹರಿಸಲು ಸಾಧ್ಯವಿದೆ. ನಮ್ಮ ಸಮಾಜ ಎದುರಿಸುತ್ತಿರುವ ಜಾತಿಯಂತಹ ಸಾಮಾಜಿಕ ಪಿಡುಗುಗಳ ಪರಿಹಾರವೂ ಸಹ ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವಗಳಿಂದ ಸಾಧ್ಯ. ವಿಶ್ವಮಾನ್ಯತೆಯನ್ನು ಹೊಂದಿದ ವಿಜ್ಞಾನದ ತತ್ವಗಳನ್ನು ಅನ್ವಯಿಸಿಕೊಳ್ಳುವುದರಿಂದ ಮಾನವೀಯ ಮೌಲ್ಯ ಹಾಗೂ ನೀತಿಯಾಧರಿತ ವಿಶ್ವಧರ್ಮ ರೂಪಿತವಾಗಬಲ್ಲದು. ವಿಜ್ಞಾನದ ಯಾವುದೇ ವಿಭಾಗ ಸಮಾಜದ ಒಳಿತಿಗಾಗಿ ನೆರವಾಗಬಲ್ಲದು. ವಿಶೇಷವಾಗಿ ರಸಾಯನಶಾಸ್ತ್ರ ಜೀವನದ ಅನೇಕ ಕ್ಷೇತ್ರಗಳಲ್ಲಿ ಬಳಕೆಯಾಗಿರುವುದು ಕಂಡುಬರುತ್ತದೆ. ರಸಾಯನಿಕ ಕ್ರಿಯೆಗಳಿಲ್ಲದ ಕಾರ್ಯಗಳೇ ಅಪರೂಪ. ವಿಜ್ಞಾನದ ಈ ವಿಭಾಗಗಳಲ್ಲಿ ಆಳವಾದ ಸಂಶೋಧನೆಗಳು ನಡೆದು ಮನುಕುಲದ ಪ್ರಗತಿಗೆ ಕಾರಣೀಭೂತವಾಗಬೇಕಿದೆ. ವಿಜ್ಞಾನಿಗಳು ತಮ್ಮ ಅಮೂಲ್ಯವಾದ ಜ್ಞಾನವನ್ನು ಸಾಮಾನ್ಯ ಜನರ ಮನೋಭಾವನೆಗಳನ್ನು ತಿದ್ದುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು. ಸಮಾಜದ ಸುಧಾರಣೆಗೆ ನೆರವಾಗಬೇಕು. ವಿಜ್ಞಾನಿಗಳು ಹಲವಾರು ಸಂದರ್ಭಗಳಲ್ಲಿ ಪರಸ್ಪರ ವೈರುಧ್ಯದ ಮನೋಭಾವವನ್ನು ವ್ಯಕ್ತಪಡಿಸುತ್ತಿರುತ್ತಾರೆ. ಅವರು ಪ್ರಯೋಗಶಾಲೆಯಲ್ಲಿ ತಮ್ಮ ಹೆಚ್ಚಿನ ವಿಚಾರ ಶಕ್ತಿಯನ್ನು, ವೈಜ್ಞಾನಿಕ ಮನೋಭಾವನ್ನು ಪ್ರದರ್ಶಿಸುತ್ತಾರೆ. ಆದರೆ ನಿಜ ಜೀವನದಲ್ಲಿ ಅವರ ಯೋಚನಾ ಶಕ್ತಿ ರಜೆ ತೆಗೆದುಕೊಂಡಿದಿಯೋ ಎಂಬಂತೆ ವರ್ತಿಸುತ್ತಾರೆ. ತರಗತಿಯಲ್ಲಿ ಡಾರ್ವಿನನ ಸಿದ್ಧಾಂತವನ್ನು ವೈಜ್ಞಾನಿಕವಾಗಿ ಬೋಧಿಸುತ್ತಾನೆ. ಆದರೆ ಅದೇ ವ್ಯಕ್ತಿ ಗುಡಿ, ಚರ್ಚು, ಮಸೀದಿಗಳಲ್ಲಿ ಯಾವುದೇ ಸಂಕೋಚವಿಲ್ಲದೆ ವಿಜ್ಞಾನಕ್ಕೆ ಅಸಂಗತವಾದ ವಿಕಾಸವಾದವನ್ನು ನಂಬಿಕೆಯ ಮೂಲಕ ಬೋಧಿಸುತ್ತಾನೆ. ಬಹುತೇಕ ವಿಜ್ಞಾನಿಗಳು ಪಾತ ಹೇಳತ್ತಾ ಹಸ್ತಮುದ್ರಿಕೆಯನ್ನು ನಂಬುವುದು ಉಂಟು. | **1 x 4 = 4**<br>**(2 + 2)** |

| | | |
|---|---|---|
| | **ಪ್ರಶ್ನೆಗಳು :** | |
| 43 ಅ | ಅ) ವಿಜ್ಞಾನಿಗಳು ಯಾವ ರೀತಿಯಾಗಿ ವೈರುಧ್ಯ ಭಾವನೆಗಳನ್ನು ವ್ಯಕ್ತಪಡಿಸುತ್ತಿರುತ್ತಾರೆ.? | |
| 43 ಆ | ಆ) ನೀತಿಯಾಧರಿತ ವಿಶ್ವಧರ್ಮ ಯಾವಾಗ ರೂಪಿತವಾಗಬಲ್ಲದು? | |
| | **ಅಂಕಸೂಚಿ: ಪ್ರತಿ ಪ್ರಶ್ನೆಯ ಸರಿಯುತ್ತರಕ್ಕೆ 2 ಅಂಕ** | |
| 43 ಅ | **ವಿಜ್ಞಾನಿಗಳು ಯಾವ ರೀತಿಯಾಗಿ ವೈರುಧ್ಯ ಭಾವನೆಗಳನ್ನು ವ್ಯಕ್ತಪಡಿಸುತ್ತಿರುತ್ತಾರೆ?**<br>ವಿಜ್ಞಾನಿಗಳು ಹಲವಾರು ಸಂದರ್ಭಗಳಲ್ಲಿ ಪರಸ್ಪರ ವೈರುಧ್ಯದ ಮನೋಭಾವವನ್ನು ವ್ಯಕ್ತಪಡಿಸುತ್ತಿರುತ್ತಾರೆ. ಅವರು ಪ್ರಯೋಗಶಾಲೆಯಲ್ಲಿ ತಮ್ಮ ಹೆಚ್ಚಿನ ವಿಚಾರ ಶಕ್ತಿಯನ್ನು, ವೈಜ್ಞಾನಿಕ ಮನೋಭಾವನ್ನು ಪ್ರದರ್ಶಿಸುತ್ತಾರೆ. ಆದರೆ ನಿಜ ಜೀವನದಲ್ಲಿ ಅವರ ಯೋಚನಾ ಶಕ್ತಿ ರಜೆ ತೆಗೆದುಕೊಂಡಿದಿಯೋ ಎಂಬಂತೆ ವರ್ತಿಸುತ್ತಾರೆ. ತರಗತಿಯಲ್ಲಿ ಡಾರ್ವಿನನ ಸಿದ್ಧಾಂತವನ್ನು ವೈಜ್ಞಾನಿಕವಾಗಿ ಬೋಧಿಸುತ್ತಾನೆ. ಆದರೆ ಅದೇ ವ್ಯಕ್ತಿ ಗುಡಿ, ಚರ್ಚು, ಮಸೀದಿಗಳಲ್ಲಿ ಯಾವುದೇ ಸಂಕೋಚವಿಲ್ಲದೆ ವಿಜ್ಞಾನಕ್ಕೆ ಅಸಂಗತವಾದ ವಿಕಾಸವಾದವನ್ನು ನಂಬಿಕೆಯ ಮೂಲಕ ಬೋಧಿಸುತ್ತಾನೆ. ಬಹುತೇಕ ವಿಜ್ಞಾನಿಗಳು ಪಾಠ ಹೇಳತ್ತಾ ಹಸ್ತಮುದ್ರಿಕೆಯನ್ನು ನಂಬುವುದು ಉಂಟು. | |
| 43 ಆ | **ನೀತಿಯಾಧರಿತ ವಿಶ್ವಧರ್ಮ ಯಾವಾಗ ರೂಪಿತವಾಗಬಲ್ಲದು?**<br>ನಮ್ಮ ದೇಶ ನೂರಾರು ವರ್ಷಗಳಿಂದ ಎದುರಿಸುತ್ತಿರುವ ಜಟಿಲಾತಿಜಟಿಲವಾದ ಸಮಸ್ಯೆಗಳನ್ನು ಸಹ ವೈಜ್ಞಾನಿಕ ಮಾರ್ಗಗಳಿಂದ ಪರಿಹರಿಸಲು ಸಾಧ್ಯವಿದೆ. ನಮ್ಮ ಸಮಾಜ ಎದುರಿಸುತ್ತಿರುವ ಜಾತಿಯಂತಹ ಸಾಮಾಜಿಕ ಪಿಡುಗುಗಳ ಪರಿಹಾರವೂ ಸಹ ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವಗಳಿಂದ ಸಾಧ್ಯ. ವಿಶ್ವಮಾನ್ಯತೆಯನ್ನು ಹೊಂದಿದ ವಿಜ್ಞಾನದ ತತ್ವಗಳನ್ನು ಅನ್ವಯಿಸಿಕೊಳ್ಳುವುದರಿಂದ ಮಾನವೀಯ ಮೌಲ್ಯ ಹಾಗೂ ನೀತಿಯಾಧರಿತ ವಿಶ್ವಧರ್ಮ ರೂಪಿತವಾಗಬಲ್ಲದು. | |

<table>
<tr><td>XIV.</td><td>ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.<br>ಅಂಕ ಸೂಚಿ: ವ್ಯಾವಹಾರಿಕ ಪತ್ರಕ್ಕೆ<br>ಇಂದ ಮತ್ತು ಗೆ ವಿಳಾಸ, ಸಂಬೋಧನೆ, ವಿಷಯ – 1 ಅಂಕ<br>ಪತ್ರದ ಒಡಲು, ವಿಷಯ ನಿರೂಪಣೆ – 2 ಅಂಕ<br>ವಂದನೆಗಳೊಂದಿಗೆ ಮುಕ್ತಾಯ, ಇಂತಿ, ಸಹಿ, ಸ್ಥಳ, ದಿನಾಂಕ– 1 ಅಂಕ<br>ಭಾಷಾ ಶೈಲಿಗೆ, ಸೂಕ್ತ ಪದಬಳಕೆ, ವಿನ್ಯಾಸ – 1 ಅಂಕ<br><br>ಅಂಕ ಸೂಚಿ: ಖಾಸಗಿ ಪತ್ರಕ್ಕೆ<br>ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ – 1 ಅಂಕ<br>ಪತ್ರದ ಒಡಲು, ವಿಷಯ ನಿರೂಪಣೆ – 2 ಅಂಕ<br>ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ – 1 ಅಂಕ<br>ಭಾಷಾ ಶೈಲಿಗೆ, ಸೂಕ್ತ ಪದಬಳಕೆ , ವಿನ್ಯಾಸ – 1 ಅಂಕ</td><td>1 x 5 = 5</td></tr>
<tr><td>44.</td><td>ನಿಮ್ಮನ್ನು ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ವೆಂಕಟೇಶ್' ಎಂದು ಭಾವಿಸಿಕೊಂಡು ಬರಗಾಲ ಉಂಟಾದ ನಿಮಿತ್ಯ ಪರಿಹಾರ ನೀಡಬೇಕೆಂದು ನಿಮ್ಮ ಜಿಲ್ಲಾಧಿಕಾರಿಗಳಿಗೊಂದು ಪತ್ರ ಬರೆಯಿರಿ.<br><br>ಇವರಿಂದ<br>ವೆಂಕಟೇಶ್ 25–03–2023<br>ಸರ್ಕಾರಿ ಪ್ರೌಢಶಾಲೆ<br>ದಾವಣಗೆರೆ.<br><br>ಇವರಿಗೆ<br>ಮಾನ್ಯ ಜಿಲ್ಲಾ ಅಧಿಕಾರಿಗಳು<br>ಮಿನಿ ವಿಧಾನಸೌಧ,<br>ದಾವಣಗೆರೆ.<br><br>ಮಾನ್ಯರೇ,<br>ವಿಷಯ:– ಬರಗಾಲ ಉಂಟಾದ ನಿಮಿತ್ಯ ಪರಿಹಾರ ನೀಡುವ ಕುರಿತು<br>ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸುವುದೇನೆಂದರೆ ನಮ್ಮ ಜಿಲ್ಲೆ</td><td></td></tr>
</table>

ಎಲ್ಲಾ ತಾಲ್ಲೂಕುಗಳನ್ನು ಬರಗಾಲ ಎಂದು ಘೋಷಿಸಲಾಗಿದೆ. ಆದರೆ ಇಲ್ಲಿಯವರೆಗೂ ನಮ್ಮ ಊರಿನ ಯಾವುದೇ ನಾಗರಿಕರಿಗೂ ಪರಿಹಾರ ಹಣ ಬಂದಿಲ್ಲ. ದಯಾಳುಗಳಾದ ತಾವು ಆದಷ್ಟು ಬೇಗನೆ ಪರಿಹಾರ ಕ್ರಮಗಳನ್ನು ಕೈಗೊಂಡು ನಮ್ಮ ಸುಗಮ ಜೀವನಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ವಂದನೆಗಳೊಂದಿಗೆ**

**ಇಂತಿ ತಮ್ಮ ನಂಬುಗೆಯ**

**ವೆಂಕಟೇಶ್**

**ಹೊರವಿಳಾಸ**

| **ಇವರಿಗೆ** | **ಇವರಿಂದ** |
|---|---|
| ಮಾನ್ಯ ಜಿಲ್ಲಾಧಿಕಾರಿಗಳು<br>ಮಿನಿ ವಿಧಾನಸೌಧ,<br>ದಾವಣಗೆರೆ. | ವೆಂಕಟೇಶ್<br>ಸರ್ಕಾರಿ ಪ್ರೌಢಶಾಲೆ<br>ದಾವಣಗೆರೆ. |

**ಅಥವಾ**

ನಿಮ್ಮನ್ನು ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಶಿವಶಂಕರ' ಎಂದು ಭಾವಿಸಿಕೊಂಡು ನಿಮ್ಮ ಪರೀಕ್ಷಾ ಸಿದ್ಧತೆಯನ್ನು ಕುರಿತು ರಾಮನಗರದಲ್ಲಿರುವ ನಿಮ್ಮ ದೊಡ್ಡಪ್ಪನವರಿಗೆ ಒಂದು ಪತ್ರ ಬರೆಯಿರಿ.

**ಇವರಿಂದ**

ಶಿವಶಂಕರ್

10ನೇ ತರಗತಿ

ಸರ್ಕಾರಿ ಪ್ರೌಢಶಾಲೆ ದಾವಣಗೆರೆ

ದಿನಾಂಕ:25–1–2023

ಪೂಜ್ಯ ತೀರ್ಥರೂಪ ಸಮಾನರಾದ ದೊಡ್ಡಪ್ಪನವರಿಗೆ, ನಿಮ್ಮ ಮಗ ಶಿವಶಂಕರ್ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು.

ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀವು ಕ್ಷೇಮವಾಗಿದ್ದೀರಿ ಎಂದು ಭಾವಿಸಿರುತ್ತೇನೆ. ದೊಡ್ಡಮ್ಮನವರಿಗೆ ನಮಸ್ಕಾರಗಳು. ನನ್ನ ವಿದ್ಯಾಭ್ಯಾಸವು ಕೂಡ ಉತ್ತಮವಾಗಿ ನಡೆಯುತ್ತಿದೆ. ದಿನಾಂಕ 25–03–2023 ರಿಂದ ನನ್ನ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಗಳು ಆರಂಭವಾಗುತ್ತಿದ್ದು ಅದಕ್ಕೆ ಅತ್ಯುತ್ತಮವಾಗಿ ಸಿದ್ಧತೆ ಮಾಡಿಕೊಳ್ಳುತ್ತಿದ್ದೇನೆ. ಪ್ರತಿದಿನ ಬೆಳಿಗ್ಗೆ 5

| | | |
|---|---|---|
| | ಗಂಟೆಗೆ ಎದ್ದು ಓದುತ್ತಿದ್ದೇನೆ. ನೀವು ಅಂದುಕೊಂಡಂತೆ 100% ಫಲಿತಾಂಶ ಪಡೆಯುವ ಭರವಸೆಯನ್ನು ನೀಡುತ್ತಿದ್ದೇನೆ. ನಿಮ್ಮ ಆಶೀರ್ವಾದ ಇರಲಿ. ತಂಗಿಯಾದ ಕೃತಿಕಾಗೆ ನನ್ನ ಆಶೀರ್ವಾದಗಳು. ಅವಳನ್ನು ಚೆನ್ನಾಗಿ ಓದಿಕೊಳ್ಳಲು ತಿಳಿಸಿ. ನಾವಿಬ್ಬರೂ ನಿಮಗೆ ಒಳ್ಳೆಯ ಹೆಸರನ್ನು ತಂದುಕೊಡುತ್ತೇವೆ.<br>**ಆಶೀರ್ವಾದ ಬಯಸುತ್ತಾ ಪ್ರಣಾಮಗಳೊಂದಿಗೆ**<br>ಇಂತಿ ನಿಮ್ಮ ಪ್ರೀತಿಯ ಮಗ<br>**ಶಿವಶಂಕರ್**<br><br>**ಅಂಚೆ ವಿಳಾಸ**<br>ಶ್ರೀಯುತ ಶ್ರೀನಿವಾಸರವರು<br>ಮಾರುತಿ ನಿಲಯ, ಮನೆ ನಂ– 5<br>ಶಬರಿ ನಗರ, ರಾಮನಗರ | |
| **XV.** | **ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ** ಬರೆಯಿರಿ.<br>**ಅಂಕಸೂಚಿ:**<br>**ಪ್ರಸ್ತಾವನೆ/ಪೀಠಿಕೆ/ವಿಷಯ ಪ್ರವೇಶ – 1 ಅಂಕ**<br>**ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ – 2 ಅಂಕ**<br>**ಉಪಸಂಹಾರ/ ಮುಕ್ತಾಯ/ ವಿಷಯ ಸಮಾಪ್ತಿ – 1 ಅಂಕ**<br>**ಭಾಷಾ ಶೈಲಿಗೆ, ಸೂಕ್ತ ಪದಬಂಧ – 1 ಅಂಕ** | **1 x 5 = 5** |
| **45.** | **ರಾಷ್ಟ್ರೀಯ ಭಾವೈಕ್ಯತೆ**<br>**ಪೀಠಿಕೆ** : ಭಾರತವು ಒಂದು ಜಾತ್ಯತೀತ ರಾಷ್ಟ್ರ. ನಮ್ಮ ದೇಶವು ಪ್ರಜಾಪ್ರಭುತ್ವದ ತಳಹದಿಯ ಮೇಲೆ ರೂಪಿತವಾಗಿದೆ. ನಮ್ಮ ದೇಶದಲ್ಲಿ ಅನೇಕ ಧರ್ಮಗಳು, ಭಾಷೆಗಳು, ವೇಷಭೂಷಣಗಳು, ಆಹಾರ ಪದ್ಧತಿಗಳು, ಆಚರಣೆಗಳು, ಸಂಸ್ಕೃತಿಗಳು ಕಂಡುಬರುತ್ತವೆ. **‘**ವಿವಿಧತೆಯಲ್ಲಿ ಏಕತೆ**’** ಎಂಬುದು ನಮ್ಮ ದೇಶದ ಪರಂಪರೆಯಾಗಿದೆ. | |

| | | |
|---|---|---|
| | **ವಿಷಯ ನಿರೂಪಣೆ:** ಈ ರೀತಿಯ ಬಹುಮುಖಿ ಸಂಸ್ಕೃತಿಯನ್ನುಳ್ಳ ಈ ದೇಶದಲ್ಲಿ ಏಕತೆಯನ್ನು ಮೂಡಿಸುವುದು ಸವಾಲಿನ ಕಾರ್ಯವಾಗಿದೆ. ಆದರೆ ನಮ್ಮ ಸಂಸ್ಕೃತಿಯ ಪರಮತ ಸಹಿಷ್ಣುತೆಯನ್ನು ವೇದಕಾಲದಿಂದಲೂ ಬೋಧಿಸಿಕೊಂಡು ಬಂದಿರುವುದರಿಂದ ಸಹಬಾಳ್ವೆ ಮಾಡುವುದು ಇಂದು ಎಲ್ಲರಿಗೂ ಸಾಧ್ಯವಾಗಿದೆ. 'ವಸುಧೈವ ಕುಟುಂಬಕಂ'. 'ಸರ್ವೇಜನಾಃ ಸುಖಿನೋ ಭವಂತು' ಎಂಬುದು ನಮ್ಮ ನಾಡಿನ ಧ್ಯೇಯವಾಗಿದೆ. ಆದರೂ ಅಲ್ಲಲ್ಲಿ ಭಿನ್ನತೆ ಮಾತುಗಳು ಆಗಾಗ್ಗೆ ಕೇಳಿ ಒಂದು ದೇಶದ ಶಾಂತಿಯನ್ನು ಕದಡುವ ಕಾರ್ಯವನ್ನು ಮಾಡುತ್ತಿರುವುದು ದುರ್ದೈವದ ಸಂಗತಿಯಾಗಿದೆ, ಧರ್ಮ ಧರ್ಮಗಳ ನಡುವೆ ಭೇದಭಾವನೆಯನ್ನು ತೋರುವುದು. ಜಾತಿಯ ಹೆಸರಿನಲ್ಲಿ ಮೇಲುಕೀಳು ಭಾವನೆಯನ್ನು ಮೂಡಿಸುವುದು, ಭಾಷೆಯಿಂದ ಜನರನ್ನು ವರ್ಗಿಕರಿಸುವುದು. ಮೂದಲಾದ ದುಷ್ಕೃತ್ಯಗಳನ್ನು ಕಾಣಬಹುದು. ಇದರಿಂದ ಅಸಹಿಷ್ಣುತೆ ಮನೋಭಾವ ಜನರಲ್ಲಿ ಮೂಡುತ್ತದೆ. ಆದರೆ ನಾವು ಇವುಗಳನ್ನು ಹೋಗಲಾಡಿಸಲು ಕಂಕಣಬದ್ಧರಾಗಬೇಕು. ರಾಷ್ಟ್ರೀಯ ಹಬ್ಬಗಳ ಆಚರಣೆಗಳ ಮೂಲಕ ಜನರನ್ನು ಜಾಗೃತಗೊಳಿಸಬೇಕು. ರಾಷ್ಟ್ರ, ರಾಷ್ಟ್ರಧ್ವಜ, ರಾಷ್ಟ್ರಗೀತೆಯ ಬಗ್ಗೆ ಅಭಿಮಾನ ಮೂಡಿಸಬೇಕು. ಎಲ್ಲ ಧರ್ಮಗಳ ಸಾರವು ಒಂದೇ ಎಂಬುದನ್ನು ಅರಿತರೆ ಧಾರ್ಮಿಕ ಅಸಹಿಷ್ಣುತೆಗೆ ಅವಕಾಶ ಇರುವುದಿಲ್ಲ. ನಾವೆಲ್ಲರೂ ಭಾರತಮಾತೆಯ ಮಕ್ಕಳು ಎಂಬ ಭಾವ ಮೂಡಿದಾಗ ಜಾತಿ, ಮತ, ಭಾಷೆಗಳ ಭೇದಭಾವಕ್ಕೆ ಅವಕಾಶ ಇರುವುದಿಲ್ಲ ದೇಶಪ್ರೇಮವನ್ನು ಮನಮನದಲ್ಲೂ ಮೂಡಿಸಿಕೊಳ್ಳಬೇಕು. ರಾಷ್ಟ್ರೀಯ ಭಾವೈಕ್ಯತೆಗೆ ಭಂಗತರಂತಹ ದುಷ್ಟಶಕ್ತಿಗಳನ್ನು ಗುರುತಿಸಿ, ಅವರ ವಿರುದ್ಧ ಕಾನೂನುರೀತ್ಯ ಕ್ರಮಕೈಗೊಂಡು, ಉಗ್ರವಾದ ಶಿಕ್ಷೆಯನ್ನು ನೀಡಬೇಕು. ರಾಷ್ಟ್ರೀಯ ಭಾವೈಕ್ಯವನ್ನು ಕಾಪಾಡುವತ್ತ ನಮ್ಮ ನಡೆಯಿರಬೇಕು.<br>**ಉಪಸಂಹಾರ:** ಶಾಲಾಕಾಲೇಜುಗಳಲ್ಲಿ ರಾಷ್ಟ್ರೀಯ ಭಾವೈಕ್ಯವನ್ನು ಉಂಟುಮಾಡುವ ಕಾರ್ಯಕ್ರಮಗಳನ್ನು ನಡೆಯಿಸುವುದರ ಮೂಲಕ ಬಾಲಕರಲ್ಲಿ, ಯುವಕರಲ್ಲಿ ದೇಶಾಭಿಮಾನ ಮೂಡಿಸುವ ಕಾರ್ಯವನ್ನು ಮಾಡಬೇಕು. ರಾಷ್ಟ್ರೀಯ ಹಬ್ಬಗಳ ಆಚರಣೆಯನ್ನು ವೈಭವದಿಂದ ನಡೆಸಬೇಕು. 'ನಾವೆಲ್ಲರೂ ಭಾರತೀಯರು; ನಾವೆಲ್ಲರೂ ಒಂದೇ' ಎಂಬ ಮನೋಭಾವದಿಂದ ದೇಶಪ್ರೇಮವನ್ನು ಬೆಳೆಸಿಕೊಳ್ಳಬೇಕು. ಆಗ ಮಾತ್ರ ರಾಷ್ಟ್ರೀಯ ಭಾವೈಕ್ಯವನ್ನು ಕಾಪಾಡುವುದು ಸಾಧ್ಯ ಎಂಬುದು ನನ್ನ ಅಭಿಪ್ರಾಯವಾಗಿದೆ.<br>**ಅಥವಾ** | |

| | | |
|---|---|---|
| | **ಸಾಮಾಜಿಕ ಪಿಡುಗುಗಳು**<br><br>**ಪ್ರಸ್ಥಾವನೆ:–** ಸಮಾಜದ ಪ್ರಗತಿಗೆ ಅಥವಾ ವ್ಯಕ್ತಿಯ ವ್ಯಕ್ತಿತ್ವದ ವಿಕಸನನಕ್ಕೆ ಅಡ್ಡಿಯನ್ನು ಉಂಟುಮಾಡುವ ಶಕ್ತಿಗಳನ್ನು 'ಸಾಮಾಜಿಕ ಪಿಡುಗುಗಳು' ಎನ್ನುವರು. ತಲೆತಲಾಂತರದಿಂದ ಸಮಾಜಕ್ಕೆ ಅಂಟಿಕೊಂಡು ಬಂದ ಸಾಮಾಜಿಕ ಪಿಡುಗುಗಳಿವೆ. ಜಾತೀಯತೆ, ವರದಕ್ಷಿಣೆ, ಸ್ತ್ರೀ ಶೋಷಣೆ, ಅಸ್ಪೃಶ್ಯತೆ, ಮಾದಕ ವಸ್ತುಗಳ ಸೇವನೆ, ಜೀತ ಪದ್ದತಿ, ಬಾಲ ಕಾರ್ಮಿಕ ಪದ್ಧತಿ, ಮೂಢನಂಬಿಕೆಗಳು ಇತ್ಯಾದಿ. ಇವೆಲ್ಲವೂ ನಮ್ಮ ಸಮಾಜದಲ್ಲಿ ಬೇರು ಬಿಟ್ಟಿವೆ. ಹಾಗೂ ಯಾವ ಶಾಸನಕ್ಕೂ ಜಗ್ಗದಿವೆ. ಇವುಗಳಿಂದ ಸಾಮಾಜಿಕ ಸ್ವಾಸ್ಥ್ಯ ಕೆಟ್ಟು ಹೋಗುತ್ತದೆ. ಇವುಗಳು ಒಂದು ಸುಂದರ ನಾಗರಿಕ ಸಮಾಜ ನಿರ್ಮಾಣಕ್ಕೆ ಅಡ್ಡಿಯಾಗಿವೆ.<br>**ವಿಷಯ ನಿರೂಪಣೆ:** ಜಾತೀಯತೆಯಿಂದ ಮೇಲುಕೀಳು ಭಾವನೆಯುಂಟಾಗಿ ಜನರಲ್ಲಿ ದ್ವೇಷ, ಅಸೂಯೆ, ಅಶಾಂತಿ ಮೂಡಿ ದೇಶದ ಅಭಿವೃದ್ಧಿಗೆ ಮಾರಕವಾಗಿ ಪರಿಣಮಿಸಿದೆ. ವರದಕ್ಷಿಣೆ ಎಂದರೆ ಮದುವೆಯ ಸಮಯದಲ್ಲಿ ಹೆಣ್ಣು ಹೆತ್ತವರು ಮದುವೆಯ ಗಂಡಿಗೆ ಕೊಡಬೇಕಾದ ದಕ್ಷಿಣೆ. ವರದಕ್ಷಿಣೆಯನ್ನು ಮೊದಮೊದಲು ಹೆಣ್ಣು ಹೆತ್ತವರು ಪ್ರೀತಿಯಿಂದ ಕೊಡುತ್ತಿದ್ದರು. ಕೊಡಲೇ ಬೇಕೆಂಬ ಒತ್ತಾಯವಿರಲಿಲ್ಲ. ಆದರೆ ಈಗ ಕಾಲ ಬದಲಾಗಿದೆ. ವರದಕ್ಷಿಣೆ ಕೊಡುವುದು ಕಡ್ಡಾಯ ಎನ್ನುವಂತೆ ಆಗಿದೆ. ನಮ್ಮ ದೇಶದಲ್ಲಿ ಸ್ತ್ರೀ ಶೋಷಣೆಯು ಅವ್ಯಾಹತವಾಗಿ ನಡೆಯುತ್ತಿದೆ. ಸ್ತ್ರೀ ಭ್ರೂಣ ಹತ್ಯೆ, ದೇವದಾಸಿ ಪದ್ಧತಿ, ವೇಶ್ಯಾವಾಟಿಕೆ, ಅತ್ಯಾಚಾರಗಳಿಂದ ಹೆಣ್ಣು ಮಕ್ಕಳ ಬದುಕು ದುರ್ಬರವಾಗುತ್ತಿದೆ 'ಅಸ್ಪೃಶ್ಯತೆ ಭಾರತಕ್ಕೆ ಅಂಟಿದ ಶಾಪ.' ಇದನ್ನು ಆಚರಿಸುವುದು ಮಹಾಪರಾಧ. ಮಾದಕ ವಸ್ತುಗಳ ಸೇವನೆಯಿಂದ ಇಂದಿನ ಯುವಜನಾಂಗ ದಾರಿತಪ್ಪುತ್ತಿದೆ. ಮಧ್ಯಪಾನ, ಧೂಮಪಾನ, ಮಾದಕ ಪದಾರ್ಥಗಳ ಸೇವನೆಯ ದುಶ್ಚಟಗಳಿಂದ ಸಮಾಜದ ಶಾಂತಿಗೆ ಭಂಗವುಂಟಾಗುತ್ತಿದೆ. ಜೀತ ಪದ್ಧತಿಯಿಂದ ವ್ಯಕ್ತಿಯ ಶೋಷಣೆಯಾಗಿ ಸ್ವಾಭಿಮಾನಕ್ಕೆ ಧಕ್ಕೆಯನ್ನು ಉಂಟುಮಾಡುತ್ತದೆ. ಬಾಲಕಾರ್ಮಿಕ ಪದ್ಧತಿಯಿಂದ ಅನೇಕ ಮಕ್ಕಳು ತಮ್ಮ ಸುಂದರ ಬಾಲ್ಯವನ್ನು ಕಳೆದುಕೊಂಡು ಶೋಷಣೆಗೆ ಈಡಾಗುತ್ತಿದ್ದಾರೆ. ಮೂಢನಂಬಿಕೆಗಳು ಜನಸಾಮಾನ್ಯರ ಮಾನಸಿಕ ಶಾಂತಿಯನ್ನು ಕದಡುತ್ತಿವೆ. ಹೀಗೆ ಅನೇಕ ಸಾಮಾಜಿಕ ಪಿಡುಗುಗಳು ಸಮಾಜದ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತಿವೆ.<br>**ಉಪಸಂಹಾರ:** ನಾವು ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು. ಸಾಮಾಜಿಕ ಪಿಡುಗುಗಳಿಂದಾಗುವ ಅನಾಹುತಗಳ | |

| | | |
|---|---|---|
| | ಬಗ್ಗೆ ಜನರಲ್ಲಿ ಜಾಗೃತಿಯನ್ನು ಮೂಡಿಸಬೇಕು. ಸರ್ಕಾರವು ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ಜಾರಿಗೆ ತಂದಿರುವ ಕಾಯ್ದೆ-ಕಾನೂನುಗಳ ಬಗ್ಗೆ ಅರಿವನ್ನು ಪಡೆದುಕೊಳ್ಳಬೇಕು. ಪ್ರತಿಯೊಬ್ಬರಿಗೂ ಸಮಾನ ಶಿಕ್ಷಣ ದೊರೆಯುವಂತೆ ಅವಕಾಶ ಮಾಡಿಕೊಡಬೇಕು. ಸರ್ವಧರ್ಮ ಸಮಾನತೆ, ಜಾತ್ಯತೀತತೆ, ಮಾನವೀಯ ಮೌಲ್ಯಗಳನ್ನು ನಮ್ಮದಾಗಿಸಿಕೊಂಡಾಗ ಮಾತ್ರ ಸಾಮಾಜಿಕ ಪಿಡುಗುಗಳನ್ನು ಹೋಗಲಾಡಿಸಲು ಸಾಧ್ಯ ಎಂಬುದು ನನ್ನ ಅಭಿಪ್ರಾಯವಾಗಿದೆ. | |

# ಉಪನಿರ್ದೇಶಕರು (ಆಡಳಿತ) ರವರ ಕಚೇರಿ
# ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

## 2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು

## ವಿಷಯ : ಪ್ರಥಮ ಭಾಷೆ – ಕನ್ನಡ (01–K)

**ಅವಧಿ : 3 ಗಂಟೆ 15 ನಿಮಿಷ      ಅಭ್ಯಾಸ ಪತ್ರಿಕೆ – 02      ಗರಿಷ್ಠ ಅಂಕಗಳು : 100**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 6 x 1 = 6**

**1. ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ :**

A. 13  B. 25  C. 05  D. 10

**2. ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ :**

A. ಅಲ್ಪವಿರಾಮ  B. ಆವರಣ  C. ಉದ್ಧರಣ  D. ಭಾವಸೂಚಕ

**3. ಕೃದಂತ ಭಾವನಾಮಕ್ಕೆ ಉದಾಹರಣೆಯಾಗುವ ಪದವಿದು :**

A. ನೋಟ  B. ನೋಡಲು  C. ನೋಡುವ  D. ನೋಡದ

**4. ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು ಹೀಗೆ ಕರೆಯುವರು:**

A. ಸಾಮಾನ್ಯವಾಕ್ಯ  B. ಪ್ರಶ್ನಾರ್ಥಕವಾಕ್ಯ  C. ಮಿಶ್ರವಾಕ್ಯ  D. ಸಂಯೋಜಿತವಾಕ್ಯ

**5. ಯಣ್‌ಸಂಧಿಗೆ ಉದಾಹರಣೆಯಾದ ಪದವಿದು :**

A. ಕೋಟ್ಯನುಕೋಟಿ  B ವಾಗ್ದೇವಿ  C. ಏಕೈಕ  D. ಸೂರ್ಯೋದಯ

**6. 'ಸಾಕು' ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ.**

A. ಅನುಕರಣಾವ್ಯಯ  B. ಕ್ರಿಯಾರ್ಥಕಾವ್ಯಯ

C. ಸಂಬಂಧಾರ್ಥಕಾವ್ಯಯ  D. ಅವಧಾರಣಾರ್ಥಕಾವ್ಯಯ

**II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4 x 1 = 4**

7. ವ್ಯಯ : ಬಿಯ : : ವಂಧ್ಯಾ : ________
8. ಪರ್ವತ : ರೂಢನಾಮ : : ವಿದ್ಯಾರ್ಥಿ : ________
9. ನಲ್ಗುದುರೆ : ಕರ್ಮಧಾರಯ ಸಮಾಸ : : ತುದಿಮೂಗು: ________
10. ಧೃತಿ : ಧೈರ್ಯ : : ದ್ರುಮ : ________

**III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7 x 1 = 7**

11. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?
12. ಯಶೋಭದ್ರೆಯು ರತ್ನ ಕಂಬಳಿಗಳನ್ನು ಯಾರಿಗೆ ಕೊಟ್ಟಳು?
13. ಬ್ಲಾಕ್ ಔಟ್ ನಿಯಮವನ್ನು ಏತಕ್ಕಾಗಿ ಗಡಿ ಪ್ರದೇಶಗಳಲ್ಲಿ ಪಾಲಿಸುತ್ತಾರೆ?
14. ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?
15. ಹಕ್ಕಿಯ ಕಣ್ಣುಗಳು ಯಾವುವು?
16. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರ್ಯಾರು?
17. ಪೆರಿಯಾರ್‌ರವರು ಹುಟ್ಟು ಹಾಕಿದ ಸಂಘಟನೆಯ ಹೆಸರೇನು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10 x 2 = 20**

18. ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?
19. ವೃಷಭಾಂಕ ಅರಸನು ಯಶೋಭದ್ರೆಯ ಅರಮನೆಗೆ ಬರಲು ಕಾರಣವೇನು?
20. ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವವು?
21. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರ ಅಭಿಪ್ರಾಯಗಳನ್ನು ತಿಳಿಸಿ.
22. ಕವಿ ಬೇಂದ್ರೆಯವರು ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?
23. ಯಜ್ಞಾಶ್ವದ ಹಣೆಯ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?
24. ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?
25. ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?
26. ನೆನಪಿನಲ್ಲಿ ಹಚ್ಚೆ ಚುಚ್ಚಿದಂತಿರುವ ಆ ದಿನದ ಬಗ್ಗೆ ಗೋವಿಂದ ಪೈ ಅವರು ಏನೆಂದು ಹೇಳಿದ್ದಾರೆ?
27. ಭಗತ್ ಸಿಂಗ್ ಅಮರನಾದ ಬಗೆ ಹೇಗೆ?

**V. ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 x 3 = 6**

28. ವಿ.ಕೃ.ಗೋಕಾಕ್
29. ಲಕ್ಷ್ಮೀಶ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಏನು ಹೇಳ್ವೈ ಕರ್ಣ ಚಿತ್ತ
ಗ್ಲಾನಿ ಯಾವುದು ಮನಕೆ ಕುಂತೀ
ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ. 1 x 3 = 3**

31. ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?

**VIII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ.**

32. ಆಳಾಗಬಲ್ಲವನು; ಅರಸಾಗಬಲ್ಲನು **1 x 3 = 3**

**ಅಥವಾ**

ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x 3 = 18**

33. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ!"
34. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"
35. "ತಸ್ಕರಸ್ಯಾನೃತಂ ಬಲಂ"
36. "ಬಾಯ್ದಂಬುಲಕೆ ಕೈಯಾನುವರೆ."
37. "ಹಸುರು ಹಸುರಿಳೆಯುಸಿರೂ"
38. "ವಿದ್ಯಾಧನಮೆ ಧನಮಪ್ಪುದು"

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1 x 4 = 4**

39. ಕೊಡಲಿ ______________________

______________________

______________________

______________ ಹೇಳಲಿ ನಾನೆಷ್ಟಾ

**ಅಥವಾ**

ಸಿಕ್ಕದ್ದು ತಗೊಂಡು ______________________

______________________

______________________

______________ ಹಾಡಿದೆನಣ್ಣಾ ಜನಕಾ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1 x 4 = 4**

40. ನೆಲಕಿಜಿವೆನೆಂದು ಬಗೆದಿರೆ।
ಚಲಕಿಜಿವೆಂ ಪಾಂಡುಸುತರೊಳೀನೆಲನಿದು ಪಾ॥
ೞ್ಪೆಲನೆನಗೆ ದಿನಪಸುತನಂ।
ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ದಪೆನೇ॥

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 4 = 8**

41. ಗುರೂಪದೇಶವನ್ನು ಯಾರ್‍ಯಾರು ಹೇಗೆ ಸ್ವೀಕರಿಸುತ್ತಾರೆ?

**ಅಥವಾ**

ಸಂಪತ್ತಿನ ಗುಣಾವಗುಣಗಳನ್ನು ವಿವರಿಸಿ.

42. ನಾವು ಯಾವ ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ?

**ಅಥವಾ**

ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1 x 4 = 4 (2 + 2)**

ಕಡಿದಾಳ್ ಮಂಜಪ್ಪನವರ ಕಾಲದಲ್ಲಿ ಮಹಾರಾಜಾ ಕಾಲೇಜು ಸಂಸ್ಕೃತಿ ಮತ್ತು ಜ್ಞಾನದ ದೇಗುಲದಂತಿತ್ತು. ಇಂದಿನಂತೆ ವಿದ್ಯಾರ್ಥಿ ಮತ್ತು ಉಪಾಧ್ಯಾಯರ ಚಳುವಳಿಯಿರಲಿಲ್ಲ. ಕಾಲೇಜಿನ ಶಿಕ್ಷಕ ವರ್ಗದವರು ಅಲ್ಪ ಸಂಬಳ ಬರುತ್ತಿದ್ದರೂ ತಮ್ಮ ವೃತ್ತಿ ಪವಿತ್ರವಾದುದೆಂಬ ತೃಪ್ತಿಯಿಂದ ಕಾರ್ಯನಿರ್ವಹಿಸುತ್ತಿದ್ದರು. ಅವರಲ್ಲಿ ಜ್ಞಾನ ಸಂಪತ್ತಿನ ಜತೆಗೆ ನೈತಿಕ ಸಂಪತ್ತು ಇತ್ತು. ಮಹಾರಾಜಾ ಕಾಲೇಜಿನಲ್ಲಿಯೂ ನನಗೆ ವಿದ್ಯಾರ್ಥಿ ವೇತನ ಲಭ್ಯವಾಗಿತ್ತು. ವಿದ್ಯಾರ್ಥಿ ವೇತನದ ಮೊತ್ತ ತಿಂಗಳಿಗೆ ಹದಿನೆಂಟು ರೂಪಾಯಿ. ವಿದ್ಯಾರ್ಥಿ ವೇತನ ಪಡೆಯುತ್ತಿದ್ದವರಿಗೆ ಕಾಲೇಜಿನ ಶುಲ್ಕವಿರಲಿಲ್ಲ. ಕಾಲೇಜಿನಲ್ಲಿ ಬಿಡುವಿದ್ದಾಗ ಕಡಿದಾಳ ಮಂಜಪ್ಪನವರು ವಾಚನಾಲಯದಲ್ಲಿ ಇದ್ದ ದಿನಪತ್ರಿಕೆಗಳನ್ನು ತಪ್ಪದೆ ಓದುತ್ತಿದ್ದರು.

ಮಹಾತ್ಮಾಗಾಂಧಿಯಂತಹ ರಾಷ್ಟ್ರಭಕ್ತರ ಭಾಷಣಗಳೂ, ಲೇಖನಗಳೂ ಅವರ ಮನಸ್ಸಿನ ಮೇಲೆ ಬಹಳ ಪರಿಣಾಮವನ್ನುಂಟು ಮಾಡಿದ್ದವು. ದಿನಪತ್ರಿಕೆಗಳಲ್ಲೂ ವಿಚಾರ ಸಂಕಿರಣಗಳಲ್ಲೂ ರಾಜಕಾರಣ ಮತ್ತು ಅರ್ಥಶಾಸ್ತ್ರಕ್ಕೆ ಸಂಬಂಧಪಟ್ಟ ಲೇಖನಗಳನ್ನು ಓದುತ್ತಿದ್ದರಿಂದ ಪರೀಕ್ಷಾ ವಿಷಯಗಳಾಗಿದ್ದ ರಾಜಕೀಯಶಾಸ್ತ್ರ ಮತ್ತು ಅರ್ಥ ಶಾಸ್ತ್ರಗಳಿಗೆ ಸಂಬಂಧಪಟ್ಟ ವಿಚಾರಗಳು ತಿಳಿಯುತ್ತಿದ್ದವು. ಹೇಗಲ್, ಕ್ಯಾಂಟ್, ವಾಲ್ಟೇರ್, ರೂಸ್ಸೋ ಮುಂತಾದ ದಾರ್ಶನಿಕರ ಕೃತಿಗಳನ್ನೂ ಗ್ರೀಕ್ ಮಹಾಕವಿ ಹೋಮರನ 'ಇಲಿಯಡ್ ಮತ್ತು ಒಡಿಸ್ಸಿ' ಮಹಾಕಾವ್ಯಗಳನ್ನೂ, ಗಿಬ್ಬನ್ನ ಅವರ 'ಉನ್ನತಿ ಮತ್ತು ಅವನತಿ' ಗ್ರಂಥವನ್ನೂ ರವೀಂದ್ರನಾಥ ಟಾಗೋರ, ಬರ್ನಾರ್ಡ್ ಷಾ, ಟಾಲ್‌ಸ್ಟಾಯ್ ಮುಂತಾದವರ ಕೃತಿಗಳನ್ನು ಓದಿರುವುದರಿಂದ ಅವರ ಮನಸ್ಸು ಬಹಳ ವಿಕಾಸಗೊಂಡಿತ್ತು. ಅಂದು ಜ್ಞಾನ ಸಂಪಾದನೆ ವಿದ್ಯಾರ್ಥಿಗಳ ಮುಖ್ಯ ಗುರಿಯಾಗಿದ್ದರೆ; ಇಂದು ಪರೀಕ್ಷೆಯಲ್ಲಿ ಹೇಗಾದರೂ ಮಾಡಿ ಉತ್ತೀರ್ಣರಾಗುವುದು ಗುರಿಯಾಗಿದೆ.

**ಪ್ರಶ್ನೆಗಳು**

43(ಅ). ಮನಸ್ಸು ಬಹಳಷ್ಟು ವಿಕಾಸಗೊಳ್ಳುವುದು ಯಾವಾಗ?

43(ಬ). ಕಡಿದಾಳ ಮಂಜಪ್ಪನವರ ಕಾಲದಲ್ಲಿ ಮಹಾರಾಜ ಕಾಲೇಜಿನ ಶೈಕ್ಷಣಿಕ ವಾತಾವರಣ ಹೇಗಿತ್ತು?

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 x 5 = 5**

44. ನಿಮ್ಮನ್ನು ಮಂಗಳೂರಿನ ರಾಣಿಅಬ್ಬಕ್ಕ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಅಕುಲ' ಎಂದು ಭಾವಿಸಿಕೊಂಡು ನಿಮ್ಮ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೋರಿ ಮುಖ್ಯೋಪಾಧ್ಯಯರಿಗೊಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ತುಮಕೂರಿನ ವೀರಮದಕರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ದೀಕ್ಷಾ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ಬರುವಂತೆ ಆಹ್ವಾನಿಸಿ ಮಡಿಕೇರಿಯಲ್ಲಿರುವ ದಿವ್ಯ ಎಂಬ ಹೆಸರಿನ ನಿಮ್ಮ ಅಕ್ಕನಿಗೊಂದು ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1 x 5 = 5**

**45.** ಗ್ರಂಥಾಲಯಗಳ ಮಹತ್ವ

**ಅಥವಾ**

ಸಾಮಾಜಿಕ ಜಾಲತಾಣಗಳ ಮಹತ್ತ್ವ

# ಉಪನಿರ್ದೇಶಕರು (ಆಡಳಿತ) ರವರ ಕಚೇರಿ
# ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

## 2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು

## ವಿಷಯ : ಪ್ರಥಮ ಭಾಷೆ – ಕನ್ನಡ (01–K)

**ಅವಧಿ : 3 ಗಂಟೆ 15 ನಿಮಿಷ    ಅಭ್ಯಾಸ ಪತ್ರಿಕೆ – 02    ಗರಿಷ್ಠ ಅಂಕಗಳು : 100**

## ಮಾದರಿ ಉತ್ತರಗಳು

| ಕ್ರ.ಸಂ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ.**<br><br>**ಅಂಕ ಸೂಚಿ : ಪ್ರತಿ ಸರಿಯುತ್ತರಕ್ಕೆ 1 ಅಂಕ ನೀಡುವುದು.** | **6 x 1 = 6** |
| **1.** | **ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಾಕ್ಷರಗಳ ಸಂಖ್ಯೆ :**<br>A. 13    B. 25    C. 05    D. 10<br>**ಉತ್ತರ : B. 25** | |
| **2.** | **ಒಂದು ಪದವನ್ನೋ ವಾಕ್ಯವನ್ನೋ ಹೇಳಿ ಅದಕ್ಕೆ ಸಮಾನಾರ್ಥಕ ಪದವನ್ನೋ ವಾಕ್ಯವನ್ನೋ ಹೇಳುವಾಗ ಈ ಚಿಹ್ನೆಯನ್ನು ಬಳಸಲಾಗುತ್ತದೆ :**<br>A. ಅಲ್ಪವಿರಾಮ    B. ಆವರಣ    C. ಉದ್ಧರಣ    D. ಭಾವಸೂಚಕ<br>**ಉತ್ತರ : B. ಆವರಣ** | |
| **3.** | **ಕೃದಂತ ಭಾವನಾಮಕ್ಕೆ ಉದಾಹರಣೆಯಾಗುವ ಪದವಿದು :**<br>A. ನೋಟ    B. ನೋಡಲು    C. ನೋಡುವ    D. ನೋಡದ<br>**ಉತ್ತರ : A. ನೋಟ** | |

| | | |
|---|---|---|
| 4. | **ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವನ್ನು ಹೀಗೆ ಕರೆಯುವರು:**<br>A. ಸಾಮಾನ್ಯವಾಕ್ಯ B. ಪ್ರಶ್ನಾರ್ಥಕವಾಕ್ಯ C. ಮಿಶ್ರವಾಕ್ಯ D. ಸಂಯೋಜಿತವಾಕ್ಯ<br>**ಉತ್ತರ : C. ಮಿಶ್ರವಾಕ್ಯ** | |
| 5. | **ಯಣ್‌ಸಂಧಿಗೆ ಉದಾಹರಣೆಯಾದ ಪದವಿದು :**<br>A. ಕೋಟ್ಯನುಕೋಟಿ B ವಾಗ್ದೇವಿ C. ಏಕೈಕ D. ಸೂರ್ಯೋದಯ<br>**ಉತ್ತರ : A. ಕೋಟ್ಯನುಕೋಟಿ** | |
| 6. | **'ಸಾಕು' ಪದವು ಈ ಅವ್ಯಯಕ್ಕೆ ಉದಾಹರಣೆಯಾಗಿದೆ.**<br>A. ಅನುಕರಣಾವ್ಯಯ B. ಕ್ರಿಯಾರ್ಥಕಾವ್ಯಯ<br>C. ಸಂಬಂಧಾರ್ಥಕಾವ್ಯಯ D. ಅವಧಾರಣಾರ್ಥಕಾವ್ಯಯ<br>**ಉತ್ತರ : B. ಕ್ರಿಯಾರ್ಥಕಾವ್ಯಯ** | |
| **II.** | **ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.**<br>**ಅಂಕ ಸೂಚಿ : ಪ್ರತಿ ಸರಿಯುತ್ತರಕ್ಕೆ 1 ಅಂಕ ನೀಡುವುದು.** | **4 x 1 = 4** |
| 7. | ವ್ಯಯ : ಬಿಯ : : ವಂಧ್ಯಾ : **ಬಂಜೆ** | |
| 8. | ಪರ್ವತ : ರೂಢನಾಮ : : ವಿದ್ಯಾರ್ಥಿ : **ಅಂಕಿತನಾಮ** | |
| 9. | ನಲ್ಗುದುರೆ : ಕರ್ಮಧಾರಯ ಸಮಾಸ : : ತುದಿಮೂಗು: **ಅಂಶಿ ಸಮಾಸ** | |
| 10. | ಧೃತಿ : ಧೈರ್ಯ : : ದ್ರುಮ : **ಮರ** | |

| | | |
|---|---|---|
| III. | **ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**<br>**ಅಂಕ ಸೂಚಿ : ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿಯುತ್ತರಕ್ಕೆ 1 ಅಂಕ ನೀಡುವುದು** | **7 x 1 = 7** |
| 11. | **ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?**<br>**ಉತ್ತರ:–** ಶ್ರೀರಾಮನಿಗೆ ಸಮರ್ಪಿಸಲು ಶಬರಿ ಪರಿಮಳದ ಹೂವು, ಮಧುಪರ್ಕ ಮತ್ತು ರುಚಿಕರವಾದ ಹಣ್ಣು ಹಂಪಲು ಸಂಗ್ರಹಿಸಿದ್ದಳು. | |
| 12. | **ಯಶೋಭದ್ರೆಯು ರತ್ನ ಕಂಬಳಿಗಳನ್ನು ಯಾರಿಗೆ ಕೊಟ್ಟಳು?**<br>**ಉತ್ತರ:–** ಯಶೋಭದ್ರೆಯು ರತ್ನಕಂಬಳಿಗಳನ್ನು **ತನ್ನ ಸೊಸೆಯರಿಗೆ** ಹಂಚಿಕೊಟ್ಟಳು. | |
| 13. | **ಬ್ಲಾಕ್ ಔಟ್ ನಿಯಮವನ್ನು ಏತಕ್ಕಾಗಿ ಗಡಿ ಪ್ರದೇಶಗಳಲ್ಲಿ ಪಾಲಿಸುತ್ತಾರೆ?**<br>**ಉತ್ತರ:–** ಗಡಿ ಪ್ರದೇಶಗಳಲ್ಲಿ ಯುದ್ಧಕಾಲದಲ್ಲಿ **ರಾತ್ರಿವೇಳೆ ಶತ್ರು ಸೈನಿಕರು ವೈಮಾನಿಕ ದಾಳಿ ಮಾಡಲು ಅವಕಾಶವಾಗದಂತೆ** ವಿದ್ಯುತ್ ದೀಪ, ಬೆಂಕಿಯನ್ನು ಉರಿಸದೆ ಕತ್ತಲಿನಲ್ಲಿದ್ದು ರಕ್ಷಿಸಿಕೊಳ್ಳುವುದಕ್ಕಾಗಿ **'ಬ್ಲಾಕ್ ಔಟ್'** ನಿಯಮವನ್ನು ಪಾಲಿಸಲಾಗುತ್ತದೆ. | |
| 14. | **ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಯಾವ ಆರೋಪವನ್ನು ಹೊರಿಸಿದನು?**<br>**ಉತ್ತರ:–** ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ **ಹೊನ್ನಿನ ಕಳ್ಳತನದ** ಆರೋಪವನ್ನು ಹೊರಿಸಿದನು. | |
| 15. | **ಹಕ್ಕಿಯ ಕಣ್ಣುಗಳು ಯಾವುವು?**<br>**ಉತ್ತರ:– ಸೂರ್ಯ– ಚಂದ್ರರು** ಹಕ್ಕಿಯ ಕಣ್ಣುಗಳಾಗಿವೆ. | |
| 16. | **ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರ್‍ಯಾರು?**<br>**ಉತ್ತರ:–** ಅಶ್ವಿನಿದೇವತೆಗಳ ವರ ಬಲದಿಂದ ಜನಿಸಿದವರು **ನಕುಲ ಮತ್ತು ಸಹದೇವರು.** | |
| 17. | **ಪೆರಿಯಾರ್‌ರವರು ಹುಟ್ಟು ಹಾಕಿದ ಸಂಘಟನೆಯ ಹೆಸರೇನು?**<br>**ಉತ್ತರ :–** ಪೆರಿಯಾರ್‌ರವರು ಹುಟ್ಟು ಹಾಕಿದ ಸಂಘಟನೆಯ ಹೆಸರು **'ದ್ರಾವಿಡ ಕಳಗಂ'** | |

| | | |
|---|---|---|
| **IV.** | **ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** <br> **ಅಂಕ ಸೂಚಿ : ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳನ್ನು ನೀಡುವುದು.** | **10 x 2 = 20** |
| **18.** | **ವೂಲವರ್ಥ ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?** <br> **ಉತ್ತರ:–** ಲಂಡನ್ ನಗರದಲ್ಲಿನ 'ವೂಲವರ್ಥ' ಎಂಬ ಸ್ಟೇಷನರಿ ಅಂಗಡಿಯಲ್ಲಿ **ಎಲ್ಲ ತರಹದ ಸಾಮಾನುಗಳು ದೊರೆಯುತ್ತವೆ.** ಪ್ರಾಚೀನ ಮಹಾಕಾವ್ಯದಂತೆ ಇದೊಂದು ಮಹಾಕೋಶವಾಗಿದೆ. ಈ ಅಂಗಡಿಯ ವಿಧವಿಧದ ವಿಭಾಗಗಳನ್ನು ನಿರ್ಮಿಸಿದ ಬುದ್ಧಿಯ ಚಮತ್ಕಾರವು ನೋಡತಕ್ಕಂತಹುದು. **ಬೂಟು, ಕಾಲುಚೀಲ, ಚಣ್ಣ, ಸಾಬೂನು, ಔಷಧ, ಪುಸ್ತಕ, ಅಡುಗೆಯ ಪಾತ್ರೆ, ಎಲೆಕ್ಟ್ರಿಕ್ ದೀಪದ ಸಾಮಾನುಗಳು, ಫೋಟೋ, ಅಡವಿಯ ಹೂವು, ಯುದ್ಧ ಸಾಮಗ್ರಿಗಳು** ಎಲ್ಲವೂ ಇಲ್ಲಿ ದೊರೆಯುತ್ತವೆ. | |
| **19.** | **ವೃಷಭಾಂಕ ಅರಸನು ಯಶೋಭದ್ರೆಯ ಅರಮನೆಗೆ ಬರಲು ಕಾರಣವೇನು?** <br> **ಉತ್ತರ :** ಉಜ್ಜಯಿನಿ ಪಟ್ಟಣವನ್ನು ಆಳುತ್ತಿದ್ದ ವೃಷಭಾಂಕನೆಂಬ ಅರಸನು ಕೊಂಡುಕೊಳ್ಳಲಾಗದ ಲಕ್ಷದಿನಾರಗಳ ಬೆಲೆಯುಳ್ಳ ರತ್ನ ಕಂಬಳಿಗಳನ್ನು ಯಶೋಭದ್ರೆ ತೆಗೆದುಕೊಂಡು ತನ್ನ ಮೂವತ್ತೇರಡು ಸೊಸೆಯಂದಿರಿಗೆ ಹಂಚಿದಳು. ಅವರು ಆ ರತ್ನಕಂಬಳಿಯ ತುಂಡುಗಳನ್ನು ತಮ್ಮ ತಮ್ಮ ಚಪ್ಪಲಿಗಳಿಗೆ ಸೇರಿಸಿದರು ಎಂಬ ಮಾತನ್ನು ಕೇಳಿ ಆಶ್ಚರ್ಯಪಟ್ಟು ಅವರ ಐಶ್ವರ್ಯವನ್ನು ನೋಡುವೆನು ಎಂದು ಯಶೋಭದ್ರೆಯ ಅರಮನೆಗೆ ಬಂದನು. | |
| **20.** | **ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವವು?** <br> **ಉತ್ತರ :–** ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ "ಅಯ್ಯೋ ಆ ಮಹಿಳೆ ಯಾವ ರೀತಿ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ನಾನು ಈಗ ಆ ಮನೆಯ ಕದವನ್ನು ತಟ್ಟಿದರೆ ಪರಿಣಾಮ ಏನಾಗಬಹುದು? ವಿಮಾನ ದಾಳಿಯಿಂದ ತಪ್ಪಿಸಿಕೊಳ್ಳಲು 'ಬ್ಲಾಕ್‌ಔಟ್' ನಿಯಮ ಪಾಲಿಸಲಾಗುತ್ತಿದೆ. ಇಂತಹ ಈ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ? ಎಂಬ ಪ್ರಶ್ನೆಗಳು ಮೂಡಿದವು. | |
| **21.** | **ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರ ಅಭಿಪ್ರಾಯಗಳನ್ನು ತಿಳಿಸಿ.** <br> **ಉತ್ತರ:–** ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು "ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ. ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆ ಜನ್ಮಸಿದ್ಧ ಹಕ್ಕಾಗಬೇಕು" ಎಂದು ಹೇಳಿದ್ದಾರೆ. | |

| | | |
|---|---|---|
| 22. | **ಕವಿ ಬೇಂದ್ರೆಯವರು ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೇಗೆ ಹೋಲಿಸಿದ್ದಾರೆ?**<br>**ಉತ್ತರ:–** ಹಕ್ಕಿಯು ಸೂರ್ಯಚಂದ್ರರನ್ನೇ ತನ್ನ ಕಣ್ಣಾಗಿಸಿಕೊಂಡು, ಚುಕ್ಕೆಗಳ ಮಾಲೆಯನ್ನು ಧರಿಸಿಕೊಂಡಿದೆ. ನೀಲ–ಮೇಘ ಮಂಡಲದ ಸಮಬಣ್ಣದಲ್ಲಿ ಮಿನುಗುತ್ತಿದೆ. ಮುಗಿಲಿನಲ್ಲಿ ರೆಕ್ಕೆ ಬಡಿಯುತ್ತಾ ಹಾರುತ್ತಿದೆ ಹೀಗೆ ಹಕ್ಕಿಯ ಹಾರಾಟವನ್ನು ಆಕಾಶಕ್ಕೆ ಹೋಲಿಸಿದ್ದಾರೆ. | |
| 23. | **ಯಜ್ಞಾಶ್ವದ ಹಣೆಯ ಪಟ್ಟಿಯಲ್ಲಿ ಏನೆಂದು ಬರೆಯಲಾಗಿತ್ತು?**<br>**ಉತ್ತರ:–** ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ **"ಭೂಮಂಡಲದಲ್ಲಿ ಕೌಸಲ್ಯ ಮಗನಾದ ರಾಮ ಒಬ್ಬನೇ ವೀರನು. ಇದು ಯಜ್ಞದಕುದುರೆ, ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರೂ ತಡೆಯಲಿ"** ಎಂದೂ ಬರೆಯಲಾಗಿತ್ತು. | |
| 24. | **ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರ ಅಭಿಪ್ರಾಯವೇನು?**<br>**ಉತ್ತರ :** ಅಂದವಾದ ಅಕ್ಷರ, ಒಳ್ಳೆಯ ಬರೆವಣಿಗೆ, ಶಿಕ್ಷಣದ ಆವಶ್ಯಕ ಅಂಶವಲ್ಲವೆಂಬ ಭಾವನೆ ಇಂಗ್ಲೆಂಡ್‌ಗೆ ಹೋಗುವವರೆಗೆ ಗಾಂಧೀಜಿಯವರಲ್ಲಿತ್ತು. ಅನಂತರ ದಕ್ಷಿಣ ಆಫ್ರಿಕಾಕ್ಕೆ ಹೋದ ಮೇಲೆ, ಅಲ್ಲಿ ಸುಶಿಕ್ಷಿತ ಯುವಕರ ಮತ್ತು ವಕೀಲರ ಮುತ್ತು ಪೋಣಿಸಿದಂತಿದ್ದ ಸುಂದರ ಬರೆವಣಿಗೆ ನೋಡಿ, ಅವರಿಗೆ ನಾಚಿಕೆಯೂ ಪಶ್ಚಾತ್ತಾಪವೂ ಉಂಟಾಯಿತು. ಕೆಟ್ಟ ಅಕ್ಷರದ ಬರೆವಣಿಗೆ ಅಪಕ್ವ ಮತ್ತು ಅಪೂರ್ಣ ಶಿಕ್ಷಣದ ಚಿಹ್ನೆ ಎಂದು ಅರಿತರು. ಒಳ್ಳೆಯ ಬರೆವಣಿಗೆ ಉತ್ತಮ ಶಿಕ್ಷಣದ ಅವಶ್ಯವಾದ ಅಂಶವೆಂಬುದನ್ನು ಪ್ರತಿಯೊಬ್ಬ ಯುವಕನೂ, ಯುವತಿಯೂ ತಿಳಿದುಕೊಳ್ಳಲಿ ಎಂಬುದು ಅಂದವಾದ ಬರೆವಣಿಗೆಯ ಬಗ್ಗೆ ಗಾಂಧೀಜಿಯವರು ಅಭಿಪ್ರಾಯವಾಗಿದೆ. | |
| 25. | **ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?**<br>**ಉತ್ತರ:** ಒಡೆಯನ ಮನೆಯ ಅಂಗಳದಲ್ಲಿ ಮಾವಿನ ಮರಗಳು (ಹಚ್ಚಹಸುರಾಗಿ) ಮೈ ತುಂಬಿ ನಿಂತವೆ. ಆ ಪ್ರಕೃತಿಯ ಮಡಿಲಲ್ಲಿ ಹಕ್ಕಿಗಳು ರೆಕ್ಕೆ ಬಿಚ್ಚಿ ಹಾರುತ್ತಿವೆ. ಪ್ರಕೃತಿಯ ಸೊಬಗನ್ನು ಕೋಗಿಲೆಗಳು ಮನ ದುಂಬಿ ಹಾಡುತ್ತಿವೆ. ಈ ಭೂಮಿಗೆ ಕಡಲು ಉಕ್ಕಿ ಹರಿಯುವ ಸಂಭ್ರಮ ವ್ಯಕ್ತವಾಗಿದೆ. | |
| 26. | **ನೆನಪಿನಲ್ಲಿ ಹಚ್ಚೆ ಚುಚ್ಚಿದಂತಿರುವ ಆ ದಿನದ ಬಗ್ಗೆ ಗೋವಿಂದ ಪೈ ಅವರು ಏನೆಂದು ಹೇಳಿದ್ದಾರೆ?**<br>**ಉತ್ತರ :** ಪೈ ಅವರು ಹಾಡೊಂದನ್ನು ಕೇಳಿ ತಾವು ನಾಟಕವೊಂದನ್ನು ಬರೆದ ಬಗ್ಗೆ ತಿಳಿಸುತ್ತಾ "ಕೇಳಿದ ಹಾಡಿಗೂ ಬರೆದ ನಾಟಕಕ್ಕೂ ಭೇದವಿಷ್ಟೇ, ಅದು ತತ್ಸಮ, ಇದು ತದ್ಭವ. ಮುಗಿಸಿದ ನಾಟಕದ ಕಥೆ ಇಳಿಯಷ್ಟಾದರೂ ನೆನಪಿಗೆ ಬಾರದು. ಹೀಗೆ ಸಾಹಿತ್ಯಮಂದಿರದ ಹೊಸ್ತಿಲಲ್ಲಿ ಅಕಾಂಡವಾಗಿ ಎಡವಿದೆ, ಮುಚ್ಚುಕದಕ್ಕೆ ಡಿಕ್ಕಿ ಹೊಡೆದೆ, ಅಗುಳಿ ಇಲ್ಲದ ಬಾಗಿಲು ಹಾರಿತು, ಒಳಹೊಕ್ಕೆ. ನನ್ನ ಜೀವಮಾನದಲ್ಲಿ ಅದೊಂದು ಅಮಗ. ನೆನಪಿನಲ್ಲಿ ಹಚ್ಚೆ ಚುಚ್ಚಿದಂತಿರುವ ಆ ದಿನವನ್ನು ಎಂದಿಗೂ ಮರೆಯುವಂತಿಲ್ಲ." ಎಂದು ಹೇಳಿದ್ದಾರೆ. | |

| | | |
|---|---|---|
| 27. | **ಭಗತ್ ಸಿಂಗ್ ಅಮರನಾದ ಬಗೆ ಹೇಗೆ?**<br>**ಉತ್ತರ:** ಭಗತ್‌ಸಿಂಗ್ ಜಲಿಯನ್ ವಾಲಾಬಾಗಿನ ಘಟನೆಯಿಂದ ಆಕ್ರೋಶಿತನಾಗಿ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಇದರ ಫಲವಾಗಿ ತನ್ನ ಸಹಚರರಾದ ಸುಖ್‌ದೇವ್, ರಾಜ್‌ಗುರು, ಭಟುಕೇಶ್ವರ ದತ್ತರೊಂದಿಗೆ ಮರಣ ದಂಡನೆಗೆ ಈಡಾಗಿ ಹಸನ್ಮುಖಿಯಾಗಿ ತಾಯಿ ಭಾರತಾಂಬೆಯ ಸ್ವಾತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರಯೋಧನಾಗಿ ಅಮರನಾಗುತ್ತಾನೆ. | |
| V. | **ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**<br>**ಅಂಕ ಸೂಚಿ:**<br>**ಕಾಲ, ಸ್ಥಳ – 1 ಅಂಕ**<br>**ಕೃತಿಗಳು, ಪ್ರಶಸ್ತಿಗಳು/ಬಿರುದುಗಳು – 1 ಅಂಕ**<br>**ವಾಕ್ಯರೂಪ, ಭಾಷಾ ಶೈಲಿ – 1 ಅಂಕ** | **2 x 3 = 6** |
| 28. | **ವಿ.ಕೃ.ಗೋಕಾಕ್**<br>**ವಿನಾಯಕ** ಕಾವ್ಯನಾಮದಿಂದ ಪ್ರಸಿದ್ಧರಾಗಿರುವ **ಡಾ. ವಿನಾಯಕ ಕೃಷ್ಣ ಗೋಕಾಕ** ಇವರು **ಕ್ರಿ.ಶ.1909** ರಲ್ಲಿ **ಹಾವೇರಿ ಜಿಲ್ಲೆಯ ಸವಣೂರು** ಎಂಬ ಊರಿನಲ್ಲಿ ಜನಿಸಿದ್ದಾರೆ. ಇವರು **ಸಮುದ್ರದಾಚೆಯಿಂದ , ಸಮುದ್ರಗೀತೆಗಳು , ಪಯಣ, ಉಗಮ, ಇಜ್ಜೋಡು, ಸಮರಸವೇ ಜೀವನ, ಭಾರತ ಸಿಂಧುರಶ್ಮಿ** ಮೊದಲಾದ ಕೃತಿಗಳನ್ನು ಬರೆದಿದ್ದಾರೆ. ಇವರ **'ದ್ಯಾವಾ ಪೃಥಿವೀ'** ಕೃತಿಗೆ **'ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ,** ಸಮಗ್ರ ಸಾಹಿತ್ಯಕ್ಕಾಗಿ **'ಜ್ಞಾನಪೀಠ ಪ್ರಶಸ್ತಿ'** ಬಂದಿವೆ. ಭಾರತ ಸರ್ಕಾರ **ಪದ್ಮಶ್ರೀ ಪುರಸ್ಕಾರ** ನೀಡಿ ಗೌರವಿಸಿದೆ. | |
| 29. | **ಲಕ್ಷ್ಮೀಶ**<br>**ಕವಿ** ಲಕ್ಷ್ಮೀಶ **ಕ್ರಿ.ಶ.1550** ರಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕಡೂರು ತಾಲೂಕಿನ **ದೇವನೂರಿನಲ್ಲಿ** ಜನಿಸಿದನು. ಈತನಿಗೆ **ಲಕ್ಷ್ಮೀರಮಣ, ಲಕ್ಷ್ಮೀಪತಿ** ಎಂಬ ಹೆಸರುಗಳೂ ಇವೆ. **"ಜೈಮಿನಿಭಾರತ"** ವೆಂಬ ಪ್ರಸಿದ್ಧ ಕೃತಿಯನ್ನು ಬರೆದಿದ್ದಾನೆ. ಲಕ್ಷ್ಮೀಶ ಕವಿಗೆ **ಉಪಮಾಲೋಲ, ಕರ್ಣಾಟಕವಿ ಚೂತವನಚೈತ್ರ** ಎಂಬ ಬಿರುದುಗಳಿವೆ. | |

| | | |
|---|---|---|
| **VI.** | ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ.<br>**ಅಂಕ ಸೂಚಿ: ಪ್ರಸ್ತಾರ ಹಾಕುವುದು – 1 ಅಂಕ**<br>**ಗಣ ವಿಭಾಗ – 1 ಅಂಕ**<br>**ಛಂದಸ್ಸಿನ ಹೆಸರು – 1 ಅಂಕ** | **1 x 3 = 3** |
| **30.** | ಏನು ಹೇಳ್ವೆ ಕರ್ಣ ಚಿತ್ತ<br>ಗ್ಲಾನಿ ಯಾವುದು ಮನಕೆ ಕುಂತೀ<br>ಸೂನುಗಳ ಬೆಸಕೈಸಿಕೊಂಬುದು ಸೇರದೇ ನಿನಗೆ | |

| 3 | 4 | 3 | 4 | | | | |
|---|---|---|---|---|---|---|---|
| – U | – – | –U | – – | = 14 | | | |
| ಏನು | ಹೇಳ್ವೆ | ಕರ್ಣ | ಚಿತ್ತ | | | | |
| 3 | 4 | 3 | 4 | = 14 | | | |
| – U | – U U | UUU | – – | | | | |
| ಗ್ಲಾನಿ | ಯಾವುದ ು | ಮನಕೆ | ಕುಂತೀ | | | | |
| 3 | 4 | 3 | 4 | 3 | 4 | 1ಗುರು | = 21+ 1ಗುರು |
| – U | UU UU | –U | – U U | –U | –UU | – | |
| ಸೂನ ು | ಗಳ ಬೆಸ | ಕೈಸಿ | ಕೊಂಬುದ ು | ಸೇರ | ದೇನಿನ | ಗೆ | |

**ಛಂದಸ್ಸು– ಭಾಮಿನಿ ಷಟ್ಪದಿ**

| | | |
|---|---|---|
| **VII.** | ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿ.<br>**ಅಂಕಸೂಚಿ: ಅಲಂಕಾರದ ಹೆಸರು – 1 ಅಂಕ**<br>**ಲಕ್ಷಣ ಬರೆಯುವುದು – 1 ಅಂಕ**<br>**ಅಂಶಗಳನ್ನು ಗುರುತಿಸಿ ಸಮನ್ವಯಗೊಳಿಸುವುದು – 1 ಅಂಕ** | **1 x 3 = 3** |
| **31.** | ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು. ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?<br>ಅಲಂಕಾರ :– ಅರ್ಥಾಂತರನ್ಯಾಸಾಲಂಕಾರ. | |

| | | |
|---|---|---|
| | **ಲಕ್ಷಣ :–** ಒಂದು ವಿಶೇಷವಾಕ್ಯವನ್ನು ಸಾಮಾನ್ಯ ವಾಕ್ಯದಿಂದ ಅಥವಾ ಸಾಮಾನ್ಯ ವಾಕ್ಯವನ್ನು ವಿಶೇಷವಾಕ್ಯದಿಂದ ಸಮರ್ಥನೆ ಮಾಡುವುದೇ ಅರ್ಥಾಂತರನ್ಯಾಸಾಲಂಕಾರವೆನಿಸುತ್ತದೆ.<br>**ಉಪಮೇಯ** (ವಿಶೇಷವಾಕ್ಯ):– ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು.<br>**ಉಪಮಾನ** (ಸಾಮಾನ್ಯ ವಾಕ್ಯ) :– ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?<br>**ಸಮನ್ವಯ:–** ಇಲ್ಲಿ ಉಪಮೇಯವಾದ 'ಆತನು ಪರೀಕ್ಷೆಯಲ್ಲಿ ಪ್ರಥಮಸ್ಥಾನ ಪಡೆದು ಉತ್ತೀರ್ಣನಾದನು' ಎಂಬ ವಿಶೇಷವಾಕ್ಯವನ್ನು ಉಪಮಾನವಾದ 'ಬುದ್ಧಿವಂತರಾದ ಮಕ್ಕಳಿಗೆ ಪರೀಕ್ಷೆಯೊಂದು ಲೆಕ್ಕವೇ?' ಎಂಬ ಸಾಮಾನ್ಯ ವಾಕ್ಯದಿಂದ ಸಮರ್ಥಿಸಲಾಗಿದೆ. | |
| **VIII.** | **ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ.**<br>**ಅಂಕ ಸೂಚಿ: ಗಾದೆಯ ಮಹತ್ವದ ವಿವರಣೆ – 1 ಅಂಕ**<br>**ಉದಾಹರಣೆಯೊಂದಿಗೆ ಅರ್ಥವಿವರಣೆ – 1 ಅಂಕ**<br>**ಭಾಷಾ ಶೈಲಿ ಮತ್ತು ಪದಬಂಧ – 1 ಅಂಕ** | **1 x 3 = 3** |
| **32.** | **ಆಳಾಗಬಲ್ಲವನು ಅರಸನಾಗಬಲ್ಲ**<br>ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ 'ಆಳಾಗಬಲ್ಲವನು ಅರಸನಾಗಬಲ್ಲ' ಎಂಬ ಗಾದೆಯೂ ಸಹ ಒಂದಾಗಿದೆ.<br>ಕಾಯಕದ ಘನತೆಯನ್ನು ಬಡವರು ಶ್ರೀಮಂತರೆನ್ನದೆ ತಿಳಿದುಕೊಳ್ಳಬೇಕಾಗಿರುವುದು ಅಗತ್ಯ. ತಾನು ಪುರುಷ, ಗೃಹಕೃತ್ಯಗಳನ್ನು ಮಾಡುವುದು ಅವಮಾನ, ಎರಡು ಪದವಿಗಳನ್ನು ಪಡೆದಿರುವವನು, ಹಳ್ಳಿಯಲ್ಲಿ ಕೃಷಿ ಮಾಡುವುದು ಅವಮಾನ – ಎಂಬಂಥ ಧೋರಣೆ ಸರಿಯಿಲ್ಲ. ಸಮಾನ್ಯ ಮನುಷ್ಯ ತನ್ನ ದುಡಿಮೆಯ ಬಲದಿಂದ ಎತ್ತರಕ್ಕೆ ಏರಿರುವ ಉದಾಹರಣೆಗಳು ಸಾಕಷ್ಟಿವೆ. ಆಳಿನ ದುಡಿಮೆ ಸಮಸ್ಯೆ ಸ್ಥಿತಿಗತಿಗಳನ್ನು ಸ್ವತಃ ಅವರೊಂದಿಗೆ ಬೆರೆತು ಅರ್ಥಮಾಡಿಕೊಂಡರಷ್ಟೇ ಅರಸ ಅದನ್ನು ಪರಿಹರಿಸಲು ಸಾಧ್ಯ.<br>**ಅಥವಾ**<br>**ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ**<br>ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ ಸತ್ಯಕ್ಕೆ | |

| | | |
|---|---|---|
| | ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ' ಎಂಬ ಗಾದೆಯೂ ಸಹ ಅಡಗಿರುತ್ತದೆ.<br>ದೈನಂದಿನ ವ್ಯವಹಾರದಲ್ಲಿ ಮನುಷ್ಯನು ಹಲವಾರು ಸಂಗತಿಗಳನ್ನು ಹೇಳುತ್ತಲೇ ಇರುತ್ತಾನೆ. ಇದ್ದಂತೆ ಹೇಳಿದರೆ ಸತ್ಯ; ಅದನ್ನೇ ತಿರುಚಿ ಹೇಳಿದರೆ ಸುಳ್ಳು ಎನಿಸುತ್ತದೆ. ಸುಳ್ಳು ಕ್ಷಣಿಕ ಸುಖವನ್ನು ನೀಡಿದರೂ ಮುಂದೆ ಅದು ಶಾಶ್ವತವಾದ ಅಪಾಯವನ್ನುಂಟು ಮಾಡುತ್ತದೆ. ಒಂದು ಸುಳ್ಳು ಹೇಳಿದರೆ ಆ ಸುಳ್ಳನ್ನು ಸತ್ಯ ಎಂದು ನಂಬಿಸಲು ಸುಳ್ಳಿನ ಸರಮಾಲೆಯನ್ನೇ ಹೆಣೆಯಬೇಕಾಗುತ್ತದೆ. ಮುಂದೊಂದಿನ ಸತ್ಯವು ತಿಳಿದಾಗ ಸುಳ್ಳು ಹೇಳಿದವನು ಅಪಖ್ಯಾತಿಗೆ ಒಳಗಾಗಬೇಕಾಗುತ್ತದೆ. ಆದರೆ ಸತ್ಯ ಆ ರೀತಿಯಲ್ಲ; ಒಮ್ಮೆ ಹೇಳಿದ ಸತತದ ಮಾತು ಎಂದೆಂದಿಗೂ ಸತ್ಯವಾಗಿಯೇ ಇರುತ್ತದೆ. ಇದನ್ನು ನಂಬಿಸಲು ಮನ್ನಣೆ ಸಿಗುತ್ತದೆ; ಅಸತ್ಯವಂತನನ್ನು ಸಮಾಜ ತಿರಸ್ಕರಿಸುತ್ತದೆ. ಇದಕ್ಕೆ 'ವೃಕ್ಷಸಾಕ್ಷಿ' ಎಂಬ ಪಂಚತಂತ್ರದ ಕಥೆಯ ಪಾತ್ರಗಳೇ ಉದಾಹರಣೆ. | |
| **IX.** | **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**<br>**ಅಂಕ ಸೂಚಿ: ಕರ್ತೃ, ಆಕರ ಕೃತಿ ಮತ್ತು ಪತ್ಯದ ಹೆಸರು – 1 ಅಂಕ**<br>**ಸಂದರ್ಭದ ವಿವರಣೆ – 1 ಅಂಕ**<br>**ಸ್ವಾರಸ್ಯ ಮತ್ತು ಶೈಲಿ – 1 ಅಂಕ** | **6 x 3 = 18** |
| **33.** | **"ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ!"**<br>**ಆಯ್ಕೆ:–** ಈ ವಾಕ್ಯವನ್ನು **ಪು.ತಿ. ನರಸಿಂಹಾಚಾರ್** ಅವರು ರಚಿಸಿರುವ **'ಶಬರಿ'** ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.<br>**ಸಂದರ್ಭ:** ರಾಮನು ಶಬರಿಯ ಅತಿಥಿ ಸತ್ಕಾರದ ಪರಿಯನ್ನು ಕುರಿತು "ನಿನ್ನ ಆತಿಥ್ಯದ ಸವಿಯು ಅಯೋಧ್ಯೆಯ ಅರಮನೆಯ ಆತಿಥ್ಯಕ್ಕಿಂತ ಮಿಗಿಲಾದುದು, ಇಷ್ಟು ಪ್ರೀತಿಯನ್ನು ತೋರುವ ನಿನ್ನನ್ನು ತಾಯಿ ಎಂದು ತಿಳಿಯುವೆವು" ಎಂದ ಸಂದರ್ಭದಲ್ಲಿ ಶಬರಿಯು ಈ ಮಾತನ್ನು ಹೇಳುತ್ತಾಳೆ.<br>**ಸ್ವಾರಸ್ಯ:–** "ರಾಮನ ಪ್ರೀತಿಯ ಮಾತುಗಳು ಅವನ ರೂಪಿನಂತೆ ಮಧುರವಾದುದು" ಎಂದು ಹೇಳುವ ಮೂಲಕ ಶಬರಿಯು ರಾಮನ ವ್ಯಕ್ತಿತ್ವವನ್ನು ಬಹುಸ್ವಾರಸ್ಯಪೂರ್ಣವಾಗಿ ವರ್ಣಿಸುತ್ತಾಳೆ. | |
| **34.** | **"ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು"**<br>**ಆಯ್ಕೆ:** ಈ ವಾಕ್ಯವನ್ನು **'ಭಾಗ್ಯಶಿಲ್ಪಿಗಳು'** ಎಂಬ ಗದ್ಯಪಾಠದ ಭಾಗವಾಗಿ **ಶ್ರೀ ಡಿ. ಎಸ್. ಜಯಪ್ಪಗೌಡ** ಅವರು ರಚಿಸಿದ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಸರ್. ಎಂ ವಿಶ್ವೇಶ್ವರಯ್ಯ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.<br>**ಸಂದರ್ಭ:** ವಿಶ್ವೇಶ್ವರಯ್ಯ ಅವರು "ಈಗಾಗಲೇ ಅನೇಕ ಸಾಧನೆಗಳನ್ನು ಮಾಡಿ ಕೀರ್ತಿ ಗಳಿಸಿರುವುದರ ಜತೆಗೆ ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಫೀಪ್ ಜಲಾಶಯಕ್ಕೆ ಸ್ವತಃ ತಾವೇ ಅನ್ವೇಷಣೆ ಮಾಡಿದ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಿ | |

| | | |
|---|---|---|
| | ಯಶಸ್ಸು ಪಡೆದರು" ಎಂದು ಹೇಳುವ ಸಂದರ್ಭದಲ್ಲಿ ಲೇಖಕರು ಈ ಮಾತನ್ನು ಹೇಳುತ್ತಾರೆ.<br>**ಸ್ವಾರಸ್ಯ:** ವಿಶ್ವೇಶ್ವರಯ್ಯ ಅವರಿಗೆ ಲಭಿಸಿದ ಸಾಧನೆಗಳ ಸರಮಾಲೆ, ಅವರಲ್ಲಿದ್ದ ಬುದ್ಧಿಶಕ್ತಿ ಹಾಗೂ ಅನ್ವೇಷಣಾ ಸಾಮರ್ಥ್ಯವನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ. | |
| **35.** | **"ತಸ್ಕರಸ್ಯಾನೃತಂ ಬಲಂ"**<br>**ಆಯ್ಕೆ:** ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.<br>**ಸಂದರ್ಭ:** ದುಷ್ಟಬುದ್ಧಿಯು ಧರ್ಮಬುದ್ಧಿಯ ಮೇಲೆ ಹೊನ್ನನ್ನು ಕದ್ದದ್ದು ನೀನೆ ಎಂದು ಹೇಳುವ ಸಂದರ್ಭದಲ್ಲಿ ಅತಿ ಮೊಸದ ಮನಸ್ಸಿನಿಂದ, ಹಣದ ದುರಾಸೆಯಿಂದ ಬುದ್ಧಿಕೆಡಿಸಿಕೊಂಡು ಈ ಮಾತನ್ನು ಹೇಳುತ್ತಾನೆ.<br>**ಸ್ವಾರಸ್ಯ:** ವ್ಯಾಪಾರಿ ವೃತ್ತಿಧರ್ಮದಲ್ಲಿ ಧರ್ಮಬುದ್ಧಿಯು ಅಧರ್ಮಬುದ್ಧಿಯಾಗಿ ಸುಳ್ಳು ಹೇಳುವ ಮನಸ್ಸು ಉಂಟಾಗುತ್ತದೆ ಎಂಬುದನ್ನು ಈ ಮಾತಿನಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ. | |
| **36.** | **"ಬಾಯ್ದಂಬುಲಕೆ ಕೈಯಾನುವರೆ."**<br>**ಆಯ್ಕೆ:** ಈ ವಾಕ್ಯವನ್ನು ಕುಮಾರವ್ಯಾಸನೆಂದು ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.<br>**ಸಂದರ್ಭ:** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕವಿಯು ಹೇಳುತ್ತಾನೆ.<br>**ಸ್ವಾರಸ್ಯ:** "ಕರ್ಣ ನೀನು ಹಸ್ತಿನಾಪುರದ ರಾಜನಾದರೆ ನಿನಗೆ ಕೌರವರು ಮತ್ತು ಪಾಂಡವರು ಸೇವೆಯನ್ನು ಮಾಡುವರು ಅದನ್ನು ಬಿಟ್ಟು ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದು ಸರಿಯೇ" ಎಂದು ಕೃಷ್ಣನು ಹೇಳಿರುವುದು ಸ್ವಾರಸ್ಯಪೂರ್ಣವಾಗಿದೆ. | |
| **37.** | **"ಹಸುರು ಹಸುರಿಳೆಯುಸಿರೂ"**<br>**ಆಯ್ಕೆ:–** ಈ ವಾಕ್ಯವನ್ನು "ಕುವೆಂಪು" ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಕುಪ್ಪಳ್ಳಿ ವೆಂಕಟಪ್ಪ ಪುಟ್ಟಪ್ಪ ಅವರು ರಚಿಸಿರುವ "ಪಕ್ಷಿಕಾಶಿ" ಕವನ ಸಂಕಲನದಿಂದ ಆಯ್ದ "ಹಸುರು" ಎಂಬ ಕವನದಿಂದ ಆರಿಸಲಾಗಿದೆ.<br>**ಸಂದರ್ಭ:–** ಕುವೆಂಪು ಅವರು ಕುಪ್ಪಳ್ಳಿಯ ಕವಿಶೈಲದಲ್ಲಿ ಆಶ್ವಯುಜ ಮಾಸದ ನವರಾತ್ರಿಯಲ್ಲಿ ಕುಳಿತು, ಆನಂದದಿಂದ ಸವಿದ ಪ್ರಕೃತಿಯ ಹಚ್ಚಹಸುರಿನ ಸೌಂದರ್ಯದ ವರ್ಣನೆಯನ್ನು ಮಾಡುವ ಸಂದರ್ಭದಲ್ಲಿ ಈ ಮಾತು ಬಂದಿದೆ.<br>**ಸ್ವಾರಸ್ಯ:–** "ಆಶ್ವಯುಜ ಮಾಸದ ನವರಾತ್ರಿಯಲ್ಲಿ ಮಲೆನಾಡಿನಲ್ಲಿ ಹಸುರಿನಿಂಥ ಅರಳಿದ ಹೂವು ಸುವಾಸಿತವಾಗಿದೆ. ಹಸುರು ಎಲೆಗಳಿಂದ ಬೀಸುವ ಗಾಳಿಯು ತಂಪಾಗಿದೆ. ಹಸುರು | |

| | | |
|---|---|---|
| | ಗಿಡಗಳ ಮೇಲೆ ಕುಳಿತ ಹಕ್ಕಿಯ ಕೊರಳಿನ ದನಿಯು ಇಂಪಾಗಿದೆ. ಇದರಿಂದ ಇಳೆಯೆಲ್ಲ ಹಸುರುಮಯವಾಗಿ ಶಾಂತವಾಗಿ ಆನಂದಾಭೂತಿಯನ್ನು ನೀಡುತ್ತವೆ" ಎಂಬುದನ್ನು ಈ ನುಡಿ ಬಹುಸ್ವಾರಸ್ಯ ಪೂರ್ಣವಾಗಿ ಅಭಿವ್ಯಕ್ತಪಡಿಸುತ್ತದೆ. | |
| **38.** | **"ವಿದ್ಯಾಧನಮೆ ಧನಮಪ್ಪುದು"**<br>**ಆಯ್ಕೆ:–** ಈ ವಾಕ್ಯವನ್ನು **ಆದಿ ಮಹಾಕವಿ ಪಂಪನು** ರಚಿಸಿರುವ **'ವಿಕ್ರಮಾರ್ಜುನ ವಿಜಯಂ'** ಕೃತಿಯಿಂದ ಆಯ್ದ **'ಕೆಮ್ಮನೆ ಮೀಸೆವೊತ್ತನೇ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.<br>**ಸಂದರ್ಭ:–** ದ್ರೋಣನು ಬಡತನದಿಂದ ಬಳಲುವ ಸಮಯದಲ್ಲಿ ತನ್ನ ಮಗನೊಡನೆ ಸಹಾಯವನ್ನು ಯಾಚಿಸಿ ಪರಶುರಾಮನ ಬಳಿಗೆ ಬಂದ ಸಂದರ್ಭದಲ್ಲಿ ಈ ಮಾತನ್ನು ದ್ರೋಣನು ಪರಶುರಾಮನಿಗೆ ಹೇಳುತ್ತಾನೆ.<br>**ಸ್ವಾರಸ್ಯ :–** "ಜಗತ್ತಿನಲ್ಲಿ ಶ್ರೇಷ್ಠವಾದುದು ವಿದ್ಯೆ. ಇದೇ ನಿಜವಾದ ಧನ. ಇದನ್ನೇ ನನಗೆ ದಯೆಪಾಲಿಸಿ" ಎಂದು ದ್ರೋಣನು ಹೇಳಿರುವುದು **ವಿದ್ಯೆಯ ಶ್ರೇಷ್ಠತೆಯನ್ನು** ಎತ್ತಿಹಿಡಿಯುತ್ತದೆ. | |
| **X.** | **ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆದಿದೆ.**<br>**ಅಂಕಸೂಚಿ: ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣ ಸಾಲಿಗೆ – 1 ಅಂಕ** | **1 x 4 = 4** |
| **39.** | ಕೊಡಲಿ ಕೋರೆ ಕುಡ ಕಬ್ಬಿಣ ಮೊಸರು ಬೆಣ್ಣಿ ಹಾಲಾ<br>ಉಪ್ಪು ಎಣ್ಣಿ ಅರಿಸಿಣ ಜೀರಗಿ ಅಕ್ಕಿಸಕ್ಕಾರಿ ಬೆಲ್ಲಾ<br>ಗಂಗಳ ಚೆರಗಿ ಮಂಗಳ ಸೂತ್ರ ಹೋದವು ಬೀಸುಕಲ್ಲಾ<br>ಹಾಳಾಗಿ ಹೋಯಿತು ಅತ್ತು ವರ್ಣಿಸಿ ಹೇಳಲಿ ನಾನೆಷ್ಟಾ<br><br>**ಅಥವಾ**<br><br>ಸಿಕ್ಕದ್ದು ತಗೊಂಡು ಸರದ ನಿಂತರೊ ಊರಿಗೆ ಕೊಳ್ಳಿ ಕೊಟ್ಟಾ<br>ಬೂದಿ ಮಾಡ್ಯಾರೊ ಹಲಗಲಿ ಸುಟ್ಟು ಗುರ್ತುಳಿಯಲಿಲ್ಲೆಳ್ಳಷ್ಟು<br>ಕಾಣದೆ ಹೋಯಿತೊ ಕೆಟ್ಟು ವರ್ಣಿಸಿ ಹೇಳಿದೆ ಕಂಡಷ್ಟು<br>ಕುರ್ತಕೋಟಿ ಕಲ್ಮೇಶನ ದಯದಿಂದ ಹಾಡಿದೆನಣ್ಣಾ ಜನಕಾ | |
| **XI.** | **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**<br>**ಅಂಕ ಸೂಚಿ: ವಿಷಯಾಂಶಕ್ಕೆ – 3 ಅಂಕ**<br>**ಅಡಕಗೊಂಡ ಮೌಲ್ಯ ಗುರುತಿಸುವುದು, ಪದಬಂಧ ಮತ್ತು ಭಾಷಾ ಶೈಲಿ – 1 ಅಂಕ** | **1 x 4 = 4** |

| | | |
|---|---|---|
| **40.** | ನೆಲಕಿಜೆವೆನೆಂದು ಬಗೆದಿರೆ।<br>ಚಲಕಿಜಿವೆಂ ಪಾಂಡುಸುತರೊಳೀನೆಲನಿದು ಪಾ॥<br>ೞ್ನೆಲನೆನಗೆ ದಿನಪಸುತನಂ।<br>ಕೊಲಿಸಿದ ನೆಲನೊಡನೆ ಮತ್ತೆ ಪುದುವಾೞ್ವೆನೇ॥<br>ಈ ಚರಣವನ್ನು ಮಹಾಕವಿ **ರನ್ನನು** ರಚಿಸಿರುವ **'ಸಾಹಸಭೀಮ ವಿಜಯಂ'** ಕೃತಿಯಿಂದ ಆಯ್ದ **'ಛಲಮನೆ ಮೆಱೆವೆಂ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.<br>ದುರ್ಯೋಧನನು ಛಲದಂಕಮಲ್ಲ ಎಂದು ಪ್ರಖ್ಯಾತ ನಾದವನು. ಭೀಷ್ಮನು ಸಂಧಿಗೆ ಒಪ್ಪಿಕೋ ಎಂದರೆ ಅದಕ್ಕೆ ಒಪ್ಪದೆ ದುರ್ಯೋಧನನು ಮುಗುಳುನಗೆ ನಕ್ಕು ಹೇಳುವ ಈ ಮಾತುಗಳು ವೀರೋಚಿತವಾಗಿವೆ. ಇಲ್ಲಿ ದುರ್ಯೋಧನನ ಛಲವಂತಿಕೆ, ವೀರತನ ಹಾಗೂ ಮಿತ್ರಪ್ರೇಮಗಳು ಬಹುಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿವೆ.<br>ದುರ್ಯೋಧನನು ಭೀಷ್ಮರನ್ನು ಕುರಿತು "ನಾನು ಪಾಂಡವರಲ್ಲಿ ನೆಲಕ್ಕಾಗಿ ಯುದ್ಧ ಮಾಡುವೆನು ಎಂದು ತಿಳಿದಿರುವರೇ; ಚಲಕ್ಕಾಗಿ ಯುದ್ಧ ಮಾಡುವೆನು. ನನ್ನ ಪಾಲಿಗೆ ಇದು ಪಾಳುಭೂಮಿ. ಮಿತ್ರನಾದ ಕರ್ಣನನ್ನು ಕೊಲ್ಲಿಸಿದ ಈ ನೆಲದೊಡನೆ ಮತ್ತೆ ಹೊಸಬಾಳು ಬಾಳುವೆನೇ?" ಎಂದು ಹೇಳಿದನು. **ವೀರನಾದವನಿಗೆ ಸಾಮ್ರಾಜ್ಯದ ಮೋಹಕ್ಕಿಂತ ಛಲವೇ ಮುಖ್ಯ ಎಂಬ ಮೌಲ್ಯಯುತ ಸಂದೇಶವು ಇಲ್ಲಿ ಅಭಿವ್ಯಕ್ತಗೊಂಡಿದೆ.** | |
| **XII.** | **ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**<br>**ಅಂಕ ಸೂಚಿ: ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ – 3 ಅಂಕ**<br>**ಪದಬಂಧ ಮತ್ತು ಭಾಷಾ ಶೈಲಿ – 1 ಅಂಕ** | **2 x 4 = 8** |
| **41.** | **ಗುರೂಪದೇಶವನ್ನು ಯಾರ್‍ಯಾರು ಹೇಗೆ ಸ್ವೀಕರಿಸುತ್ತಾರೆ?**<br>**ಉತ್ತರ:** ಗುರೂಪದೇಶ ಎಂದರೆ ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ 'ಮೀಹ' ತಲೆ ನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು; ಬೊಜ್ಜು ಬೆಳೆಯದೆ ಬರುವ ಗುರುತ್ವ; ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ; ಪಂಜು ಇಲ್ಲದೆ ಬೆಳಗುವ ಬೆಳಕು; ಉದ್ವೇಗ ಬರಿಸದ ಜಾಗರಣೆ. ಇಂತಹ ಗುರುವಾಣಿ ಎಷ್ಟು ಪರಿಶುದ್ಧವಾದರೂ ಮೂರ್ಖನ ಕಿವಿಗೆ ಅದು ಒಂದು ಹೊರೆ. ಅಂಥವರ ಕಿವಿಯೊಳಗೆ ಹಿತವಚನ ಹೊಕ್ಕಾಗ ತಿಳಿನೀರು ಹೊಕ್ಕಂತೆ ಸಂಕಟಪಟ್ಟುಕೊಳ್ಳುತ್ತಾರೆ. ಆದರೆ ಸಜ್ಜನರಿಗೆ ಗುರುವಚನ ಎನ್ನುವುದು ಕಿವಿಗೆ ಒಂದು ಆಭರಣ. ಅದರಿಂದ ಅವರ ಶ್ರೀಮುಖ ಇನ್ನಷ್ಟು ಶ್ರೀಮಂತವಾಗುತ್ತದೆ. ಮುಸ್ಸಂಜೆಯ ಚಂದ್ರ ಕತ್ತಲನ್ನು ಕಳೆವಂತೆ, ಬಗೆಯ ಕೊಳೆಯನ್ನೆಲ್ಲ ಹಿತವಚನ ತೊಳೆದುಬಿಡುತ್ತದೆ. ಆಗ ಬಾಳಿನಲ್ಲಿ ಒಂದು ಸಂಯಮ, ಒಂದು ಪಕ್ವತೆ, ಒಂದು ಶಾಂತಿ ಕಾಣಿಸಿಕೊಳ್ಳುತ್ತದೆ.<br>ರಾಜರ ಮನೆತನದಲ್ಲಿ ಹುಟ್ಟಿದರೆ ಸಾಕು. ಅಹಂಕಾರದಿಂದ ಅವರ ಕಿವಿ ಕಿವುಡಾಗಿಬಿಡುತ್ತದೆ. ಎಂಥ ಉಪದೇಶವೂ ಅವರ ಕಿವಿಗೆ ನಾಟುವುದಿಲ್ಲ. ಯಾರದೋ ದಾಕ್ಷಿಣ್ಯಕ್ಕೆ ಉಪದೇಶವನ್ನು | |

ಆಲಿಸಿದರೂ ಎಂಥ ಅನಾದರ ಆ ಮೋರೆಯಲ್ಲಿ! ಆನೆಯಂತೆ ಅರೆ ಮುಚ್ಚಿದ ಕಣ್ಣಲ್ಲಿ "ತನಗೆ ಉಪದೇಶಿಸಬೇಕಾದ್ದು ಏನೂ ಉಳಿದಿಲ್ಲ" ಎನ್ನುವಂಥ ಭಾವ ಅವರಲ್ಲಿರುತ್ತದೆ.

**ಅಥವಾ**

**ಸಂಪತ್ತಿನ ಗುಣಾವಗುಣಗಳನ್ನು ವಿವರಿಸಿ.**

**ಉತ್ತರ:** ಚಂದ್ರಕಲೆಯ ವಕ್ರತೆ, ಉಚ್ಚೈಃಶ್ರವಸ್ಸಿನ ಚಾಪಲ್ಯ, ಕಾಲಕೂಟದ ಮೋಹಕತ್ವ, ಮದ್ಯದ ಮಾದಕತ್ವ, ಕೌಸ್ತುಭದ ಕಾಠಿನ್ಯ ಈ ಎಲ್ಲ ದುರ್ಗುಣಗಳು ಸಂಪತ್ತಿನ ಸಹಚಾರಿಗಳು. ಈ ಹಣದಷ್ಟು ಕೆಟ್ಟ ವಸ್ತು ಜಗತ್ತಿನಲ್ಲಿ ಇನ್ನೊಂದಿಲ್ಲ. ಏಕೆಂದರೆ ಅದಕ್ಕೆ ಯಾರ ಗುರುತೂ ಇಲ್ಲ. ಎಷ್ಟು ಬಿಗಿಯಾಗಿ ಬಿಗಿದರೂ ನುಸುಳಿಕೊಳ್ಳುವಂಥ ಜಾಣು ಅದಕ್ಕೆ ತಿಳಿದಿದೆ. ಮಹಾವೀರರಾದ ಸಾವಿರಾರು ಸೈನಿಕರ ಕತ್ತಿಗಳ ಪಂಜರದ ನಡುವೆ ಕಾಪಿಟ್ಟ ಸಂಪತ್ತು ಕೂಡ ತನ್ನ ತಾನೆ ಕಣ್ಮರೆಯಾಗಿಬಿಡುತ್ತದೆ. ಮದಜಲವನ್ನು ಸುರಿದು ಸುತ್ತೆಲ್ಲ ಕತ್ತಲು ಬರಿಸುವ ಮದ್ದಾನೆಗಳ ಕಾವಲಿನಲ್ಲಿ ಕೂಡ ಕಣ್ಣು ತಪ್ಪಿಸಿ ಓಡಿಬಿಡುತ್ತದೆ! ಸಂಪತ್ತಿಗೆ ಸ್ನೇಹದ ಬಂಧನವಿಲ್ಲ; ಕುಲದ ಗುರುತಿಲ್ಲ; ರೂಪದ ಒಲವಿಲ್ಲ. ಒಂದೇ ಮನೆತನದಲ್ಲಿ ಬಹುಕಾಲ ಉಳಿಯುವ ಅಭ್ಯಾಸವಂತು ಇಲ್ಲವೇ ಇಲ್ಲ. ಅದು ಸ್ವಭಾವವನ್ನು ಕಾಣದು; ಪಾಂಡಿತ್ಯವನ್ನು ಗಣಿಸದು; ಶಾಸ್ತ್ರವನ್ನು ಆಲಿಸದು; ಧರ್ಮವನ್ನು ನಂಬದು. ಅದಕ್ಕೆ ತ್ಯಾಗದ ಮೇಲೆ ಗೌರವವಿಲ್ಲ; ತುಂಬ ಬಲ್ಲವರು ಎಂದರೆ ಆದರವಿಲ್ಲ; ಒಳ್ಳೆಯ ನಡತೆ ಅದಕ್ಕೆ ಅಪರಿಚಿತ. ಅದರ ಮುಂದೆ ಸತ್ಯಕ್ಕು ಸುಳ್ಳಿನಷ್ಟೆ ಬೆಲೆ. ಅದು ಒಳ್ಳೆಯ ಲಕ್ಷಣವಂತನನ್ನೆ ಆಶ್ರಯಿಸುತ್ತದೆ ಎಂಬ ನಿಯಮವಿಲ್ಲ. ಅದರ ಚಾಪಲ್ಯಕ್ಕಂತು ಎಣೆಯೆ ಇಲ್ಲ. ಅದು ಗಂಧರ್ವನಗರದಂತೆ, ಕಾಣುತ್ತಿದ್ದಂತೆಯೆ ಕರಗಿಬಿಡುತ್ತದೆ!

ಇದು ಒಂದು ಕೆಟ್ಟ ಪಿಶಾಚಿ. ಅದು ಕೆಲವರನ್ನು ದೊಡ್ಡಸ್ತಿಕೆಯಲ್ಲಿ ಕುಣಿಸಿಬಿಡುತ್ತದೆ. ಕೆಲವು ಕ್ಷುದ್ರ ಜೀವಿಗಳನ್ನಂತು ಈ ಪಿಶಾಚಿ ಹುಚ್ಚುಗೊಳಿಸಿಬಿಡುತ್ತದೆ. ವಿದ್ಯಾವಂತನನ್ನು ಕಂಡರೆ ಅದಕ್ಕೆ ಕಿಚ್ಚು. ಅವನ ಗೋಜಿಗೇ ಅದು ಬರುವುದಿಲ್ಲ. ಗುಣವಂತನನ್ನು ಕಂಡಾಗ ಕೊಳಕನನ್ನು ಕಂಡರೆ ಹೇಗೆ ಹಾಗೆ ದೂರ ಸರಿಯುತ್ತದೆ. ವೀರರನ್ನು ಕಂಡಾಗ ಅಮಂಗಲವನ್ನು ಕಂಡಂತೆ, ಸಜ್ಜನರನ್ನು ಕಂಡರೆ ಅಪಶಕುನವನ್ನು ಕಂಡಂತೆ ನಡೆದುಕೊಳ್ಳುತ್ತದೆ. ಕುಲೀನನನ್ನು ಕಂಡರೆ ಹಾವು ಸುಳಿದಂತೆ ಹಿಂಜರಿಯುತ್ತದೆ. ಶೂರರೆಂದರೆ ಮುಳ್ಳಿನಂತೆ, ದಾನಶೀಲರೆಂದರೆ ಕೆಟ್ಟ ಕನಸಿನಂತೆ ಅದಕ್ಕೆ ತ್ಯಾಜ್ಯ. ವಿನಯಶೀಲನನ್ನು, ಪಂಡಿತನನ್ನು ಕಂಡರೆ ಪಾತಕಿಯನ್ನು, ಮರುಳನನ್ನು ಕಂಡಂತೆ ನಡೆದುಕೊಳ್ಳುತ್ತದೆ. ಬಗೆಯಲ್ಲಿ ಜಾಡ್ಯವನ್ನು ತುಂಬುತ್ತದೆ. ದೊಡ್ಡಸ್ತಿಕೆಯ ಜತೆಗೆಯೆ ಕೀಳುಮಟ್ಟದ ಅಭಿರುಚಿಯನ್ನು ಬೆಳೆಸುತ್ತದೆ. ಮನುಷ್ಯತ್ವವನ್ನೆ ಕೊಲ್ಲುತ್ತದೆ. ಅದು ಯಾರ ಕಣ್ಣಿಗೂ ಕಾಣಿಸದೆ ಮೋಜು ನೋಡುತ್ತಿರುತ್ತದೆ. ಮೂರ್ಖರ ಎದೆಯಲ್ಲಿ ಅದರ ವಾಸ. ಎಂಥ ತಿಳಿಯಾದ ಬಗೆಯನ್ನು ಕದಡಿ ಕಲುಷವಾಗಿಬಿಡುತ್ತದೆ. ಹೀಗೆ ಸಂಪತ್ತು ಗುಣಾವಗುಣಗಳನ್ನು ಹೊಂದಿದೆ.

**42.** **ನಾವು ಯಾವ ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ?**

**ಉತ್ತರ:–** ನಮ್ಮ ಸುತ್ತಲೂ ಹಬ್ಬಿರುವ ದ್ವೇಷದ ಕತ್ತಲೆಯನ್ನು ಕಳೆಯಲು **ಪ್ರೀತಿಯ ದೀಪವನ್ನು** ಹಚ್ಚುವ, ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ ಹೊಯ್ದಾಡುವ **ಬದುಕೆಂಬ ಹಡಗನ್ನು**

**ಎಚ್ಚರದಲ್ಲಿ ಮುನ್ನಡೆಸುವ,** ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ, ಬರಡಾಗಿರುವ ಕಾಡುಮೇಡುಗಳು ಹಚ್ಚಹಸುರಿನಿಂದ ಕಂಗೊಳಿಸಿ, ಸಮೃದ್ಧವಾಗುವಂತಹ ವಸಂತಕಾಲವಾಗುವ, ಅತ್ಯಾಚಾರ, ಅನಾಚಾರ, ಭ್ರಷ್ಟಾಚಾರ, ಅಸ್ಪೃಶ್ಯತೆ, ಅಸಮಾನತೆಗಳಿಂದ ಅಧಃಪತನಗೊಂಡಿರುವ ಸಮಾಜವನ್ನು ಹೊಸ ಭರವಸೆಗಳ ಮೂಲಕ ಮೇಲೆತ್ತುವ, ಭಾಷೆ, ಜಾತಿ, ಮತ, ಧರ್ಮಗಳ ಬೇಧಭಾವದಿಂದ ಮನುಜ ಮನುಜರ ನಡುವೆ ಉಂಟಾಗಿರುವ ಅಸಮಾನತೆಯ ಅಡ್ಡಗೋಡೆಗಳನ್ನು ಕೆಡಹಿ, ಸಮಾನತೆ ಮೂಡಿಸುವ ಸೇತುವೆಯಾಗೋಣ. **ಎಲ್ಲ ಮತಗಳು ಸಾಧನೆಯ ದಾರಿಗಳು** ಎಂಬ ಎಚ್ಚರದಲ್ಲಿ ಬದುಕುವ, ಭಯ ಹಾಗೂ ಸಂಶಯಗಳಿಂದ ಮಸುಕಾದ ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಮಾಡುವ ದೃಢಸಂಕಲ್ಪವನ್ನು ಕೈಗೊಳ್ಳೋಣವೆಂದು ಜಿ.ಎಸ್.ಶಿವರುದ್ರಪ್ಪನವರು ಹೇಳಿದ್ದಾರೆ.

**ಅಥವಾ**

**ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.**

**ಉತ್ತರ:–** ಕೇವಲ ನಿರ್ಧಾರ ಅಥವಾ ಸಂಕಲ್ಪದಿಂದಲೇ ಕಾರ್ಯಸಾಧನೆಯಾಗುವುದಿಲ್ಲ. ನಿರ್ಧಾರ ಮಾಡಿದ ಕೆಲಸವನ್ನು ಅನುಷ್ಠಾನಕ್ಕೆ ಆಚರಣೆಗೆ ತಂದಾಗಲೇ ನಿರ್ಧರಿಸಿದ ಕೆಲಸ ಕೈಗೂಡುತ್ತದೆ. ಗುರಿಯು ಸಾಧನೆಯಾಗುತ್ತದೆ. ನಾವು ಜೀವನದಲ್ಲಿ ಪ್ರೀತಿಯ ದೀಪವನ್ನು ಹಚ್ಚುವ ಸಂಕಲ್ಪ ಕೈಗೊಳ್ಳುವುದರಿಂದ ದ್ವೇಷರಹಿತ ಸಮಾಜ ನಿರ್ಮಾಣ ಮಾಡಬಹುದು. ನಾವು ಬದುಕಿನಲ್ಲಿ ಎಚ್ಚರಕೆಯಿಂದ ಮುನ್ನಡೆಯುವ ಸಂಕಲ್ಪ ಕೈಗೊಳ್ಳುವುದರಿಂದ ಎಂತಹ ಸವಾಲುಗಳನ್ನು ಧೈರ್ಯವಾಗಿ ಎದುರಿಸಬಹುದು. ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಸಂಕಲ್ಪ ಕೈಗೊಳ್ಳುವುದರಿಂದ ಕಾಡುಗಳು ಹಚ್ಚಹಸಿರಿನಿಂದ ಸಮೃದ್ಧವಾಗುವಂತೆ ಮಾಡಬಹುದು. ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು. ಸಮಾನತೆಯ ಅಡ್ಡಗೋಡೆಗಳನ್ನು ಕೆಡವಲು ಸಂಕಲ್ಪ ತೊಡಬೇಕು. ಆಗ ಶಾಂತಿ ನೆಲೆಸುತ್ತದೆಂದು ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯವಾಗಿದೆ.

**XIII.** **ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1 x 4 = 4 (2 + 2)**

ಕಡಿದಾಳ್ ಮಂಜಪ್ಪನವರ ಕಾಲದಲ್ಲಿ ಮಹಾರಾಜಾ ಕಾಲೇಜು ಸಂಸ್ಕೃತಿ ಮತ್ತು ಜ್ಞಾನದ ದೇಗುಲದಂತಿತ್ತು. ಇಂದಿನಂತೆ ವಿದ್ಯಾರ್ಥಿ ಮತ್ತು ಉಪಾಧ್ಯಾಯರ ಚಳುವಳಿಯಿರಲಿಲ್ಲ. ಕಾಲೇಜಿನ ಶಿಕ್ಷಕ ವರ್ಗದವರು ಅಲ್ಪ ಸಂಬಳ ಬರುತ್ತಿದ್ದರೂ ತಮ್ಮ ವೃತ್ತಿ ಪವಿತ್ರವಾದುದೆಂಬ ತೃಪ್ತಿಯಿಂದ ಕಾರ್ಯನಿರ್ವಹಿಸುತ್ತಿದ್ದರು. ಅವರಲ್ಲಿ ಜ್ಞಾನ ಸಂಪತ್ತಿನ ಜತೆಗೆ ನೈತಿಕ ಸಂಪತ್ತು ಇತ್ತು. ಮಹಾರಾಜಾ ಕಾಲೇಜಿನಲ್ಲಿಯೂ ನನಗೆ ವಿದ್ಯಾರ್ಥಿ ವೇತನ ಲಭ್ಯವಾಗಿತ್ತು. ವಿದ್ಯಾರ್ಥಿ ವೇತನದ ಮೊತ್ತ ತಿಂಗಳಿಗೆ ಹದಿನೆಂಟು ರೂಪಾಯಿ. ವಿದ್ಯಾರ್ಥಿ ವೇತನ ಪಡೆಯುತ್ತಿದ್ದವರಿಗೆ ಕಾಲೇಜಿನ ಶುಲ್ಕವಿರಲಿಲ್ಲ. ಕಾಲೇಜಿನಲ್ಲಿ ಬಿಡುವಿದ್ದಾಗ ಕಡಿದಾಳ ಮಂಜಪ್ಪನವರು ವಾಚನಾಲಯದಲ್ಲಿ ಇದ್ದ ದಿನಪತ್ರಿಕೆಗಳನ್ನು ತಪ್ಪದೆ ಓದುತ್ತಿದ್ದರು.

ಮಹಾತ್ಮಾಗಾಂಧಿಯಂತಹ ರಾಷ್ಟ್ರಭಕ್ತರ ಭಾಷಣಗಳೂ, ಲೇಖನಗಳೂ ಅವರ ಮನಸ್ಸಿನ ಮೇಲೆ ಬಹಳ ಪರಿಣಾಮವನ್ನುಂಟು ಮಾಡಿದ್ದವು. ದಿನಪತ್ರಿಕೆಗಳಲ್ಲೂ ವಿಚಾರ ಸಂಕಿರಣಗಳಲ್ಲೂ ರಾಜಕಾರಣ ಮತ್ತು

| | | |
|---|---|---|
| | ಅರ್ಥಶಾಸ್ತ್ರಕ್ಕೆ ಸಂಬಂಧಪಟ್ಟ ಲೇಖನಗಳನ್ನು ಓದುತ್ತಿದ್ದರಿಂದ ಪರೀಕ್ಷಾ ವಿಷಯಗಳಾಗಿದ್ದ ರಾಜಕೀಯಶಾಸ್ತ್ರ ಮತ್ತು ಅರ್ಥ ಶಾಸ್ತ್ರಗಳಿಗೆ ಸಂಬಂಧಪಟ್ಟ ವಿಚಾರಗಳು ತಿಳಿಯುತ್ತಿದ್ದವು. ಹೇಗಲ್, ಕ್ಯಾಂಟ್, ವಾಲ್ಟೇರ್, ರೂಸ್ಸೋ ಮುಂತಾದ ದಾರ್ಶನಿಕರ ಕೃತಿಗಳನ್ನೂ ಗ್ರೀಕ್ ಮಹಾಕವಿ ಹೋಮರನ 'ಇಲಿಯಡ್ ಮತ್ತು ಒಡಿಸ್ಸಿ' ಮಹಾಕಾವ್ಯಗಳನ್ನೂ, ಗಿಬ್ಬನ್ನ ಅವರ 'ಉನ್ನತಿ ಮತ್ತು ಅವನತಿ' ಗ್ರಂಥವನ್ನೂ ರವೀಂದ್ರನಾಥ ಟಾಗೋರ, ಬರ್ನಾರ್ಡ್ ಷಾ, ಟಾಲ್‌ಸ್ಟಾಯ್ ಮುಂತಾದವರ ಕೃತಿಗಳನ್ನು ಓದಿರುವುದರಿಂದ ಅವರ ಮನಸ್ಸು ಬಹಳ ವಿಕಾಸಗೊಂಡಿತ್ತು. ಅಂದು ಜ್ಞಾನ ಸಂಪಾದನೆ ವಿದ್ಯಾರ್ಥಿಗಳ ಮುಖ್ಯ ಗುರಿಯಾಗಿದ್ದರೆ; ಇಂದು ಪರೀಕ್ಷೆಯಲ್ಲಿ ಹೇಗಾದರೂ ಮಾಡಿ ಉತ್ತೀರ್ಣರಾಗುವುದು ಗುರಿಯಾಗಿದೆ.<br><br>**ಪ್ರಶ್ನೆಗಳು** | |
| **43 ಅ** | **ಮನಸ್ಸು ಬಹಳಷ್ಟು ವಿಕಾಸಗೊಳ್ಳುವುದು ಯಾವಾಗ?**<br>**ಉತ್ತರ :** ಹೇಗಲ್, ಕ್ಯಾಂಟ್, ವಾಲ್ಟೇರ್, ರೂಸ್ಸೋ ಮುಂತಾದ ದಾರ್ಶನಿಕರ ಕೃತಿಗಳನ್ನೂ ಗ್ರೀಕ್ ಮಹಾಕವಿ ಹೋಮರನ 'ಇಲಿಯಡ್ ಮತ್ತು ಒಡಿಸ್ಸಿ' ಮಹಾಕಾವ್ಯಗಳನ್ನೂ, ಗಿಬ್ಬನ್ನ ಅವರ 'ಉನ್ನತಿ ಮತ್ತು ಅವನತಿ' ಗ್ರಂಥವನ್ನೂ ರವೀಂದ್ರನಾಥ ಟಾಗೋರ, ಬರ್ನಾರ್ಡ್ ಷಾ, ಟಾಲ್‌ಸ್ಟಾಯ್ ಮುಂತಾದವರ ಕೃತಿಗಳನ್ನು ಓದಿರುವುದರಿಂದ ಅವರ ಮನಸ್ಸು ಬಹಳ ವಿಕಾಸಗೊಂಡಿತ್ತು. | |
| **43 ಆ** | **ಕಡಿದಾಳ ಮಂಜಪ್ಪನವರ ಕಾಲದಲ್ಲಿ ಮಹಾರಾಜ ಕಾಲೇಜಿನ ಶೈಕ್ಷಣಿಕ ವಾತಾವರಣ ಹೇಗಿತ್ತು?**<br>**ಉತ್ತರ :** ಕಡಿದಾಳ್ ಮಂಜಪ್ಪನವರ ಕಾಲದಲ್ಲಿ ಮಹಾರಾಜಾ ಕಾಲೇಜು ಸಂಸ್ಕೃತಿ ಮತ್ತು ಜ್ಞಾನದ ದೇಗುಲದಂತಿತ್ತು. ಇಂದಿನಂತೆ ವಿದ್ಯಾರ್ಥಿ ಮತ್ತು ಉಪಾಧ್ಯಾಯರ ಚಳುವಳಿಯಿರಲಿಲ್ಲ. ಕಾಲೇಜಿನ ಶಿಕ್ಷಕ ವರ್ಗದವರು ಅಲ್ಪ ಸಂಬಳ ಬರುತ್ತಿದ್ದರೂ ತಮ್ಮ ವೃತ್ತಿ ಪವಿತ್ರವಾದುದೆಂಬ ತೃಪ್ತಿಯಿಂದ ಕಾರ್ಯನಿರ್ವಹಿಸುತ್ತಿದ್ದರು. ಅವರಲ್ಲಿ ಜ್ಞಾನ ಸಂಪತ್ತಿನ ಜತೆಗೆ ನೈತಿಕ ಸಂಪತ್ತು ಇತ್ತು. | |
| **XIV.** | **ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.**<br>**ಅಂಕ ಸೂಚಿ: ವ್ಯಾವಹಾರಿಕ ಪತ್ರಕ್ಕೆ**<br>**ಇಂದ ಮತ್ತು ಗೆ ವಿಳಾಸ, ಸಂಬೋಧನೆ, ವಿಷಯ – 1 ಅಂಕ**<br>**ಪತ್ರದ ಒಡಲು, ವಿಷಯ ನಿರೂಪಣೆ – 2 ಅಂಕ**<br>**ವಂದನೆಗಳೊಂದಿಗೆ ಮುಕ್ತಾಯ, ಇಂತಿ, ಸಹಿ, ಸ್ಥಳ, ದಿನಾಂಕ– 1 ಅಂಕ**<br>**ಭಾಷಾ ಶೈಲಿಗೆ, ಸೂಕ್ತ ಪದಬಳಕೆ, ವಿನ್ಯಾಸ – 1 ಅಂಕ** | **1 x 5 = 5** |

| | | |
|---|---|---|
| | **ಅಂಕ ಸೂಚಿ: ಖಾಸಗಿ ಪತ್ರಕ್ಕೆ**<br>**ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ – 1 ಅಂಕ**<br>**ಪತ್ರದ ಒಡಲು, ವಿಷಯ ನಿರೂಪಣೆ – 2 ಅಂಕ**<br>**ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ – 1 ಅಂಕ**<br>**ಭಾಷಾ ಶೈಲಿಗೆ, ಸೂಕ್ತ ಪದಬಳಕೆ , ವಿನ್ಯಾಸ – 1 ಅಂಕ** | |
| **44.** | ನಿಮ್ಮನ್ನು ಮಂಗಳೂರಿನ ರಾಣಿಅಬ್ಬಕ್ಕ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಅಕುಲ' ಎಂದು ಭಾವಿಸಿಕೊಂಡು ನಿಮ್ಮ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೋರಿ ಮುಖ್ಯೋಪಾಧ್ಯಯರಿಗೊಂದು ಪತ್ರ ಬರೆಯಿರಿ.<br><br>**ಇವರಿಂದ**<br>ಅಕುಲ **25–03–2023**<br>10 ನೇ ತರಗತಿ<br>ರಾಣಿಅಬ್ಬಕ್ಕ ಪ್ರೌಢಶಾಲೆ<br>ಮಂಗಳೂರು.<br><br>**ಇವರಿಗೆ**<br>ಮುಖ್ಯೋಪಾಧ್ಯಾಯರು<br>ರಾಣಿಅಬ್ಬಕ್ಕ ಪ್ರೌಢಶಾಲೆ<br>ಮಂಗಳೂರು.<br><br>**ಮಾನ್ಯರೇ,**<br>**ವಿಷಯ:– ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ನೀಡುವ ಕುರಿತು**<br>ಸರ್, ನಾನು ಅಕುಲ ನಿಮ್ಮ ಶಾಲೆಯಲ್ಲಿ 8ನೇ ತರಗತಿಯಿಂದ 10ನೇ ತರಗತಿಯವರೆಗೆ ಓದಿದ್ದು 2022–23 ನೇ ಸಾಲಿನಲ್ಲಿ ನಡೆದ ಎಸ್.ಎಸ್.ಎಲ್.ಸಿ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣನಾಗಿದ್ದೇನೆ. ನನ್ನ ಮುಂದಿನ ವಿದ್ಯಾಭ್ಯಾಸಕ್ಕಾಗಿ ವರ್ಗಾವಣೆ ಪತ್ರ ಮತ್ತು ಅಂಕಪಟ್ಟಿ ಕೊಡಬೇಕೆಂದು ತಮ್ಮಲ್ಲಿ ಈ ಮೂಲಕ ಮನವಿ ಮಾಡಿಕೊಳ್ಳುತ್ತಿದ್ದೇನೆ.<br><br>**ವಂದನೆಗಳೊಂದಿಗೆ** **ಇಂತಿ ತಮ್ಮ ನಂಬುಗೆಯ**<br>**ಅಕುಲ** | |

**ಹೊರವಿಳಾಸ**

| **ಇವರಿಗೆ** | **ಇವರಿಂದ** |
|---|---|
| ಮುಖ್ಯೋಪಾಧ್ಯಾಯರು<br>ರಾಣಿಅಬ್ಬಕ್ಕ ಪ್ರೌಢಶಾಲೆ<br>ಮಂಗಳೂರು. | ಅಕುಲ<br>10 ನೇ ತರಗತಿ<br>ರಾಣಿಅಬ್ಬಕ್ಕ ಪ್ರೌಢಶಾಲೆ<br>ಮಂಗಳೂರು. |

**ಅಥವಾ**

ನಿಮ್ಮನ್ನು ತುಮಕೂರಿನ ವೀರಮದಕರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ದೀಕ್ಷಾ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಪ್ರತಿಭಾ ಕಾರಂಜಿ ಕಾರ್ಯಕ್ರಮಕ್ಕೆ ಬರುವಂತೆ ಆಹ್ವಾನಿಸಿ ಮಡಿಕೇರಿಯಲ್ಲಿರುವ ದಿವ್ಯ ಎಂಬ ಹೆಸರಿನ ನಿಮ್ಮ ಅಕ್ಕನಿಗೊಂದು ಪತ್ರ ಬರೆಯಿರಿ.

**ಕ್ಷೇಮ** **ಶ್ರೀ** **ಇವರಿಂದ**

ದೀಕ್ಷಾ
10ನೇ ತರಗತಿ
ವೀರಮದಕರಿ ಪ್ರೌಢಶಾಲೆ ತುಮಕೂರು
ದಿನಾಂಕ:25–3–2023

ಪೂಜ್ಯ ಮಾತೃಶ್ರೀ ಸಮಾನರಾದ ಅಕ್ಕನವರಿಗೆ ನಿಮ್ಮ ತಂಗಿ ದೀಕ್ಷಾ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು.

ನಾನು ಇಲ್ಲಿ ಕ್ಷೇಮವಾಗಿದ್ದೀನಿ ಅಲ್ಲಿ ನೀವು ಆರೋಗ್ಯವಾಗಿದ್ದೀರಿ ಎಂದು ಭಾವಿಸಿರುತ್ತೇನೆ. ಓದು ಉತ್ತಮವಾಗಿ ನಡೆಯುತ್ತಿದೆ ಎಂದು ಭಾವಿಸಿರುತ್ತೇನೆ. ನನ್ನ ವಿದ್ಯಾಭ್ಯಾಸವು ಕೂಡ ಉತ್ತಮವಾಗಿ ನಡೆಯುತ್ತಿದೆ. ದಿನಾಂಕ 26–3–2020 ರಂದು ನಮ್ಮ ಶಾಲೆಯಲ್ಲಿ ಪ್ರತಿಭಾ ಕಾರಂಜಿ ಕಾರ್ಯಕ್ರಮ ಏರ್ಪಡಿಸಲಾಗಿದೆ. ನಾನು "ಸ್ವಚ್ಛಭಾರತ" ಎಂಬ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೇನೆ. ಆದ್ದರಿಂದ ನೀವು ತಪ್ಪದೆ ಬರಬೇಕು ಮತ್ತು ಮಾರ್ಗದರ್ಶನ ನೀಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಪ್ರಣಾಮಗಳೊಂದಿಗೆ

ಇಂತಿ ನಿಮ್ಮ ಪ್ರೀತಿಯ ತಂಗಿ

**ದೀಕ್ಷಾ**

**ಅಂಚೆ ವಿಳಾಸ**

ದಿವ್ಯ
ಮನೆ ನಂ– 25, ಶಾರದ ನಿಲಯ
ಗಂಗಾ ನಗರ, ಮಡಿಕೇರಿ.

| | | |
|---|---|---|
| **XV.** | **ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**<br><br>**ಅಂಕಸೂಚಿ:**<br>**ಪ್ರಸ್ತಾವನೆ/ಪೀಠಿಕೆ/ವಿಷಯ ಪ್ರವೇಶ – 1 ಅಂಕ**<br>**ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ – 2 ಅಂಕ**<br>**ಉಪಸಂಹಾರ/ ಮುಕ್ತಾಯ/ ವಿಷಯ ಸಮಾಪ್ತಿ – 1 ಅಂಕ**<br>**ಭಾಷಾ ಶೈಲಿಗೆ, ಸೂಕ್ತ ಪದಬಂಧ – 1 ಅಂಕ** | **1 x 5 = 5** |
| **45.** | **ಗ್ರಂಥಾಲಯಗಳ ಮಹತ್ತ್ವ**<br>**ಪ್ರಸ್ತಾವನೆ:–** 'ಗ್ರಂಥಾಲಯಗಳು ಜ್ಞಾನದ ದೇಗುಲಗಳು.' ಒಂದು ಗ್ರಂಥಾಲಯ ಒಂದು ವಿಶ್ವವಿದ್ಯಾನಿಲಯವಿದ್ದಂತೆ. ಜ್ಞಾನ ಪಿಪಾಸುಗಳ ತೃಷೆಯನ್ನು ತಣಿಸುವ ಸಿಹಿನೀರಿನ ಸರೋವರಗಳು ಗ್ರಂಥಾಲಯಗಳು. ಗ್ರಂಥಾಲಯಗಳು ಕೇವಲ ಪುಸ್ತಕ ಭಂಡಾರವಲ್ಲ. ಪೀಳಿಗೆಯಿಂದ ಪೀಳಿಗೆಗೆ ಜ್ಞಾನವನ್ನು ಹಂಚುವ ಮಹತ್ತರವಾದ ಕಾರ್ಯಗಳನ್ನು ಗ್ರಂಥಾಲಯಗಳು ಮಾಡುತ್ತವೆ.<br>**ವಿಷಯ ನಿರೂಪಣೆ:–** ಗ್ರಂಥಾಲಯಗಳು ಜ್ಞಾನದಾನದ ಕೇಂದ್ರಗಳು. ಗ್ರಂಥಗಳನ್ನು ಓದಲು, ಆಕರ ಗ್ರಂಥಗಳನ್ನು ಬಳಸಲು, ಇಲ್ಲವೇ ಪುಸ್ತಕಗಳನ್ನು ಎರವಲು ರೂಪದಲ್ಲಿ ಪಡೆಯಲು ಬೇಕಾದ ಪುಸ್ತಕಗಳನ್ನು ಸಂಗ್ರಹಿಸಿರುವ ಸ್ಥಳವೇ ಗ್ರಂಥಾಲಯಗಳು. ಮಧ್ಯಯುಗದಲ್ಲಿ ಗ್ರಂಥಾಲಯಗಳು ಕಾಣಿಸಿಕೊಂಡವು. ಗ್ರಂಥಾಲಯಗಳಲ್ಲಿ ಅನೇಕ ಭಾಷೆಗಳಿಗೆ, ಅನೇಕ ವಿಷಯಗಳ ಪುಸ್ತಕಗಳಿಗೆ ಸಂಬಂಧಿಸಿದ ಪುಸ್ತಕಗಳು ದೊರೆಯುತ್ತವೆ. ಹಿಂದಿನ ಕಾಲದಲ್ಲಿ ಗ್ರಂಥಾಲಯಗಳು ಇಲ್ಲದ್ದರಿಂದ ಜ್ಞಾನವನ್ನು ಸಂಪಾದಿಸಲು ಕಷ್ಟಪಡಬೇಕಾಗಿತ್ತು. ಈಗ ನಮಗೆ ಬೇಕಾದ ವಿಷಯಗಳನ್ನು ಅಧ್ಯಯನ ಮಾಡಲು, ನಮಗೆ ಬೇಕಾದಾಗ ಹೋಗಿ, ಬಹು ಸುಲಭವಾಗಿ ಜ್ಞಾನ ಸಂಪಾದನೆಯನ್ನು ಮಾಡಬಹುದು. ಕೆಲವರಿಗೆ ಹಣಕೊಟ್ಟು ಪುಸ್ತಕಗಳನ್ನು ಕೊಂಡುಕೊಳ್ಳಲು ಸಾಧ್ಯವಾಗುವುದಿಲ್ಲ. ಅಂತಹವರು ಗ್ರಂಥಾಲಯಗಳಲ್ಲಿ ಪುಸ್ತಕಗಳನ್ನು ತೆಗೆದುಕೊಂಡು ಅಧ್ಯಯನ ಮಾಡಿ, ಹಿಂದಿರುಗಿಸಬಹುದು. ಲೇಖಕರಿಗೂ, ಸಂಶೋಧಕರಿಗೂ, ವಿದ್ಯಾರ್ಥಿಗಳಿಗೂ ಗ್ರಂಥಾಲಯಗಳು ಬಹಳ ಉಪಯೋಗವಾಗುತ್ತವೆ. ಗ್ರಂಥಾಲಯಗಳು ಓದುವ ಹವ್ಯಾಸವನ್ನು ಬೆಳೆಸುವಲ್ಲಿ ಮಹತ್ತರವಾದ ಪಾತ್ರವನ್ನು ವಹಿಸುತ್ತವೆ. ವಿರಾಮಕಾಲದ ಸದುಪಯೋಗ ಮಾಡಿಕೊಳ್ಳಲು ಗ್ರಂಥಾಲಯ ಉತ್ತಮ ತಾಣ. ಸರ್ಕಾರವು ಸಾರ್ವಜನಿಕ ಗ್ರಂಥಾಲಯಗಳನ್ನು ಗ್ರಾಮಪಂಚಾಯಿತಿ ಮಟ್ಟದಿಂದ ರಾಜ್ಯಮಟ್ಟದವರೆಗೂ ಸ್ಥಾಪಿಸಿ, ಉಚಿತವಾಗಿ ಜನರಿಗೆ ಪುಸ್ತಕಗಳನ್ನು ಓದಲು, ಎರವಲು ಪಡೆಯಲು ಅವಕಾಶ ಮಾಡಿಕೊಟ್ಟಿದೆ. ಇವುಗಳನ್ನು ಸಮರ್ಪಕವಾಗಿ ಬಳಸಿಕೊಳ್ಳುವುದರಿಂದ ನಮ್ಮ ಜ್ಞಾನಾರ್ಜನೆಯು ಹೆಚ್ಚಾಗುತ್ತದೆ.<br>**ಉಪಸಂಹಾರ:** ನಾವು ಗ್ರಂಥಾಲಯಗಳನ್ನು ಸದ್ಬಳಕೆ ಮಾಡಿಕೊಳ್ಳುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು. ಶಾಲಾ ಗ್ರಂಥಾಲಯದಲ್ಲಿ ಇರುವ ಪುಸ್ತಕಗಳನ್ನು ಎರವಲು ಪಡೆದು ಓದುವ ಹವ್ಯಾಸವನ್ನು ನಮ್ಮದಾಗಿಸಿಕೊಳ್ಳಬೇಕು. ಸಾರ್ವಜನಿಕ ಗ್ರಂಥಾಲಯಗಳಿಗೆ ಭೇಟಿ ನೀಡಿ, ಪುಸ್ತಕಗಳನ್ನು ಪಡೆದು ಓದುವ ಆಸಕ್ತಿಯನ್ನು ಬೆಳೆಸಿಕೊಳ್ಳಬೇಕು. ವಿರಾಮಕಾಲದಲ್ಲಿ | |

ಗ್ರಂಥಾಲಯಗಳಿಗೆ ಭೇಟಿ ನೀಡಿ, ಅಲ್ಲಿರುವ ಗ್ರಂಥಗಳ ಅವಲೋಕನ ಮಾಡಬೇಕು. ಗ್ರಂಥಾಲಯಗಳು ನಮಗೆ ಬೇಕಾದ ಜ್ಞಾನವನ್ನು ಕೊಡಲು ಸಿದ್ಧವಾಗಿವೆ. ಅವುಗಳ ಜ್ಞಾನವನ್ನು ಪಡೆಯಬೇಕೆಂಬ ಮನಸ್ಸು ನಮಗಿರಬೇಕು. ಆಗ ಮಾತ್ರ ಗ್ರಂಥಾಲಯಗಳ ಮಹತ್ವ ನಮಗೆ ತಿಳಿಯುತ್ತದೆ.

**ಅಥವಾ**

**ಸಾಮಾಜಿಕ ಜಾಲತಾಣಗಳ ಮಹತ್ತ್ವ**

**ಪೀಠಿಕೆ:** ಆಧುನಿಕ ಯುಗದಲ್ಲಿ ಸಾಮಾಜಿಕ ಜಾಲತಾಣಗಳ ಬಳಕೆ ಅತಿಯಾಗಿದೆ. ಅದರ ಬಳಕೆಯಿಂದ ಉಪಯೋಗ ಮತ್ತು ದುರುಪಯೋಗಗಳು ಕೂಡ ಇವೆ. ಹಾನಿಗಳಿದ್ದರೂ ಔಚಿತ್ಯಪೂರ್ಣವಾಗಿ ಬಳಸಿಕೊಳ್ಳುವಲ್ಲಿ ಇವುಗಳ ಮಹತ್ವ ಅಡಗಿದೆ.

**ವಿಷಯ ನಿರೂಪಣೆ :** ವಾಟ್ಸಪ್, ಟ್ವಿಟರ್, ಫೇಸ್ ಬುಕ್, ಹೈಕ್, ಟೆಲಿಗ್ರಾಮ್, ಯೂಟ್ಯೂಬ್, ಇಮೇಲ್, ಬ್ಲಾಗರ್, ವೆಬ್ ಸೈಟ್‌ಗಳಂತಹ ಸಾಮಾಜಿಕ ಸಂಪರ್ಕದ ಜಾಲತಾಣಗಳು ಬಳಕೆಯಾಗುತ್ತಿವೆ. ಸಾಮಾಜಿಕ ಜಾಲತಾಣಗಳು ವಿದ್ಯಾರ್ಥಿಗಳಿಗೆ ಹಲವಾರು ವಿಷಯಗಳನ್ನು ಕಲಿಸುತ್ತವೆ. ಹಲವಾರು ವಿಷಯಗಳ ಅನುಭವವಾಗುತ್ತದೆ. ಮಾಹಿತಿಗಳನ್ನು ಹಂಚಿಕೊಳ್ಳಲು ಮತ್ತು ಪಡೆದುಕೊಳ್ಳಲು ಸಹಾಯಕವಾಗಿವೆ. ಗೂಗಲ್‌ನಂತಹ ವೆಬ್‌ಸೈಟ್‌ಗಳಲ್ಲಿ ಸಾಕಷ್ಟು ಜ್ಞಾನಪೂರಕ ಮಾಹಿತಿಗಳು ಇವೆ. ಅವುಗಳನ್ನು ವಿದ್ಯಾರ್ಥಿಗಳ ಬಳಸಿಕೊಂಡು ಜ್ಞಾನವಿಕಾಸ ಮಾಡಿಕೊಳ್ಳಬಹುದು. ಕಲೆ, ಸಾಹಿತ್ಯ, ಸಂಗೀತ, ಇತಿಹಾಸ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿದ ಮಾಹಿತಿಗಳು ಲಭ್ಯವಿರುತ್ತವೆ.

ಇಂದಿನ ಕಾಲದಲ್ಲಿ ವಿದ್ಯಾರ್ಥಿಗಳ ಬೆರಳ ತುದಿಯಲ್ಲಿ ಇಡಿ ಜಗತ್ತೆ ಹುದುಗಿರುತ್ತದೆ. ಸುಮಾರು ಪ್ರತಿಶತ 50 ರಷ್ಟು ವಿದ್ಯಾರ್ಥಿಗಳು ಪ್ರಾಯೋಜಿತ ಕಾರ್ಯಗಳಿಗೆ ಮತ್ತು ಅಧ್ಯಯನಕ್ಕಾಗಿ ಜಾಲತಾಣಗಳನ್ನು ಜಾಲಾಡುತ್ತಾರೆ. ವಿದ್ಯಾರ್ಥಿಗಳು ಪ್ರಚಲಿತ ವಿದ್ಯಮಾನಗಳನ್ನು ಅರಿಯುವಲ್ಲಿ ಮತ್ತು ಹೊಸ ಮಾಹಿತಿಯನ್ನು ಪಡೆಯುವಲ್ಲಿ ಜಾಲತಾಣಗಳಿಂದ ತುಂಬಾ ಅನುಕೂಲವಿದೆ. ಅಗತ್ಯವೆನಿಸಿದ ಚಿತ್ರಗಳು, ವೀಡಿಯೋಗಳು, ಸಾಹಿತ್ಯಗಳನ್ನು ಬಳಸಿಕೊಂಡು ಜ್ಞಾನಾಭಿವೃದ್ಧಿಯನ್ನು ಮಾಡಿಕೊಳ್ಳುವುದು ಮಹತ್ವವಾದ ವಿಷಯವಾಗಿದೆ. ಹೈಕ್‌ನಂತಹ ಸಾಮಾಜಿಕ ಜಾಲತಾಣವೊಂದು ಸಿರಿ ಕನ್ನಡ ನುಡಿ ಬಳಗ ಎಂಬ ಹೆಸರಿನಲ್ಲಿ ಗುಂಪು ರಚಿಸಿಕೊಂಡು ಕರ್ನಾಟಕದ ಸಾವಿರಾರು ಶಿಕ್ಷಕರನ್ನು ಒಗ್ಗೂಡಿಸಿ ಆ ಮೂಲಕ ವಿದ್ಯಾರ್ಥಿಗಳ ಜ್ಞಾನ ವಿಕಾಸಕ್ಕೆ ಕಾರಣವಾಗಿದೆ. ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಗಾಗಿ ಜ್ಞಾನಪೂರಕ ಆ್ಯಪ್‌ಗಳು ಕೂಡಿ ಹುಟ್ಟಿಕೊಂಡಿವೆ. ಆದ್ದರಿಂದ ಸಾಮಾಜಿಕ ಜಾಲತಾಣಗಳನ್ನು ಉಪಯೋಗಿಸಿಕೊಂಡು ವಿದ್ಯಾರ್ಥಿಗಳು ತಮ್ಮ ಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳಬಹುದು.

**ಉಪಸಂಹಾರ :** ಸಾಮಾಜಿಕ ಜಾಲತಾಣಗಳು ಸಾಕಷ್ಟು ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಮಾರಕವಾಗಿದ್ದರೂ ಅವುಗಳಲ್ಲಿನ ಜ್ಞಾನವಿಷಯದ ಅಂಶಗಳನ್ನು ಪಡೆದುಕೊಂಡರೆ ಜ್ಞಾನವಿಕಾಸವಾಗುವುದರಲ್ಲಿ ಸಂದೇಹವೇ ಇಲ್ಲ ಎಂದು ಹೇಳಬಹುದು.

# ಉಪನಿರ್ದೇಶಕರು (ಆಡಳಿತ) ರವರ ಕಚೇರಿ
# ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

## 2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು

## ವಿಷಯ : ಪ್ರಥಮ ಭಾಷೆ – ಕನ್ನಡ (01–K)

**ಅವಧಿ : 3 ಗಂಟೆ 15 ನಿಮಿಷ　　ಅಭ್ಯಾಸ ಪತ್ರಿಕೆ – 03　　ಗರಿಷ್ಠ ಅಂಕಗಳು : 100**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.　　1 x 6 = 6**

1. **ಕಾರವಾರದಲ್ಲಿ ಮಲೇರಿಯಾ ಹಬ್ಬಿ, ವೀರೇಶ್ವರ ಪಾಠಕ್‌ರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು. ಈ ವಾಕ್ಯವು**
   (ಎ) ಸಾಮಾನ್ಯ ವಾಕ್ಯ　　(ಬಿ) ಸಂಯೋಜಿತ ವಾಕ್ಯ
   (ಸಿ) ಮಿಶ್ರ ವಾಕ್ಯ　　(ಡಿ) ಸಂಯುಕ್ತಾಕ್ಷರ
2. **ಆತ್ಮಾರ್ಥಕ ಸರ್ವನಾಮ ಪದಕ್ಕೆ ಉದಾಹರಣೆ :**
   (ಎ) ಪರ್ವತ　　(ಬಿ) ತಾನು
   (ಸಿ) ಅವನು　　(ಡಿ) ಯಾರು?
3. **ಚತುರ್ಥಿ ವಿಭಕ್ತಿ ಕಾರಕಾರ್ಥ :**
   (ಎ) ಕತೃರ್ಾರ್ಥ　　(ಬಿ) ಕರ್ಮಾರ್ಥ
   (ಸಿ) ಸಂಪ್ರದಾನ　　(ಡಿ) ಕರಣಾರ್ಥ
4. **ಕ್ರಿಯಾರ್ಥಕಾವ್ಯಯವನ್ನು ಸೂಚಿಸುವ ಪದ :**
   (ಎ) ಚೆನ್ನಾಗಿ　　(ಬಿ) ಸಾಕು
   (ಸಿ) ಮತ್ತು　　(ಡಿ) ಅಯ್ಯೋ
5. **ತತ್ಪುರುಷ ಸಮಾಸಕ್ಕೆ ಉದಾಹರಣೆಯಾದ ಪದವಿದು :**
   (ಎ) ದೈವಭಕ್ತಿ　　(ಬಿ) ಮುಂಗೈ
   (ಸಿ) ಮೇಧಿನಿಪತಿ　　(ಡಿ) ಹೆದ್ದೊರೆ
6. **'ವಾಚಾಳಿ' ಎಂಬುದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :**
   (ಎ) ಕೃದಂತ ನಾಮ　　(ಬಿ) ತದ್ಧಿತಾಂತ ಭಾವನಾಮ
   (ಸಿ) ಕೃದಂತಾವ್ಯಯ　　(ಡಿ) ತದ್ಧಿತಾಂತ ನಾಮ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4 x 1 = 4**

7. ದಿಗಂತ : ಲೋಪಸಂಧಿ : : ಧೃತಿಗೆಟ್ಟು : ________
8. ದೀಪಿಕಾ : ದೀವಿಗೆ : : ಕುಠಾರ : ____________
9. ಇಲ್ಲದ್ದಂಗ : ಇಲ್ಲದಹಾಗೆ : : ಇಸವಾಸ : ________
10. ಕಟ್ಟಕಡೆಗೆ : ಕಡೆಗೆ ಕಡೆಗೆ : : ಬಟ್ಟಬಯಲು : ____________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ 1 x 7 = 7**

11. ಗುರುವಚನ ಯಾರ ಕಿವಿಗೆ ಆಭರಣವಾಗುತ್ತದೆ?
12 ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾದರು?
13. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?
14. ರತ್ನಗಂಬಳಿಯ ಬೆಲೆ ಎಷ್ಟಾಗಿತ್ತು?
15. ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ?
16. ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು?
17. ಪುಟ್ಟಪೋರಿ ಅಮ್ಮ ಎಲ್ಲಿ ಮಲಗಿದ್ದಾಳೆ?

**IV.ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ 10 x 2 = 20**

18. ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?
19. ನೆಹರು ಅವರು ಸರ್. ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?
20. ಟೊಪ್ಪಿಗೆಯ ವಿಶೇಷತೆಗಳನ್ನು ಗೋಕಾಕರು ಹೇಗೆ ದಾಖಲಿಸಿದ್ದಾರೆ?
21. ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?
22. ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ?
23. ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು?
24. ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?
25. ಸ್ವಾತಂತ್ರ್ಯ ಹೋರಾಟಗಾರರು ಕ್ರಿ.ಶ. 1932ರಲ್ಲಿ ವಿನಂತಿಸಿದ್ದ ಪತ್ರದ ಸಾಲುಗಳಲ್ಲಿ ದೇವರ ಪೂಜಾದಿಗಳನ್ನು ಮಾಡುವ ಬಗ್ಗೆ ಏನೆಂದು ವಿನಂತಿಸಿದ್ದಾರೆ?
26. ಹಠಾತ್ತನೆ ಪ್ರಾಸ ಬಿಟ್ಟು ಕವನ ರಚಿಸಿದ ಸಂದರ್ಭವನ್ನು ಕವಿ ಗೋವಿಂದ ಪೈ ಅವರ ಮಾತಿನಲ್ಲಿ ಬರೆಯಿರಿ.
27. ಭಗತ್ ಸಿಂಗ್ ನ ಸಹೋದರಿಗೆ ಆತನ ಉಪವಾಸದ ಕಾರಣಗಳು ಹೇಗೆ ತಿಳಿದು ಬಂದವು?

**V. ಕೆಳಗಿನ ಕವಿ/ ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 x 3 = 6**

28. ಸಾರಾ ಅಬೂಬಕ್ಕರ್
29. ರನ್ನ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ
ನೊರ್ವನೇ ವೀರನಾತನ ಯಜ್ಞತುರಗಮಿದು
ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ. 1 x 3 = 3**

31. ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.

**VIII. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 x 3 = 3**

32 "ದೇಶ ಸುತ್ತಿ ನೋಡು ಕೋಶ ಓದಿ ನೋಡು

**ಅಥವಾ**

ಮನಸ್ಸಿದ್ದರೆ ಮಾರ್ಗ

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x 3 = 18**

33. "ದುಡ್ಡು ದುರಭಿಮಾನದ ತವರು."
34. "ಆವಂತಿ ಸುಕುಮಾರನೆಂದು ಪೆಸರನಿಟ್ಟಂ"
35. "ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಟಿವ ಬಗೆ"
36. "ಹೊಸಗಾಲದ ಹಸುಮಕ್ಕಳ ಹರಸಿ"
37. "ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ"
38. "ಅರಸುಗಳ ವಾಜಿಯಂ ಬಿಡು"

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ 1 x 4 = 4**

ಹಸುರಾಗಸ; ____________
____________
____________
____________ ಬಿಸಿಲೂ!

**ಅಥವಾ**

ಹೊಸ ____________
____________
____________
____________ ಹಸುರಿಳೆಯುಸಿರೂ!

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1 x 4 = 4**

ಮತಗಳೆಲ್ಲವೂ ಪಥಗಳು ಎನ್ನುವ
ಹೊಸ ಎಚ್ಚರದೊಳು ಬದುಕೋಣ
ಭಯ ಸಂಶಯದೊಳು ಕಂದಿದ ಕಣ್ಣೊಳು
ನಾಳಿನ ಕನಸನು ಬಿತ್ತೋಣ.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 4 = 8**

41. ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?

42. ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?

**ಅಥವಾ**

ಪಾಂಡವರು ಸೋದರರು ಎಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

ಜೂನ್ 5ರ 'ವಿಶ್ವ ಪರಿಸರ ದಿನಾಚರಣೆ' ಬಂತೆಂದರೆ ವಿದ್ಯಾರ್ಥಿಗಳೆಲ್ಲ ವಿಶೇಷ ಸಂಭ್ರಮ. ಅಂದು ಏನೆಲ್ಲ ವರ್ಣರಂಜಿತ ಮೆರವಣಿಗೆಗಳು, ಎಷ್ಟೆಲ್ಲ ವೈವಿಧ್ಯಮಯ ಕಾರ್ಯಕ್ರಮಗಳು ನಡೆಯುತ್ತವೆ. ಬೆಂಗಳೂರಿನಲ್ಲಂತೂ ಲಕ್ಷಾಂತರ ವಿದ್ಯಾರ್ಥಿಗಳು ಚಿತ್ರವಿಚಿತ್ರ ಮುಖವಾಡಗಳನ್ನು ಧರಿಸಿ ವಾಯುಮಾಲಿನ್ಯದ ವಿರುದ್ಧ ಮೌನಮೆರವಣಿಗೆ ಮಾಡುವುದೇನು; ಸಸ್ಯಸಂಪತ್ತಿನ ರಕ್ಷಣೆಯ ಘೋಷಣೆ ಮಾಡುತ್ತ ಲಾಲ್‌ಬಾಗಿನಿಂದ ಕಬ್ಬನ್ ಪಾರ್ಕ್‌ನವರೆಗೆ ಸಾಲಾಗಿ ಬರುವುದೇನು; ಜಲರಕ್ಷಣೆ ಮಾಡಬೇಕೆಂದು ಒತ್ತಾಯಿಸಿ ವಿಧಾನಸೌಧದಿಂದ ನೀರಿಗಾಗಿ ಓಟ ಮಾಡುವುದೇನು; ಕೆರೆಗಳ ರಕ್ಷಣೆ ಮಾಡಬೇಕೆಂದು ಒತ್ತಾಯಿಸಿ ಸ್ಯಾಂಕಿಟ್ಯಾಂಕ್ ಸುತ್ತ ಮಾನವ ಸರಪಳಿ ನಿರ್ಮಿಸುವುದು. ಕಂಠೀರವ ಕ್ರೀಡಾಂಗಣದಲ್ಲಿ ನೃತ್ಯ ಮಾಡುವುದು, ಕಲಾಪ್ರದರ್ಶನ ಮಾಡುವುದು. ಬೀದಿನಾಟಕ ಮಾಡುವುದು ಹೀಗೆ ಕಳೆದ ಹಲವಾರು ವರ್ಷಗಳಿಂದ ನಡೆಯತ್ತವೆ. ಆದರೂ ನಮ್ಮ ಜನರಿಗೆ ಪರಿಸರ ಕಾಳಜಿಯ ಬಗ್ಗೆ ಇನ್ನೂ ಅರಿವಾಗದಿರುವುದು ಸೋಜಿಗದ ಸಂಗತಿಯಾಗಿದೆ.

ಇಂದು ಯುರೋಪ್, ಅಮೇರಿಕಾ, ಆಸ್ಟ್ರೇಲಿಯಾ, ಜಪಾನಗಳಂತಹ ವಿದೇಶ ರಾಷ್ಟ್ರಗಳಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಜನಜಾಗೃತಿ ಕಾರ್ಯಕ್ರಮಗಳು ನಡೆಯುತ್ತಿವೆ. ಅಲ್ಲಿನವರು ಹಾಕಿಕೊಳ್ಳುವ ಕಾರ್ಯಗಳು ಕೂಡ ತೀರ ವಿಶಿಷ್ಟವಾಗಿರುತ್ತವೆ. ಗ್ರೀನ್‌ಪೀಸ್‌ನಂಥ ಪೃಥ್ವಿರಕ್ಷಣಾ ಯೋಧರ ದಟ್ಟಹೊಗೆ ಕಾರುವ ಕಾರ್ಖಾನೆಗಳ ಚಿಮಣಿಗಳ ಮೇಲೆ ಹತ್ತಿ ಶುದ್ಧಗಾಳಿ ನಮ್ಮೆಲ್ಲರ ಹಕ್ಕು ಎಂದು ಘೋಷಣೆ ಬರೆಯುತ್ತಾರೆ. ಹೆಮ್ಮರಗಳನ್ನು ಕಡಿದು ಸಾಗಿಸುವ ದಾರಿಗೆ ಅಡ್ಡಲಾಗಿ ಗುಂಡಿತೋಡಿ, ತಮಗೆ ತಾವೇ ಸರಪಳಿ ಬಿಗಿದು ಬೀಗ ಹಾಕಿ ಕೂತು ಬಿಡುತ್ತಾರೆ. ಚರ್ಮಕ್ಕಾಗಿ ಸೀಲ್‌ಪ್ರಾಣಿಗಳನ್ನು ಕೊಲ್ಲಬಾರದೆಂದು ಹಿಮಪ್ರಾಂತ್ಯಕ್ಕೆ ಹೋಗಿ ಸೀಲ್‌ಪ್ರಾಣಿಗಳ ಮೇಲೆ ಎನಾಮಲ್ ಬಣ್ಣಸುರಿದು ಚರ್ಮದ ಅಂದಗೆಡಿಸಿ ಬರುತ್ತಾರೆ. ಕಾರ್ಖಾನೆಗಳು ಸಮುದ್ರದ ಆಳಕ್ಕೆ ಕೊಳೆಯನ್ನು ಬಿಡಬಾರದೆಂದು ಮುಳುಕುವೀರರು ಸಮುದ್ರದ ಆಳಕ್ಕೆ ಹೋಗಿ ಕೊಳವೆಯ ಬಾಯಿಯನ್ನು ಕಟ್ಟಿ ಬರುತ್ತಾರೆ. ಇಂಥಹ ಕೆಚ್ಚೆದೆಯ ಸಾಹಸಗಳಲ್ಲಿ ತೊಡಗಿಕೊಂಡು ಮಾತ್ರ ಪರಿಸರ ರಕ್ಷಣೆ ಮಾಡುತ್ತಾರೆ.

**ಪ್ರಶ್ನೆಗಳು :**

43(ಅ) ವಿದೇಶಗಳಲ್ಲಿ ಪರಿಸರ ಸಂರಕ್ಷಣೆಗಾಗಿ ಯಾವ ರೀತಿ ಸಾಹಸಗಳಲ್ಲಿ ತೊಡಿಗಿಸಿಕೊಳ್ಳುತ್ತಾರೆ ?

43(ಆ) ವಿಶ್ವ ಪರಿಸರ ದಿನಾಚರಣೆ ಸಂಭ್ರಮ ಹೇಗಿರುತ್ತದೆ?

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 x 5 = 5**

44. ನಿಮ್ಮನ್ನು ಬೆಂಗಳೂರಿನ ಹೊಯ್ಸಳ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಜನನಿ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ಪ್ರತಿಭಾ ಕಾರಂಜಿ ಕಾರ್ಯಕ್ರಮ ಕುರಿತು ತುಮಕೂರಿನ ಶ್ರೀಸಿದ್ಧಗಂಗ ಮಠದಲ್ಲಿ 10ನೇ ತರಗತಿ ಓದುತ್ತಿರುವ ನಿಮ್ಮ ಸ್ನೇಹಿತ/ತೆಗೊಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ರಾಮನಗರದ ಕುವೆಂಪು ಪ್ರೌಢಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ 'ಧ್ರುವ' ಎಂದು ಭಾವಿಸಿಕೊಂಡು ಕನ್ನಡ ವಿಶ್ವಕೋಶ ಕಳಿಸಿಕೊಡುವಂತೆ ಜ್ಞಾನದೀಕ್ಷಾ ಪುಸ್ತಕ ಭಂಡಾರಕ್ಕೆ ಒಂದು ಮನವಿ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1 x 5 = 5**

45. ಸಮೂಹ ಮಾಧ್ಯಮಗಳು

**ಅಥವಾ**

ದೂರದರ್ಶನದ ಒಳಿತು–ಕೆಡುಕುಗಳು

# ಉಪನಿರ್ದೇಶಕರು (ಆಡಳಿತ) ರವರ ಕಚೇರಿ
# ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

## 2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ
## ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು
## ವಿಷಯ : ಪ್ರಥಮ ಭಾಷೆ – ಕನ್ನಡ (01–K)

**ಅವಧಿ : 3 ಗಂಟೆ 15 ನಿಮಿಷ    ಅಭ್ಯಾಸ ಪತ್ರಿಕೆ – 03    ಗರಿಷ್ಠ ಅಂಕಗಳು : 100**

## ಮಾದರಿ ಉತ್ತರಗಳು

| ಕ್ರ.ಸಂ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.**<br><br>**ಅಂಕ ಸೂಚಿ : ಪ್ರತಿ ಸರಿಯುತ್ತರಕ್ಕೆ 1 ಅಂಕ ನೀಡುವುದು.** | **1 x 6 = 6** |
| **1.** | **ಕಾರವಾರದಲ್ಲಿ ಮಲೇರಿಯಾ ಹಬ್ಬಿ, ವೀರೇಶ್ವರ ಪಾಠಕ್‌ರವರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಿ, ಅವರು ಅಲ್ಲಿಂದ ವರ್ಗಾವಣೆ ಹೊಂದುವಂತೆ ಆಯಿತು. ಈ ವಾಕ್ಯವು**<br>(ಎ) ಸಾಮಾನ್ಯ ವಾಕ್ಯ    (ಬಿ) ಸಂಯೋಜಿತ ವಾಕ್ಯ<br>(ಸಿ) ಮಿಶ್ರ ವಾಕ್ಯ    (ಡಿ) ಸಂಯುಕ್ತಾಕ್ಷರ<br>**ಉತ್ತರ : (ಸಿ) ಮಿಶ್ರ ವಾಕ್ಯ** | |
| **2.** | **ಆತ್ಮಾರ್ಥಕ ಸರ್ವನಾಮ ಪದಕ್ಕೆ ಉದಾಹರಣೆ :**<br>(ಎ) ಪರ್ವತ    (ಬಿ) ತಾನು<br>(ಸಿ) ಅವನು    (ಡಿ) ಯಾರು?<br>**ಉತ್ತರ : (ಬಿ) ತಾನು** | |
| **3.** | **ಚತುರ್ಥಿ ವಿಭಕ್ತಿ ಕಾರಕಾರ್ಥ :**<br>(ಎ) ಕರ್ತ್ರಾರ್ಥ    (ಬಿ)ಕರ್ಮಾರ್ಥ<br>(ಸಿ) ಸಂಪ್ರದಾನ    (ಡಿ) ಕರಣಾರ್ಥ<br>**ಉತ್ತರ : (ಸಿ) ಸಂಪ್ರದಾನ** | |

| | | |
|---|---|---|
| 4. | **ಕ್ರಿಯಾರ್ಥಕಾವ್ಯಯವನ್ನು ಸೂಚಿಸುವ ಪದ :**<br>(ಎ) ಚೆನ್ನಾಗಿ (ಬಿ) ಸಾಕು<br>(ಸಿ) ಮತ್ತು (ಡಿ) ಅಯ್ಯೋ<br>**ಉತ್ತರ : (ಬಿ) ಸಾಕು** | |
| 5. | **ತತ್ಪುರುಷ ಸಮಾಸಕ್ಕೆ ಉದಾಹರಣೆಯಾದ ಪದವಿದು :**<br>(ಎ) ದೈವಭಕ್ತಿ (ಬಿ) ಮುಂಗೈ<br>(ಸಿ) ಮೇಧಿನಿಪತಿ (ಡಿ) ಹೆದ್ದೊರೆ<br>**ಉತ್ತರ : (ಎ) ದೈವಭಕ್ತಿ** | |
| 6. | **'ವಾಚಾಳಿ' ಎಂಬುದು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ :**<br>(ಎ) ಕೃದಂತ ನಾಮ (ಬಿ) ತದ್ಧಿತಾಂತ ಭಾವನಾಮ<br>(ಸಿ) ಕೃದಂತಾವ್ಯಯ (ಡಿ) ತದ್ಧಿತಾಂತ ನಾಮ<br>**ಉತ್ತರ : (ಡಿ) ತದ್ಧಿತಾಂತ ನಾಮ** | |
| II. | **ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** | **4 x 1 = 4** |
| 7. | ದಿಗಂತ : ಲೋಪಸಂಧಿ : : ಧೃತಿಗೆಟ್ಟು : **ಆದೇಶ ಸಂಧಿ** | |
| 8. | ದೀಪಿಕಾ : ದೀವಿಗೆ : : ಕುಠಾರ : **ಕೊಡಲಿ** | |
| 9. | ಇಲ್ಲದ್ದಂಗ : ಇಲ್ಲದಹಾಗೆ : : ಇಸವಾಸ : **ವಿಶ್ವಾಸ** | |
| 10. | ಕಟ್ಟಕಡೆಗೆ : ಕಡೆಗೆ ಕಡೆಗೆ : : ಬಟ್ಟಬಯಲು : **ಬಯಲು ಬಯಲು** | |
| III. | **ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.**<br>**ಅಂಕ ಸೂಚಿ : ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿಯುತ್ತರಕ್ಕೆ 1 ಅಂಕ ನೀಡುವುದು** | **1 x 7 = 7** |
| 11. | **ಗುರುವಚನ ಯಾರ ಕಿವಿಗೆ ಆಭರಣವಾಗುತ್ತದೆ?**<br>**ಉತ್ತರ:** ಗುರುವಚನ ಸಜ್ಜನರ ಕಿವಿಗೆ ಆಭರಣವಾಗುತ್ತದೆ.<br>**ನಾಲ್ವಡಿ ಕೃಷ್ಣರಾಜ ಒಡೆಯರು ಯಾವುದಕ್ಕಾಗಿ ಕಂಕಣಬದ್ಧರಾದರು?** | |

| | | |
|---|---|---|
| **12.** | **ಉತ್ತರ:** ನಾಲ್ವಡಿ ಕೃಷ್ಣರಾಜ ಒಡೆಯರು **ಮೈಸೂರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ** ಕಂಕಣಬದ್ಧರಾದರು. | |
| **13.** | **ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?**<br>**ಉತ್ತರ:** ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು **ದೇವರು, ಗುರುಗಳು, ವೇದಾಧ್ಯಯನ ನಿರತನಾಗಿ** ಪೂಜೆ ಮಾಡುತ್ತಾ ಕಳೆದನು. | |
| **14.** | **ರತ್ನಗಂಬಳಿಯ ಬೆಲೆ ಎಷ್ಟಾಗಿತ್ತು?**<br>**ಉತ್ತರ :** ರತ್ನಗಂಬಳಿಯ ಬೆಲೆ ಲಕ್ಷದಿನಾರ. | |
| **15.** | **ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ?**<br>**ಉತ್ತರ :** ಹಕ್ಕಿಯು **ಎವೆ ತೆರೆದಿಕ್ಕುವ ಹೊತ್ತಿನೊಳಗೆ ಅಂದರೆ ಕಣ್ಣು ರೆಪ್ಪೆ** ಮಿಟುಕಿಸುವಷ್ಟರಲಿ **ಗಾವುದ, ಗಾವುದ** ರೀತಿಯಲ್ಲಿ ಹಾರುತ್ತಿದೆ. | |
| **16.** | **ದ್ರೋಣನು ಯಾರೊಡನೆ ಪರಶುರಾಮನ ಬಳಿಗೆ ಬಂದನು?**<br>**ಉತ್ತರ:** ದ್ರೋಣನು **ಅಶ್ವತ್ಥಾಮನೊಡನೆ** ಪರಶುರಾಮನ ಬಳಿಗೆ ಬಂದನು. | |
| **17.** | **ಪುಟ್ಟಪೋರಿ ಅಮ್ಮ ಎಲ್ಲಿ ಮಲಗಿದ್ದಾಳೆ?**<br>**ಉತ್ತರ:** ಅಮ್ಮ ಗುಡಿಸಲಿನಲ್ಲಿ ಮಲಗಿದ್ದಾಳೆ. | |
| **IV.** | **ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ**<br>**ಅಂಕ ಸೂಚಿ: ಅಂಶಗಳನ್ನಾಧರಿಸಿ ಪತ್ಯಾಂಶಕ್ಕೆ – 2 ಅಂಕ** | **10x 2= 20** |
| **18.** | **ಲಂಡನ್ನಿನ ಹೆಣ್ಣು ಮಕ್ಕಳು ಯಾವ ಯಾವ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ?**<br>**ಉತ್ತರ:** ಲಂಡನ್ನಿನಲ್ಲಿ ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಸ್ತ್ರೀಯರೇ ಕೆಲಸ ಮಾಡುತ್ತಾರೆ. ಉಪಾಹಾರ ಗೃಹಗಳಲ್ಲಿ ಕಾರ್ಯ ನಿರ್ವಹಿಸುವ ಮಾಣಿಗಳೂ ಸಹ ಹೆಣ್ಣು ಮಕ್ಕಳೇ ಆಗಿರುತ್ತಾರೆ. ದೊಡ್ಡದೊಡ್ಡ ಅಂಗಡಿಗಳಲ್ಲಿ ಹೆಣ್ಣುಮಕ್ಕಳು ಕಾರಕೂನ ಹಾಗೂ ಟೈಪಿಸ್ಟ್ ಕೆಲಸದಲ್ಲಿ ನಿಯುಕ್ತರಾಗಿರುತ್ತಾರೆ. ಸಿನಿಮಾ ಗೃಹದಲ್ಲಿ ಪ್ರೇಕ್ಷಕರಿಗೆ ಜಾಗವನ್ನು ಹುಡುಕಿಕೊಡುವ ಕಾರ್ಯ ನಿರ್ವಹಿಸುವವರೂ ಸಹ ಹೆಣ್ಣುಮಕ್ಕಳು. ಹೆಣ್ಣುಮಕ್ಕಳನ್ನು ಅತ್ಯಾದರದಿಂದ ನಡೆಸಿಕೊಳ್ಳುವ ಸಂಸ್ಕೃತಿಯ ಶಿಖರವನ್ನು ಇಂಗ್ಲೆಂಡಿನಲ್ಲಿ ಕಾಣಬಹುದು. | |
| | **ನೆಹರು ಅವರು ಸರ್. ಎಂ. ವಿಶ್ವೇಶ್ವರಯ್ಯ ಅವರ ಬಗ್ಗೆ ಏನೆಂದು ಹೇಳಿದ್ದಾರೆ?** | |

**19.** **ಉತ್ತರ:–** ನೆಹರು ಅವರು ಸರ್. ಎಂ. ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ವಿಶ್ವೇಶ್ವರಯ್ಯ ಅವರನ್ನು ಕುರಿತು "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರು ಎಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ" ಎಂದು ಹೇಳಿದ್ದಾರೆ.

**20.** ಟೊಪ್ಪಿಗೆಯ ವಿಶೇಷತೆಗಳನ್ನು ಗೋಕಾಕರು ಹೇಗೆ ದಾಖಲಿಸಿದ್ದಾರೆ?

**ಉತ್ತರ:–** ಲೇಖಕರು ಲಂಡನ್ ನಗರದಲ್ಲಿ ಹೆಣ್ಣುಮಕ್ಕಳು ಧರಿಸಿರುವ ಟೊಪ್ಪಿಗೆಯನ್ನು ಬಹು ಕುತೂಹಲದಿಂದ ನೋಡುತ್ತಾರೆ. ಒಂದು ಟೊಪ್ಪಿಗೆಯಂತೆ ಇನ್ನೊಂದು ಇರುವುದಿಲ್ಲ ಸಿಕ್ಕಿಸಿದ ಕುಚ್ಚವಾದರೂ ಕನಿಷ್ಠ ಪಕ್ಷಕ್ಕೆ ಬೇರೆಯಾಗಿರುತ್ತದೆ! ಕೋಟ್ಯವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆಯಲ್ಲವೆ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ ಎಂಬುದು ಲೇಖಕರ ಅಭಿಪ್ರಾಯವಾಗಿದೆ.

**21.** **ಡಾಕ್ಟರ್‌ಗೆ ವಿಮಾನದ ಪೈಲಟ್ ಏನು ಹೇಳಿದನು?**

**ಉತ್ತರ:–** ಡಾಕ್ಟರ್‌ಗೆ ವಿಮಾನದ ಪೈಲಟ್ **"ಡಾಕ್ಟರ್, ರೇಡಿಯೋ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಗ್ರೌಂಡಿನೊಡನೆ ಸಂಪರ್ಕ ಬೆಳೆಸಲು ಸಾಧ್ಯವಾಗುತ್ತಿಲ್ಲ. ಎಲ್ಲಾದರೂ ಹೇಗಾದರೂ ಇಳಿಯೋಣವೆಂದರೆ ಈ ಕತ್ತಲೆಯಲ್ಲಿ ಏನೂ ಕಾಣಿಸುತ್ತಿಲ್ಲವಲ್ಲ?"** ಎಂದು ಹೇಳಿದನು.

**22.** **ತಾನು ಹೋರಾಡುತ್ತಿರುವುದು ನೆಲಕ್ಕಲ್ಲ ಛಲಕ್ಕೆ ಎಂಬುದನ್ನು ದುರ್ಯೋಧನ ಹೇಗೆ ವಿವರಿಸುತ್ತಾನೆ?**

**ಉತ್ತರ:–** ದುರ್ಯೋಧನನು ಭೀಷ್ಮರನ್ನು ಕುರಿತು "ನಾನು ಪಾಂಡವರಲ್ಲಿ ನೆಲಕ್ಕಾಗಿ ಯುದ್ಧ ಮಾಡುವೆನು ಎಂದು ತಿಳಿದಿರುವರೇ; **ಛಲಕ್ಕಾಗಿ ಯುದ್ಧ ಮಾಡುವೆನು**. ನನ್ನ ಪಾಲಿಗೆ ಇದು ಪಾಳುಭೂಮಿ. ನನ್ನ ಮಿತ್ರನಾದ ಕರ್ಣನು, ಪ್ರೀತಿಯ ತಮ್ಮನಾದ ದುಶ್ಯಾಸನನು ಹಾಗೂ ನೂರುಜನ ತಮ್ಮಂದಿರು ಶತ್ರುಗಳನ್ನು ಎದುರಿಸಿ ಯುದ್ಧಮಾಡಿ ಸತ್ತರು. ಆಗ ನನಗೆ ಕೋಪವು ಹುಟ್ಟಿ ಹೊರಹೊಮ್ಮಿತು. ಆದ್ದರಿಂದ ಪಾಂಡವರೊಡನೆ ಯುದ್ಧಮಾಡಿ, ಛಲವನ್ನೇ ಮೆರೆಯುವೆನು" ಎಂದು ಹೇಳಿದನು.

**23.** **ದ್ರೋಣನು ಶಪಥ ಮಾಡುವಾಗ ಹೇಳಿದ ಮಾತುಗಳಾವುವು?**

**ಉತ್ತರ:–** ದ್ರುಪದನು ದ್ರೋಣನಿಗೆ "ನಿನ್ನನ್ನು ನಾನು ತಿಳಿಯೆನು. ನೀನು ಅದೆಲ್ಲಿ ನನ್ನನ್ನು ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಗೆಳೆತನವೋ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರಾಗುತ್ತಾರೆಯೇ?" ಎಂಬ ಮಾತುಗಳಿಂದ ಮರ್ಮಭೇದಕವಾಗುವಂತೆ ತೀವ್ರವಾದ ನಾಚಿಕೆಗೆ ಈಡಾಗುವಂತೆ ಮಾಡಿದನು.

**ವಿವೇಕಾನಂದರ ದೃಷ್ಟಿಯಲ್ಲಿ ದೇಶದ ಪ್ರಗತಿ ಸ್ಥಿರವಾಗುವುದು ಯಾವಾಗ?**

| | | |
|---|---|---|
| **24.** | **ಉತ್ತರ** : ದೇಶದ ಭಾಷೆಯಲ್ಲಿ ಜನರಿಗೆ ಭಾವನೆಗಳನ್ನು ನೀಡಬೇಕು. ಅಂದಾಗ ಅವರು ವಿಷಯಗ್ರಹಣ ಮಾಡಿಕೊಳ್ಳುವರು. ಇದರ ಜೊತೆಯಲ್ಲಿ ಅವರಿಗೆ ಮತ್ತೊಂದು ಆವಶ್ಯಕತೆ ಇದೆ. ಅದು ಸಂಸ್ಕೃತಿ. ಅವರಿಗೆ ಈ ಸಂಸ್ಕೃತಿಯನ್ನು ಕೊಟ್ಟಾಗ ದೇಶದ ಪ್ರಗತಿ ಸ್ಥಿರವಾಗುವುದು. | |
| **25.** | **ಸ್ವಾತಂತ್ರ್ಯ ಹೋರಾಟಗಾರರು ಕ್ರಿ.ಶ. 1932ರಲ್ಲಿ ವಿನಂತಿಸಿದ್ದ ಪತ್ರದ ಸಾಲುಗಳಲ್ಲಿ ದೇವರ ಪೂಜಾದಿಗಳನ್ನು ಮಾಡುವ ಬಗ್ಗೆ ಏನೆಂದು ವಿನಂತಿಸಿದ್ದಾರೆ?**<br>**ಉತ್ತರ:** ಸ್ವಾತಂತ್ರ್ಯ ಹೋರಾಟಗಾರರು ಕ್ರಿ.ಶ. 1932ರಲ್ಲಿ ಬರೆದ ವಿನಂತಿಪತ್ರದ ಸಾಲುಗಳಲ್ಲಿ ದೇವರ ಪೂಜಾದಿಗಳನ್ನು ಶುದ್ಧ ಶುಭ್ರ ದೇಶೀ ವಸ್ತುಗಳಿಂದಲೇ ಮಾಡಿರಿ, ಪರದೇಶಿ ವಸ್ತುಗಳಿಂದ ದೇವರ ಮೂರ್ತಿಗಳನ್ನು ಭ್ರಷ್ಟ ಮಾಡಬೇಡಿರಿ! ಎಂದು ಉಲ್ಲೇಖಿಸಿದ್ದಾರೆ. | |
| **26.** | **ಹಠಾತ್ತನೆ ಪ್ರಾಸ ಬಿಟ್ಟು ಕವನ ರಚಿಸಿದ ಸಂದರ್ಭವನ್ನು ಕವಿ ಗೋವಿಂದ ಪೈ ಅವರ ಮಾತಿನಲ್ಲಿ ಬರೆಯಿರಿ.**<br>**ಉತ್ತರ** : ಹಠಾತ್ತನೆ ಪ್ರಾಸ ಬಿಟ್ಟು ಕವನ ರಚಿಸಿದ ಸಂದರ್ಭವನ್ನು ಕವಿ ಗೋವಿಂದ ಪೈ ಅವರು, "ಒಂದು ಮುಂಜಾನೆ ಮಾಳಿಗೆಯಲ್ಲಿ ಶತಪದಗೆಯ್ಯುತ್ತಿದ್ದಾಗ ಹಠಾತ್ತಾಗಿ, ಆಗೋದು ಹೋಗೋದು ದೇವರ ಇಚ್ಛೆ, ಹೂಡೋದು ಬಿತ್ತೋದು ನನ್ನ ಇಚ್ಛೆ, ಇನ್ನು ಮೀನಮೇಷ ನೋಡದೆ 'ಪ್ರಾಸವನೀಗಲೆ ತೊರೆದುಬಿಡುವುದೇ ನಿಶ್ಚಯಂ' ಎಂದಾಯಿತು. ಮರದ ಹಣ್ಣು ಮರದ ಬುಡದಾಗೆ ಬಂತು. ಕೂಡಲೆ ರವೀಂದ್ರನಾಥ ಠಾಕೂರರ 'ಅಯಿ ಭುವನ ಮನೋಮೋಹಿನೀ' ಎಂದು ಮೊದಲಾಗುವ 'ಭಾರತ ಲಕ್ಷ್ಮೀ' ಎಂಬ ಬಂಗಾಳಿ ಗೀತವನ್ನು ಕನ್ನಡಿಸಿದೆ." ಎಂದು ಹೇಳಿದ್ದಾರೆ. | |
| **27.** | **ಭಗತ್ ಸಿಂಗ್ ನ ಸಹೋದರಿಗೆ ಆತನ ಉಪವಾಸದ ಕಾರಣಗಳು ಹೇಗೆ ತಿಳಿದು ಬಂದವು?**<br>**ಉತ್ತರ:** ಭಗತ್ ಸಿಂಗ್ ರಾತ್ರಿ ಮನೆಗೆ ಹಿಂತಿರುಗಿದಾಗ ಅವನ ಸಹೋದರಿ ಎಂದಿನಂತೆ ಅವನನ್ನು ಊಟಕ್ಕೆ ಎಬ್ಬಿಸಿದರೆ ಒಲ್ಲೆನೆಂದು ಮುಖ ತಿರುಗಿಸಿದ. ಅವನಿಗೆ ಪ್ರಿಯವಾದ ಮಾವಿನ ಹಣ್ಣೊಂದನ್ನು ಕೊಡಲು ಹೋದಾಗ ಅದನ್ನು ಕೂಡ ನಿರಾಕರಿಸಿ, ಅವಳನ್ನು ಮನೆಯ ಹಿಂಭಾಗಕ್ಕೆ ಕರೆದುಕೊಂಡು ಹೋಗಿ ತನ್ನ ಡಬ್ಬಿಯಲ್ಲಿದ್ದ ಮಣ್ಣನ್ನು ತೋರಿಸಿದ. ರಕ್ತದಲ್ಲಿ ಕಲೆಸಿದಂತಿದ್ದ ಆ ಮಣ್ಣು ಎಲ್ಲಿಯದೆಂದು ತಿಳಿಯಿತು. ಆಗ ಅವನ ಉಪವಾಸಕ್ಕೆ ಕಾರಣವೇನೆಂದು ಅವಳಿಗೆ ಗೊತ್ತಾಯಿತು. | |
| **V.** | **ಕೆಳಗಿನ ಕವಿ/ ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪ ದಲ್ಲಿ ಬರೆಯಿರಿ.**<br>**ಕಾಲ, ಸ್ಥಳ – 1 ಅಂಕ**<br>**ಕೃತಿಗಳು, ಪ್ರಶಸ್ತಿಗಳು/ಬಿರುದುಗಳು – 1 ಅಂಕ**<br>**ವಾಕ್ಯರೂಪ, ಭಾಷಾ ಶೈಲಿ – 1 ಅಂಕ**<br><br>**ಸಾರಾ ಅಬೂಬಕ್ಕರ್** | **2 x 3 = 6** |

| | | |
|---|---|---|
| **28.** | **ಶ್ರೀಮತಿ ಸಾರಾ ಅಬೂಬಕ್ಕರ್ ಅವರು** ಕ್ರಿ.ಶ. 1936 **ರಲ್ಲಿ** ಕಾಸರಗೋಡಿನಲ್ಲಿ **ಜನಿಸಿದರು. ಕನ್ನಡ ನಾಡಿನ ಪ್ರಸಿದ್ಧ ಕಥೆಗಾರ್ತಿ ಹಾಗೂ ಕಾದಂಬರಿಗಾರ್ತಿಯಾಗಿ ಜನಪ್ರಿಯರಾಗಿದ್ದಾರೆ. ಇವರು** ಚಪ್ಪಲಿಗಳು, ಖೆಡ್ಡಾ, ಪಯಣ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು ಎಂಬ ಕಥಾಸಂಕಲನಗಳನ್ನು ಹಾಗೂ ಚಂದ್ರಗಿರಿಯ ತೀರದಲ್ಲಿ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ **ಮೊದಲಾದ ಕಾದಂಬರಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಸೇವೆಗಾಗಿ ಅನೇಕ ಪ್ರಶಸ್ತಿಗಳು ಲಭಿಸಿವೆ.** ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿಯೂ **ಸಹ ಇವರಿಗೆ ಲಭಿಸಿದೆ.** | |
| **29.** | ರನ್ನ<br>ಮಹಾಕವಿ ರನ್ನನು ಕ್ರಿ. ಶ. ಸುಮಾರು **949** ರಲ್ಲಿ ಜನಿಸಿದನು. ಬಾಗಲಕೋಟ ಜಿಲ್ಲೆಯ **ಮುದುವೊಳಲು** [ಈಗಿನ ಮುದೋಳ] ಎಂಬ ಸ್ಥಳದಲ್ಲಿ ಜನಿಸಿದನು. ಈತನು **ಚಾಲುಕ್ಯ ದೊರೆಯಾದ ತೈಲಪನ ಆಸ್ಥಾನದಲ್ಲಿದ್ದನು.** ಇವನು **ಸಾಹಸ ಭೀಮ ವಿಜಯ, ಅಜಿತನಾಥ** ಪುರಾಣ, ಪರಶುರಾಮ ಚರಿತೆ, ಚಕ್ರೇಶ್ವರ ಚರಿತೆ ಎಂಬ ಗ್ರಂಥಗಳನ್ನು ರಚಿಸಿದ್ದಾನೆ. **ರನ್ನ ಕಂದ** ಎಂಬ ನಿಘಂಟನ್ನು ರಚಿಸಿರುವುದಾಗಿ ತಿಳಿದು ಬಂದಿದೆ. ಇವನಿಗೆ ತೈಲಪನು **'ಕವಿಚಕ್ರವರ್ತಿ'** ಎಂಬ ಬಿರುದನ್ನು ನೀಡಿ ಗೌರವಿಸಿದನು. ರನ್ನನು ರತ್ನತ್ರಯರಲ್ಲಿ ಒಬ್ಬನಾಗಿದ್ದಾನೆ. | |
| **VI.**<br>**30.** | **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು** ಬರೆಯಿರಿ.<br>**ಅಂಕ ಸೂಚಿ: ಪ್ರಸ್ತಾರ ಹಾಕುವುದು – 1 ಅಂಕ**<br>**ಗಣ ವಿಭಾಗ – 1 ಅಂಕ**<br>**ಛಂದಸ್ಸಿನ ಹೆಸರು – 1 ಅಂಕ**<br><br>ಉರ್ವಿಯೊಳ್ ಕೌಸಲ್ಯೆ ಪಡೆದ ಕುವರಂ ರಾಮ<br>ನೊರ್ವನೇ ವೀರನಾತನ ಯಜ್ಞತುರಗಮಿದು<br>ನಿರ್ವಹಿಸಲಾರ್ಪರಾರಾದೊಡಂ ತಡೆಯಲೆಂದಿರ್ದ ಲೇಖನವನೋದಿ<br><br>5   5   5   5   = 20<br>– ∪ – \| – – ∪ \| ∪∪∪∪∪ \| – – ∪ \| | **1 x 3 = 3** |

| | | | |
|---|---|---|---|
| ಉರ್ವಿಯೊಳ್ | ಕೌಸಲೆ | ಪಡೆದಕುವ | ರಂ ರಾಮು |

| 5 | 5 | 5 | 5 | = 20 |
|---|---|---|---|---|
| – ∪ – | – ∪ – | ∪∪ – ∪ | ∪∪∪∪∪ | |
| ನೊರ್ವನೇ | ವೀರನಾ | ತನ ಯಜ್ಞ | ತುರಗಮಿದು | |

| 5 | 5 | 5 | 5 | 5 | 5 | ಗು =30 + 1ಗುರು |
|---|---|---|---|---|---|---|
| –∪∪∪ | – ∪ – | – ∪ – | ∪∪∪ – | – ∪ – | ∪∪∪ – | – |
| ನಿರ್ವಹಿಸ | ಲ ರ್ಪರಾ | ರಾದೊಡಂ | ತಡೆಯಲೆಂ | ದಿರ್ದಲೇ | ಖನವನೋ | ದಿ |

**ಛಂದಸ್ಸು – ವಾರ್ಧಕ ಷಟ್ಪದಿ**

**VII.** **ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ.** **1 x 3 = 3**

**ಅಂಕಸೂಚಿ: ಅಲಂಕಾರದ ಹೆಸರು – 1 ಅಂಕ**
**ಲಕ್ಷಣ ಬರೆಯುವುದು – 1 ಅಂಕ**
**ಅಂಶಗಳನ್ನು ಗುರುತಿಸಿ ಸಮನ್ವಯಗೊಳಿಸುವುದು – 1 ಅಂಕ**

**31.** **ಮಾತು ಬಲ್ಲವನಿಗೆ ಜಗಳವಿಲ್ಲ; ಊಟ ಬಲ್ಲವನಿಗೆ ರೋಗವಿಲ್ಲ.**

**ಅಲಂಕಾರ:** ದೃಷ್ಟಾಂತಾಲಂಕಾರ

**ಲಕ್ಷಣ:** ಎರಡು ಬೇರೆ ಬೇರೆ ವಾಕ್ಯಗಳಲ್ಲಿ ಅರ್ಥಸಾದೃಶ್ಯದಿಂದ ಬಿಂಬ ಪ್ರತಿಬಿಂಬ ಭಾವವು ತೋರಿ ಬಂದರೆ ಅದು **ದೃಷ್ಟಾಂತಾಲಂಕಾರ.**

**ಉಪಮೇಯ:** ಮಾತು ಬಲ್ಲವನಿಗೆ ಜಗಳವಿಲ್ಲ

**ಉಪಮಾನ:** ಊಟ ಬಲ್ಲವನಿಗೆ ರೋಗವಿಲ್ಲ

**ಸಮನ್ವಯ:** ಇಲ್ಲಿ ಉಪಮೇಯವಾದ ಮಾತು ಬಲ್ಲವನಿಗೆ ಜಗಳವಿಲ್ಲ ಹಾಗೂ ಉಪಮಾನವಾದ ಊಟ ಬಲ್ಲವನಿಗೆ ರೋಗವಿಲ್ಲ ಎರಡೂ ಬಿಂಬ ಪ್ರತಿಬಿಂಬದಂತೆ ಇರುವುದರಿಂದ ಇಬ್ಬರೂ ಒಂದೇ ಎಂಬುದು ಪ್ರತಿಪಾದಿತವಾಗಿದೆ

**VIII.** **ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1 x 3 = 3**

**ಅಂಕ ಸೂಚಿ: ಗಾದೆಯ ಮಹತ್ವದ ವಿವರಣೆ – 1 ಅಂಕ**
**ಉದಾಹರಣೆಯೊಂದಿಗೆ ಅರ್ಥವಿವರಣೆ – 1 ಅಂಕ**
**ಭಾಷಾ ಶೈಲಿ ಮತ್ತು ಪದಬಂಧ – 1 ಅಂಕ**

**"ದೇಶ ಸುತ್ತಿ ನೋಡು ಕೋಶ ಓದಿ ನೋಡು**

| | | |
|---|---|---|
| **32.** | ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿ ಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **ದೇಶ ಸುತ್ತಿ ನೋಡು ಕೋಶ ಓದಿ ನೋಡು** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.<br><br>ನಾವು ಜ್ಞಾನವನ್ನು ಸಂಪಾದನೆ ಮಾಡಿಕೊಳ್ಳಬೇಕಾದರೆ ದೇಶದ ವಿವಿಧ ಮಹತ್ವದ ಸ್ಥಳಗಳಿಗೆ ನೇರವಾಗಿ ಬೇಟಿ ನೀಡಿ ಪಡೆದುಕೊಳ್ಳಬಹುದು. ಅದೇ ರೀತಿಯಾಗಿ ಕೋಶಗಳನ್ನು ಅಂದರೆ ವಿವಿಧ ಪುಸ್ತಕಗಳನ್ನು ಓದಿ ಕೂಡ ಜ್ಞಾನವನ್ನು ಸಂಪಾದಿಸಿಕೊಳ್ಳಬಹುದು. ಕೆಲವೊಂದು ವಿಷಯಗಳನ್ನು ಕೇವಲ ಓದುವುದರಿಂದ ಆಸ್ವಾದಿಸಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭಗಳಲ್ಲಿ ನೇರವಾಗಿ ವಿಷಯಗಳಿರುವ ಸ್ಥಳಕ್ಕೆ ಹೋಗಿ ತಿಳಿಯಬಹುದಾಗಿದೆ. ಜೇನು ಸವಿದರೆ ಮಾತ್ರ ಅದರ ಸಿಹಿ ಗುಣ ಗೊತ್ತಾಗುತ್ತದೆ. ಅದಕ್ಕಾಗಿ ಜ್ಞಾನ ಸಂಪಾದಿಸಲು ವಿದ್ಯಾರ್ಥಿಗಳಿಗೆ ಪ್ರವಾಸಗಳನ್ನು ಏರ್ಪಡಿಸಲಾಗುತ್ತದೆ. ಉದ್ದೇಶಪೂರ್ವಕವಾಗಿ ದೇಶವನ್ನು ಸುತ್ತುವುದರಿಂದ ಜ್ಞಾನವಿಕಾಸದ ಅನುಭವವಾಗುತ್ತದೆ. ಅದೇ ರೀತಿ ನಮ್ಮವರು ತಾವು ಕಂಡ ಅನುಭವಗಳನ್ನೊಳಗೊಂಡ ಸಾಹಿತ್ಯವನ್ನು ಬರೆದುಕೊಟ್ಟು ಹೋಗಿದ್ದಾರೆ. ಅಂತಹ ಸಾಹಿತ್ಯವನ್ನು ಓದುವುದರಿಂದಲೂ ಜ್ಞಾನವನ್ನು ಪಡೆದುಕೊಳ್ಳಬಹುದು. ಒಟ್ಟಿನಲ್ಲಿ ಜ್ಞಾನವಿಕಾಸಕ್ಕಾಗಿ ದೇಶದ ವಿವಿಧ ಸ್ಥಳಗಳಿಗೆ ಹೋಗಬಹುದು, ಇಲ್ಲವೇ ವಿವಿಧ ಕೋಶಗಳನ್ನು ಓದಬೇಕು.<br><br>**ಅಥವಾ**<br><br>**ಮನಸ್ಸಿದ್ದರೆ ಮಾರ್ಗ**<br>ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ "ವೇದ ಸುಳ್ಳಾದರೂ ಗಾದೆ ಸುಳ್ಳಾಗದು" ಎಂಬ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ "ಮನಸ್ಸಿದ್ದರೆ ಮಾರ್ಗ" ಎಂಬ ಗಾದೆಯೂ ಸಹ ಒಂದಾಗಿದೆ.<br><br>ಯಾವುದೇ ಸಾಧನೆಯನ್ನು ಮಾಡಬೇಕಾದುದು ಮನಸ್ಸು ಮಾಡಬೇಕು. ಈ ಕಾರ್ಯವನ್ನು ಮಾಡಲೇಬೇಕು ಎಂದು ಪ್ರಯತ್ನ ಮಾಡಲು ಹೊರಟಾಗ ಕಾರ್ಯವನ್ನು ಸಾಧಿಸುವ ಮಾರ್ಗವು ತನ್ನಿಂದ ತಾನೇ ತೋರುತ್ತದೆ. "ಕೈಯಲ್ಲಿ ಆಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ; ಮನಸ್ಸೊಂದಿದ್ದರೆ ಮಾರ್ಗವುಂಟು ಕೆಚ್ಚೆದೆ ಇರಬೇಕು ಎಂದೂ" ಎನ್ನುವ ಹಾಡನ್ನು ಮರೆಯಬಾರದು. ವಿದ್ಯಾರ್ಥಿಯು ಯಶಸ್ಸನ್ನು ಪಡೆಯಬೇಕು. ಎಂಬ ಮನಸ್ಸಿನಿಂದ ಪ್ರಯತ್ನಶೀಲನಾದರೆ; ಮನಸ್ಸಿಟ್ಟು ಅಧ್ಯಯನ ಮಾಡಿದರೆ ಖಂಡಿತ ಅವನ ಗುರಿಯನ್ನು ತಲುಪುವ ಮಾರ್ಗಗಳು ಕಾಣತೊಡಗುತ್ತವೆ ಎಂಬುದನ್ನು ಈ ಗಾದೆಯು ವಿವರಿಸುತ್ತದೆ.<br><br>**ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** | |

| | | |
|---|---|---|
| **IX.** | **ಅಂಕ ಸೂಚಿ: ಕರ್ತೃ, ಆಕರ ಕೃತಿ ಮತ್ತು ಪಠ್ಯದ ಹೆಸರು – 1 ಅಂಕ**<br>**ಸಂದರ್ಭದ ವಿವರಣೆ – 1 ಅಂಕ**<br>**ಸ್ವಾರಸ್ಯ ಮತ್ತು ಶೈಲಿ – 1 ಅಂಕ** | **6 x 3 = 18** |
| **33.** | **"ದುಡ್ಡು ದುರಭಿಮಾನದ ತವರು."**<br>**ಆಯ್ಕೆ:–** ಈ ವಾಕ್ಯವನ್ನು ಡಾ.ಬನ್ನಂಜೆ ಗೋವಿಂದಾಚಾರ್ಯರರು ಅನುವಾದಿಸಿದ **'ಕಾದಂಬರಿ'** ಕೃತಿಯಿಂದ ಆಯ್ದ **'ಶುಕನಾಸನ ಉಪದೇಶ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>**ಸಂದರ್ಭ:–** ಕಾಶ್ಮೀರದ ರಾಜ ತಾರಾಪೀಡನ ಮಂತ್ರಿ ಶುಕನಾಸನು, ಯುವರಾಜನಾದ ಚಂದ್ರಪೀಡನ ಪಟ್ಟಾಭಿಷೇಕದ ಸಂದರ್ಭದಲ್ಲಿ ಉಪದೇಶ ನೀಡುವ ಸನ್ನಿವೇಶದಲ್ಲಿ ಈ ಮಾತನ್ನು ಹೇಳುತ್ತಾನೆ. ದುಡ್ಡಿನ ಮಹಿಮೆಯಿಂದ ರಾಜನಾದವನಿಗೆ ಅಹಂಕಾರದ ದಾಹಜ್ವರ ತಲೆಗಡರಿ ಅವರ ಬಗೆಯಲ್ಲಿ ಕತ್ತಲು ತುಂಬಿರುತ್ತದೆ. ದುಡ್ಡು ದುರಭಿಮಾನದ ತವರು. ದುಡ್ಡಿನ ಪೈತ್ಯ ಅಡರಿದವರಿಗೆ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ ಎಂದು ಹೇಳಿದ ಸಂದರ್ಭವಾಗಿದೆ.<br>**ಸ್ವಾರಸ್ಯ:–** ಈ ವಾಕ್ಯದಲ್ಲಿ ದುಡ್ಡು ಎಂತೆಂಥ ಅವಗಡಗಳನ್ನು ತೋರುತ್ತದೆ, ಅದು ಹೇಗೆ ದುರಭಿಮಾನದ ತವರಾಗುತ್ತದೆ ಎಂಬುದನ್ನು ಸ್ವಾರಸ್ಯಪೂರ್ಣವಾಗಿ ಅರ್ಥೈಸಲಾಗಿದೆ. | |
| **34.** | **"ಆವಂತಿ ಸುಕುಮಾರನೆಂದು ಪೆಸರನಿಟ್ಟಂ"**<br>**ಆಯ್ಕೆ:–** ಈ ವಾಕ್ಯವನ್ನು ಶಿವಕೋಟ್ಯಾಚಾರ್ಯ ಅವರು ರಚಿಸಿರುವ **'ವಡ್ಡಾರಾಧನೆ'** ಕೃತಿಯಿಂದ ಆಯ್ದ **'ಸುಕುಮಾರಸ್ವಾಮಿ ಕಥೆ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.<br>**ಸಂದರ್ಭ:–** ಉಜ್ಜೇನಿಯ ಅರಸನಾದ ವೃಷಭಾಂಕನು ಸುಕುಮಾರಸ್ವಾಮಿಯ ವೈಭವ ಜೀವನವನ್ನು ಕಂಡು 'ಅರಸನಾದ ನಾನು ಸಹ ಇಷ್ಟೊಂದು ವೈಭವದ ಜೀವನ ನಡೆಸಲು ಸಾಧ್ಯವಾಗಿಲ್ಲ' ಎಂದು ಹೇಳಿಕೊಳ್ಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.<br>**ಸ್ವಾರಸ್ಯ:–** ಸುಕುಮಾರಸ್ವಾಮಿಯ ವೈಭವವನ್ನು ಕಂಡ ಉಜ್ಜೇನಿ ಅರಸ ವೃಷಭಾಂಕನು ಸುಕುಮಾರಸ್ವಾಮಿಯ ವೈಭೋಗ ಅಲ್ಲ" 'ಅವಂತಿ ಸುಕುಮಾರ' ಎಂದು ಹೆಸರನ್ನು ಕೊಟ್ಟದ್ದು, ಸುಕುಮಾರಸ್ವಾಮಿಯ ವೈಭೋಗದ ಜೀವನದ ಪರಮಾವಧಿಯನ್ನು ಸ್ವಾರಸ್ಯಪೂರ್ಣವಾಗಿ ಅರ್ಥೈಸುತ್ತದೆ. | |
| **35.** | **"ನಿನ್ನ ಪಟುವಗೆ ನಮ್ಮ ಕುಲಮನೆಲ್ಲಮನಟಿವ ಬಗೆ"**<br>**ಆಯ್ಕೆ:** ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ **"ಕರ್ನಾಟಕ ಪಂಚತಂತ್ರ"** ಕೃತಿಯಿಂದ ಆಯ್ದ **'ವೃಕ್ಷಸಾಕ್ಷಿ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.<br>**ಸಂದರ್ಭ:** ದುಷ್ಟಬುದ್ಧಿಯು ತನ್ನ ಮನೆಗೆ ಬಂದು ತನ್ನ ತಂದೆಯ ಕೈ ಹಿಡಿದು, ಏಕಾಂತ ಸ್ಥಳಕ್ಕೆ ಕರೆದುಕೊಂಡು ಹೋಗಿ, ನೀನು ಆ ಮರದ ಪೊಟರೆಯಲ್ಲಿ ಅಡಗಿದ್ದು, ಧರ್ಮಬುದ್ಧಿಯೇ ಹೊನ್ನು ತೆಗೆದುಕೊಂಡು ಹೋದನೆಂದು ಹೇಳು" ಎಂದು ಹೇಳಿದ ಸಂದರ್ಭದಲ್ಲಿ ಅವನಿಗೆ ಬುದ್ಧಿಯನ್ನು ಹೇಳುತ್ತ ತಂದೆಯು ಈ ಮಾತನ್ನು ಹೇಳುತ್ತಾನೆ.<br>**ಸ್ವಾರಸ್ಯ:** ದುಷ್ಟಬುದ್ಧಿಯನ್ನು ಕುರಿತು ಅವನ ತಂದೆಯು "ನಿನ್ನ ಕೆಟ್ಟತನ ನಮ್ಮ ಕುಲವನ್ನು ನಾಶಮಾಡುವ ರೀತಿಯದಾಗಿದೆ" ಎಂದು ಹೇಳುವದು ಸ್ವಾರಸ್ಯಪೂರ್ಣವಾಗಿದೆ. | |

| | | |
|---|---|---|
| **36.** | **“ಹೊಸಗಾಲದ ಹಸುಮಕ್ಕಳ ಹರಸಿ”**<br>**ಆಯ್ಕೆ:** ಈ ವಾಕ್ಯವನ್ನು ಕವಿ **‘ಅಂಬಿಕಾತನಯದತ್ತ’** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಶ್ರೀ ದ.ರಾ.ಬೇಂದ್ರೆ ಅವರು ರಚಿಸಿರುವ **‘ಗರಿ’** ಎಂಬ ಕವನ ಸಂಕಲನದಿಂದ ಆಯ್ದ **‘ಹಕ್ಕಿ ಹಾರುತಿದೆ ನೋಡಿದಿರಾ’** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.<br>**ಸಂದರ್ಭ:** ಕವಿ ದ.ರಾ. ಬೇಂದ್ರೆ ಅವರು ಕಾಲದ ಗತಿಯನ್ನು ಹಾರುವ ಹಕ್ಕಿಗೆ ಸಮೀಕರಿಸಿ ವರ್ಣಿಸುವ ಸಂದರ್ಭದಲ್ಲಿ ಕಾಲಪಕ್ಷಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಮುಂದಿನ ಜನಾಂಗದ ಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂಬ ಈ ಮಾತನ್ನು ಹೇಳುತ್ತಾರೆ.<br>**ಸ್ವಾರಸ್ಯ:** ಕಾಲಪಕ್ಷಿಯು ಯುಗಯುಗದಲ್ಲೂ ಜನರಿಗೆ ಚೈತನ್ಯವನ್ನು ತುಂಬಿ ಮುಂದಿನ ಜನಾಂಗವನ್ನು ಹರಸುತ್ತಿದೆ ಎಂಬುದನ್ನು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ. | |
| **37.** | **“ಎಲ್ಲ ಜನರಿಗೆ ಜೋರ ಮಾಡಿ ಕಸಿದು ಕೊಳ್ಳಿರಿ ಹತಾರ”**<br>**ಆಯ್ಕೆ:** ಈ ವಾಕ್ಯವನ್ನು **ಡಾ. ಬಿ.ಎಸ್. ಗದ್ದಗಿ ಮಠ** ಅವರು ಸಂಪಾದಿಸಿರುವ **‘ಕನ್ನಡ ಜನಪದ ಗೀತೆಗಳು’** ಕೃತಿಯಿಂದ ಆಯ್ದ **‘ಹಲಗಲಿಯ ಬೇಡರು’** ಎಂಬ ಲಾವಣಿಯಿಂದ ಆರಿಸಲಾಗಿದೆ.<br>**ಸಂದರ್ಭ:** ಕ್ರಿ.ಶ. 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರ್ಕಾರ “ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು” ಎಂಬ ಆದೇಶವನ್ನು ನೀಡಿದ ಸಂದರ್ಭದಲ್ಲಿ ಈ ಮಾತು ಬಂದಿದೆ.<br>**ಸ್ವಾರಸ್ಯ:** ಬ್ರಿಟಿಷ್ ಕಂಪನಿ ಸರ್ಕಾರದ ಆದೇಶ ಹಾಗೂ ಭಾರತೀಯರ ಮೇಲಿನ ಬ್ರಿಟೀಷರ ದರ್ಪ, ದಬ್ಬಾಳಿಕೆಯು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ. | |
| **38.** | **“ಅರಸುಗಳ ವಾಜಿಯಂ ಬಿಡು”**<br>**ಆಯ್ಕೆ:–** ಈ ವಾಕ್ಯವನ್ನು **ಕವಿ ಲಕ್ಷ್ಮೀಶನು** ರಚಿಸಿರುವ **‘ಜೈಮಿನಿ ಭಾರತ’** ಮಹಾಕಾವ್ಯದಿಂದ ಆಯ್ದ **‘ವೀರಲವ’** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.<br>**ಸಂದರ್ಭ:** ವೀರಲವನು ತನ್ನ ಉತ್ತರೀಯದಿಂದ ಯಜ್ಞಾಶ್ವವನ್ನು ಬಾಳೆಯಗಿಡಕ್ಕೆ ಕಟ್ಟಿ ಹಾಕಿದ ಸಂದರ್ಭದಲ್ಲಿ ಮುನಿಪುತ್ರರು ಈ ಮಾತನ್ನು ಹೇಳುತ್ತಾರೆ.<br>**ಸ್ವಾರಸ್ಯ:** ರಾಜನ ಯಜ್ಞಾಶ್ವವನ್ನು ಕಟ್ಟಿ ಹಾಕುವುದು ಅಪರಾಧ. ಅದರಿಂದ ಮುಂದೆ ತೊಂದರೆ ಉಂಟಾಗುತ್ತದೆ ಎಂದು ಮುನಿಪುತ್ರರು ಭಯಗೊಳ್ಳುವುದನ್ನು ಈ ಮಾತಿನಲ್ಲಿ ಅಭಿವ್ಯಕ್ತಗೊಂಡಿದೆ. | |

| | | |
|---|---|---|
| X.<br><br>39. | **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ**<br>**ಅಂಕಸೂಚಿ: ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣ ಸಾಲಿಗೆ – 1 ಅಂಕ**<br><br>ಹಸುರಾಗಸ; ಹಸುರು ಮುಗಿಲು;<br>ಹಸುರು ಗದ್ದೆಯಾ ಬಯಲು;<br>ಹಸುರಿನ ಮಲೆ; ಹಸುರು ಕಣಿವೆ;<br>ಹಸುರು ಸಂಜೆಯೀ ಬಿಸಿಲೂ!<br><br>**ಅಥವಾ**<br><br>ಹೊಸ ಹೂವಿನ ಕಂಪು ಹಸುರು,<br>ಎಲರಿನ ತಂಪೂ ಹಸುರು!<br>ಹಕ್ಕಿಯ ಕೊರಲಿಂಪು ಹಸುರು!<br>ಹಸುರು ಹಸುರಿಳೆಯುಸಿರೂ! | 1 x 4 = 4 |
| XI.<br><br>40. | **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**<br>**ಅಂಕ ಸೂಚಿ: ವಿಷಯಾಂಶಕ್ಕೆ – 3 ಅಂಕ**<br>**ಅಡಕಗೊಂಡ ಮೌಲ್ಯ ಗುರುತಿಸುವುದು,**<br>**ಪದಬಂಧ ಮತ್ತು ಭಾಷಾ ಶೈಲಿ – 1 ಅಂಕ**<br><br>**ಮತಗಳೆಲ್ಲವೂ ಪಥಗಳು ಎನ್ನುವ**<br>**ಹೊಸ ಎಚ್ಚರದೊಳು ಬದುಕೋಣ**<br>**ಭಯ ಸಂಶಯದೊಳು ಕಂದಿದ ಕಣ್ಣೊಳು**<br>**ನಾಳಿನ ಕನಸನು ಬಿತ್ತೋಣ.**<br>**ಕವಿ ಜಿ. ಎಸ್. ಶಿವರುದ್ರಪ್ಪ** ಅವರು "ಮಾನವನು ತನ್ನ ಜೀವನದಲ್ಲಿ ಎಷ್ಟೇ ಅಡ್ಡಿ ಆತಂಕಗಳು ಎದುರಾದರು ಧನಾತ್ಮಕ ಮನೋಭಾವನೆಯಿಂದ ಹಾಗೂ ದೃಢಸಂಕಲ್ಪದಿಂದ ಕಾರ್ಯಶೀಲನಾದರೆ ಅಸಾಧ್ಯವಾದುದು ಯಾವುದು ಇಲ್ಲ" ಎಂಬುದನ್ನು ಅವರ **'ಎದೆ ತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಪದ್ಯದಲ್ಲಿ ಬಹಳ ಸರಳವಾಗಿ, ಸುಂದರವಾಗಿ ಅಭಿವ್ಯಕ್ತಿಸಿದ್ದಾರೆ.<br>ಹಿಂದೂ, ಇಸ್ಲಾಂ, ಕ್ರೈಸ್ತ, ಬೌದ್ಧ, ಜೈನ ಮುಂತಾದ ಎಲ್ಲ ಮತ ಧರ್ಮಗಳೂ, ಧರ್ಮಗ್ರಂಥಗಳೂ ಸಕಲ ಜೀವರಾಶಿಗಳ ಬದುಕಿಗೆ ಸರಿದಾರಿ ತೋರುವಂಥ ಶ್ರೇಷ್ಠ ದಾರಿ ದೀವಿಗೆಗಳಾಗಿವೆ. ಈ ನಂಬಿಕೆಯಿಂದ ಈಗ ಜಾಗರೂಕ ರಾಗಿ ಬದುಕು ನಡೆಸೋಣ. ಒಬ್ಬರು ಇನ್ನೊಬ್ಬರನ್ನು ಭಯ ಸಂಶಯಗಳಿಂದ ನೋಡುತ್ತಾ ಸೊರಗಿರುವ ಕಣ್ಣಗಳಲ್ಲಿ ಸುಖ ಸಮೃದ್ಧಿಯ ಸವಿಗನಸನ್ನು ಬಿತ್ತುತ್ತಾ, ಬದುಕು ಸಾಗಿಸುವ ಸಂಕಲ್ಪದ ಬೀಜವನ್ನು ಎಲ್ಲರ | 1 x 4 = 4 |

| | | |
|---|---|---|
| | ಮನದಲ್ಲಿ ಬಿತ್ತೋಣ ಎಂದು ಕವಿಯು ಹೇಳುತ್ತಾರೆ. ಒಟ್ಟಾರೆ ಪ್ರೀತಿಪ್ರೇಮಪೂರಿತವಾದ, ಸ್ವಚ್ಛತೆಯಿಂದ ಕೂಡಿದ, ಹೊಸಭರವಸೆಗಳಿಂದ ಸರ್ವ ಸಮಾನತೆಯುಳ್ಳ, ಶಾಂತಿ ಮತ್ತು ಸಮೃದ್ಧವಾದ ಭವಿಷ್ಯದ ಸಮಾಜ ನಿರ್ಮಾಣಕ್ಕೆ ಸಂಕಲ್ಪ ತೊಡಲು ಕರೆಕೊಟ್ಟಿದ್ದಾರೆ. **ಶಾಂತಿ ಮತ್ತು ಸೌಹಾರ್ದತೆಯಿಂದ ಬಾಳಬೇಕೆಂಬುದೇ ಪ್ರಸ್ತುತ ಪದ್ಯದ ಮೌಲ್ಯಯುತ ಸಂದೇಶವಾಗಿದೆ.** | |
| **XII.** | **ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**<br>**ಅಂಕ ಸೂಚಿ: ಅಂಶಗಳನ್ನಾಧರಿಸಿ ಪತ್ಯಾಂಶಕ್ಕೆ – 3 ಅಂಕ**<br>**ಪದಬಂಧ ಮತ್ತು ಭಾಷಾ ಶೈಲಿ – 1 ಅಂಕ** | **2 x 4 = 8** |
| **41.** | **ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ವಿವರಿಸಿ.**<br>**ಉತ್ತರ:–** ರಾಮಲಕ್ಷ್ಮಣರನ್ನು ಕಂಡು ಶಬರಿ ಸಂತಸ ತುಂಬಿಕೊಳ್ಳುತ್ತಾಳೆ. ಅವರಿಗೆ ರುಚಿಕರ ಹಣ್ಣುಗಳನ್ನು ನೀಡಿ ಸತ್ಕರಿಸುತ್ತಾಳೆ. ರಾಮನನ್ನು ಕಂಡು ತಾನು ಪರಮಸುಖಿಯೆಂದು ನರ್ತಿಸುತ್ತಾಳೆ. ರಾಮನೂ ಕೂಡ **"ನಿನ್ನ ಅದರದಿಂದ ನಾವು ಸುಖಿ, ನಿನಗೆ ನಾವು ಋಣಿ"** ಎನ್ನುತ್ತಾನೆ. ಶಬರಿಯು ಕಣ್ಣೀರು ತುಂಬಿಕೊಂಡು **"ನನ್ನ ಜಾಡನ್ನು ಹಿಡಿದು ಬಂದು ಸಂತಸ ನೀಡಿದಿರಿ, ಹಸಿವು, ತೃಷೆ ಹಿಂಗಿತೆ? ನಾನೊಬ್ಬಳು ಬಡವಿ, ನನ್ನ ಮೇಲೆ ಕರುಣೆ ತೋರಿದಿರಾ?"** ಎನ್ನುತ್ತಾಳೆ. ರಾಮನು "ನಿನ್ನ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆಯಿಲ್ಲ, ನಮ್ಮ ಅರಮನೆಗಿಂತ ನಿನ್ನ ಆಶ್ರಮವೇ ಚಂದ, ನಿನ್ನ ಮನೆಯೇ ನಮ್ಮ ಮನೆ, ನೀನೆ ತಾಯಿಯಂತೆ" ಎನ್ನುತ್ತಾನೆ. **ಶಬರಿಯು** "ನಿನ್ನ ರೂಪದಂತೆ ನಿನ್ನ ಮಾತು ಸುಂದರ ಹಾಗೂ ಉದಾರ. ನಾನು ಧನ್ಯಳಾದೆ. ಶುದ್ಧ ಮತಂಗ ವರ ಫಲಿಸಿತು ನನಗೆ. ನಿಮ್ಮನ್ನು ಕಂಡು ಪುಣ್ಯವು ತುಂಬಿತು, ಗುರುಪೂಜೆಯನ್ನು ಮಾಡಿದ ಪುಣ್ಯ ನನಗೆ ಇಂದು ಸೇರಿತು. ನನ್ನ ಚಿಂತೆಯೆಲ್ಲ ಹಿಂಗಿ ಹೋಯಿತು ಎನ್ನುತ್ತಾಳೆ.<br><br>**ಅಥವಾ**<br>**ಶಬರಿಯ ಸಡಗರ, ಸಂತೋಷ ಮೇಳದವರ ಹಾಡಿನಲ್ಲಿ ಹೇಗೆ ವರ್ಣಿತವಾಗಿದೆ?**<br>**ಉತ್ತರ:–** ರಾಮನು ಬಂದು ತನ್ನ ಆಶ್ರಮದಲ್ಲಿ ನಿಂತಿರುವುದನ್ನು ನೋಡಿ ಶಬರಿ ಆಶ್ಚರ್ಯಪಟ್ಟಳು. ರಾಮನ ಹತ್ತಿರ ಬಂದು ಅವನನ್ನು ಮುಟ್ಟಿ, ಪಾದಕ್ಕೆ ನಮಸ್ಕರಿಸಿ, ಕೈಯನ್ನು ಕಣ್ಣಿಗೆ ಒತ್ತಿಕೊಂಡು ಕಣ್ಣೀರು ಸುರಿಸಿದಳು. ಗದ್ಗದ ಸ್ವರದಿಂದ ಬನ್ನಿರಿ ಎಂದು ಆಹ್ವಾನಿಸಿದಳು. ಸಿದ್ಧತೆಯೇ ಇಲ್ಲವಲ್ಲ ಎಂದು ಹಂಬಲಿಸಿದಳು. ಮನಸಿನ ಬಯಕೆಯಂತೆ ಬಗೆ ಬಗೆಯ ಕಂಪು ಇರುವ ವನಮಾಲೆಯನ್ನು ರಾಮನ ಕೊರಳಿಗೆ ಇಟ್ಟು ಹಿಗ್ಗಿದಳು. ಜಗತ್ತಿನಲ್ಲಿಯೇ ಇಂತಹ ರುಚಿಕರವಾದ ಹಣ್ಣೇ ಇಲ್ಲವೆಂದು ಹೇಳುತ್ತಾ ನಿಮಗಾಗಿ ತಂದಿದ್ದೇನೆಂದು ತಿಳಿಸಿ ರಾಮನ ಕೈಗೆ ಇತ್ತಳು. ಶಬರಿಯ ಸೇವೆಯಿಂದ ರಾಮನು ಸಂಪ್ರಸನ್ನನಾದನು. ರಾಮಲಕ್ಷ್ಮಣರು ಧನ್ಯತಾಭಾವದಿಂದ ಮಂದಹಾಸ ಬೀರಿದರು. ಹೀಗೆ ಶಬರಿಯ ಸಡಗರ, ಸಂತೋಷ, ಮೇಳದವರ ಹಾಡಿನಲ್ಲಿ ವರ್ಣಿತವಾಗಿದೆ.<br><br>**ಕರ್ಣನಿಗೆ ಶ್ರೀಕೃಷ್ಣನು ಒಡ್ಡಿದ ಆಮಿಷಗಳೇನು?** | |

**42.** **ಉತ್ತರ:–** **“**ಕರ್ಣ ನಿಮಗೂ ಯಾದವ ಕೌರವರಿಗೂ ವಂಶ ಗೌರವದಲ್ಲಿ ಭೇದವಿಲ್ಲ. ನಿನ್ನಾಣೆ, ನೀನು ನಿಜವಾಗಿ ಭೂಮಿಯ ಒಡೆಯ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ**”**. ಎಂದು ಹೇಳುವ ಕೃಷ್ಣನು ಕರ್ಣನ ಕಿವಿಯಲ್ಲಿ ಭಯವನ್ನು ಬಿತ್ತಿದನು. **ಕುಂತಿಯು ಪಡೆದ ಐದು ಮಂತ್ರಗಳಲ್ಲಿ ಮೊದಲಿಗ ನೀನು,** ನಿನ್ನಯ ನಂತರ ಧರ್ಮರಾಯ ಮೂರನೆಯಾತ **ಕಲಿಭೀಮ,** ಅರ್ಜುನನು ನಾಲ್ಕನೆಯ ಮಂತ್ರದಲ್ಲಿ ಜನಿಸಿದನು. ಬಳಿಕ ಐದನೆಯ ಮಂತ್ರದಲ್ಲಿ ಮಾದ್ರಿಯಲ್ಲಿ ನಕುಲ ಸಹದೇವರು ಇಬ್ಬರು ಹುಟ್ಟಿದರು. ನಿನ್ನನ್ನು ಹಸ್ತಿನಾಪುರದ ರಾಜ್ಯದ ರಾಜನನ್ನಾಗಿ ಮಾಡುವೆನು. ಪಾಂಡವ, ಕೌರವ ರಾಜರು ನಿನ್ನನ್ನು ಓಲೈಸುವರು. ನಿನಗೆ ಎರಡು ವಂಶವು ಮರುಮಾತನಾಡದೆ ಸೇವೆಯನ್ನು ಮಾಡುವವು. ನೀನು ದುರ್ಯೋಧನನ ಬಾಯೆಂಜಲಿಗೆ ಕೈಯೊಡ್ಡುವುದೇ ಹೇಳು. ಎಡಭಾಗದಲ್ಲಿ ಕೌರವೇಂದ್ರ ಸಮೂಹ, ಬಲಭಾಗದಲ್ಲಿ ಪಾಂಡು ಮಕ್ಕಳ ಸಮೂಹ, ಮುಂದುಗಡೆ ಮಾದ್ರ, ಮಾಗಧ, ಯಾದವಾದಿಗಳು ಮಧ್ಯದಲ್ಲಿ ನೀನು ರಾಜಸಭೆಯಲ್ಲಿ ಪ್ರಕಾಶಿಸುವ ವಿಶೇಷ ಸೊಬಗನ್ನು ತೊರೆದು, ದುರ್ಯೋಧನನು ನುಡಿಸಲು ‘ಒಡೆಯ ಅನುಗ್ರಹವಾಗಲಿ’ ಎಂಬುದು ನಿನಗೆ ಕಷ್ಟವಾಗುವುದಿಲ್ಲವೇ? ಎಂದು ಆಮಿಷ ಒಡ್ಡಿದನು.

**ಅಥವಾ**

**ಪಾಂಡವರು ಸೋದರರು ಎಂದು ತಿಳಿದಾಗ ಕರ್ಣನ ಮನಸ್ಥಿತಿಯನ್ನು ತಿಳಿಸಿ.**

**ಉತ್ತರ:–** ಕೃಷ್ಣನು ಕರ್ಣನಿಗೆ ಆಮಿಷಗಳನ್ನು ಒಡ್ಡಿದಾಗ ಕೊರಳಸೆರೆ ಹಿಗ್ಗಿದವು. ಕಂಬನಿಯು ರಭಸದಿಂದ ಮುಂದೆ ಬಂದು, ಅಧಿಕವಾಗಿ ಕರ್ಣನು ದುಃಖಗೊಂಡು ಮನದೊಳಗೆ **“ಅಯ್ಯೋ ಧರ್ಯೋಧನಿಗೆ ಕೇಡಾದುದು”** ಎಂದನು. ಹರಿಯ ಹಗೆತನವು ಹೊಗೆ ತೋರದೆ ಸುಟ್ಟು ಹಾಕುವುದಲ್ಲದೆ; ಸುಮ್ಮನೆ ಹೋಗುವುದೆ, ಕೃಷ್ಣನು **“ನನ್ನ ವಂಶದ ರಹಸ್ಯವನ್ನು ತಿಳಿಸಿ ನನ್ನನ್ನು ಕೊಂದನು”** ಎಂದು ಮನದಲ್ಲಿ ನೊಂದುಕೊಂಡನು. “ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ. ಪಾಂಡವರು, ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನನ್ನು ಕೊಂದೆ. ವೀರ ದುರ್ಯೋಧನನೇ ಒಡೆಯನು. ಆತನ ಹಗೆಯ ಹಗೆ. ಅಭಿಮಾನವೇ ಅಭಿಮಾನವು, ದುರ್ಯೋಧನ ಆದಂತೆ ಆಗುವೆನು. ಕೃಷ್ಣ ಕೇಳು, ನಾಳೆ ಸಮರದ ವಿಷಯದಲ್ಲಿ ಪಾಂಡವರಲ್ಲಿ ನಿಜ ಪರಾಕ್ರಮದ ಶ್ರೇಷ್ಠತನವನ್ನು ತೋರುವೆನು. ನಾಳಿನ ಕೌರವರ ಮತ್ತು ಪಾಂಡವರ ಚತುರಂಗ ಬಲದ ನಡುವಿನ ಯುದ್ಧವು ಮೃತ್ಯುದೇವತೆಗೆ ಭೋಜನಕೂಟ ಆಗುವುದು. ಸೂರ್ಯನಾಣೆ ಪಾಂಡವರನ್ನು ನೋಯಿಸೆನು ಎಂದನು.

**XIII.** **ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.** **1 x 4 = 4 (2+2)**

ಜೂನ್ 5ರ ‘ವಿಶ್ವ ಪರಿಸರ ದಿನಾಚರಣೆ’ ಬಂತೆಂದರೆ ವಿದ್ಯಾರ್ಥಿಗಳೆಲ್ಲ ವಿಶೇಷ ಸಂಭ್ರಮ. ಅಂದು ಏನೆಲ್ಲ ವರ್ಣರಂಜಿತ ಮೆರವಣಿಗೆಗಳು, ಎಷ್ಟೆಲ್ಲ ವೈವಿಧ್ಯಮಯ ಕಾರ್ಯಕ್ರಮಗಳು ನಡೆಯುತ್ತವೆ. ಬೆಂಗಳೂರಿನಲ್ಲಂತೂ ಲಕ್ಷಾಂತರ ವಿದ್ಯಾರ್ಥಿಗಳು ಚಿತ್ರವಿಚಿತ್ರ ಮುಖವಾಡಗಳನ್ನು ಧರಿಸಿ ವಾಯುಮಾಲಿನ್ಯದ ವಿರುದ್ಧ ಮೌನಮೆರವಣಿಗೆ ಮಾಡುವುದೇನು; ಸಸ್ಯಸಂಪತ್ತಿನ ರಕ್ಷಣೆಯ ಘೋಷಣೆ ಮಾಡುತ್ತ ಲಾಲ್‌ಬಾಗಿನಿಂದ ಕಬ್ಬನ್ ಪಾರ್ಕ್‌ನವರೆಗೆ ಸಾಲಾಗಿ ಬರುವುದೇನು; ಜಲರಕ್ಷಣೆ ಮಾಡಬೇಕೆಂದು ಒತ್ತಾಯಿಸಿ

ವಿಧಾನಸೌಧದಿಂದ ನೀರಿಗಾಗಿ ಓಟ ಮಾಡುವುದೇನು; ಕೆರೆಗಳ ರಕ್ಷಣೆ ಮಾಡಬೇಕೆಂದು ಒತ್ತಾಯಿಸಿ ಸ್ಯಾಂಕಿಟ್ಯಾಂಕ್ ಸುತ್ತ ಮಾನವ ಸರಪಳಿ ನಿರ್ಮಿಸುವುದು. ಕಂಠೀರವ ಕ್ರೀಡಾಂಗಣದಲ್ಲಿ ನೃತ್ಯ ಮಾಡುವುದು, ಕಲಾಪ್ರದರ್ಶನ ಮಾಡುವುದು. ಬೀದಿನಾಟಕ ಮಾಡುವುದು ಹೀಗೆ ಕಳೆದ ಹಲವಾರು ವರ್ಷಗಳಿಂದ ನಡೆಯತ್ತವೆ. ಆದರೂ ನಮ್ಮ ಜನರಿಗೆ ಪರಿಸರ ಕಾಳಜಿಯ ಬಗ್ಗೆ ಇನ್ನೂ ಅರಿವಾಗದಿರುವುದು ಸೋಜಿಗದ ಸಂಗತಿಯಾಗಿದೆ.

ಇಂದು ಯುರೋಪ್, ಅಮೇರಿಕಾ, ಆಸ್ಟ್ರೇಲಿಯಾ, ಜಪಾನಗಳಂತಹ ವಿದೇಶ ರಾಷ್ಟ್ರಗಳಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಜನಜಾಗೃತಿ ಕಾರ್ಯಕ್ರಮಗಳು ನಡೆಯುತ್ತಿವೆ. ಅಲ್ಲಿನವರು ಹಾಕಿಕೊಳ್ಳುವ ಕಾರ್ಯಗಳು ಕೂಡ ತೀರ ವಿಶಿಷ್ಟವಾಗಿರುತ್ತವೆ. ಗ್ರೀನ್‌ಪೀಸ್‌ನಂಥ ಪೃಥ್ವಿರಕ್ಷಣಾ ಯೋಧರ ದಟ್ಟಹೊಗೆ ಕಾರುವ ಕಾರ್ಖಾನೆಗಳ ಚಿಮಣಿಗಳ ಮೇಲೆ ಹತ್ತಿ ಶುದ್ಧಗಾಳಿ ನಮ್ಮೆಲ್ಲರ ಹಕ್ಕು ಎಂದು ಘೋಷಣೆ ಬರೆಯುತ್ತಾರೆ. ಹೆಮ್ಮರಗಳನ್ನು ಕಡಿದು ಸಾಗಿಸುವ ದಾರಿಗೆ ಅಡ್ಡಲಾಗಿ ಗುಂಡಿತೋಡಿ, ತಮಗೆ ತಾವೇ ಸರಪಳಿ ಬಿಗಿದು ಬೀಗ ಹಾಕಿ ಕೂತು ಬಿಡುತ್ತಾರೆ. ಚರ್ಮಕ್ಕಾಗಿ ಸೀಲ್‌ಪ್ರಾಣಿಗಳನ್ನು ಕೊಲ್ಲಬಾರದೆಂದು ಹಿಮಪ್ರಾಂತ್ಯಕ್ಕೆ ಹೋಗಿ ಸೀಲ್‌ಪ್ರಾಣಿಗಳ ಮೇಲೆ ಎನಾಮಲ್ ಬಣ್ಣಸುರಿದು ಚರ್ಮದ ಅಂದಗೆಡಿಸಿ ಬರುತ್ತಾರೆ. ಕಾರ್ಖಾನೆಗಳು ಸಮುದ್ರದ ಆಳಕ್ಕೆ ಕೊಳೆಯನ್ನು ಬಿಡಬಾರದೆಂದು ಮುಳುಕುವೀರರು ಸಮುದ್ರದ ಆಳಕ್ಕೆ ಹೋಗಿ ಕೊಳವೆಯ ಬಾಯಿಯನ್ನು ಕಟ್ಟಿ ಬರುತ್ತಾರೆ. ಇಂಥಹ ಕೆಚ್ಚೆದೆಯ ಸಾಹಸಗಳಲ್ಲಿ ತೊಡಗಿಕೊಂಡು ಮಾತ್ರ ಪರಿಸರ ರಕ್ಷಣೆ ಮಾಡುತ್ತಾರೆ.

**ಪ್ರಶ್ನೆಗಳು :**

**ವಿದೇಶಗಳಲ್ಲಿ ಪರಿಸರ ಸಂರಕ್ಷಣೆಗಾಗಿ ಯಾವ ರೀತಿ ಸಾಹಸಗಳಲ್ಲಿ ತೊಡಿಗಿಸಿಕೊಳ್ಳುತ್ತಾರೆ** ?

**43ಅ** **ಉತ್ತರ :** ಯುರೋಪ್, ಅಮೇರಿಕಾ, ಆಸ್ಟ್ರೇಲಿಯಾ, ಜಪಾನಗಳಂತಹ ವಿದೇಶ ರಾಷ್ಟ್ರಗಳಲ್ಲಿ ಹಿಂದೆಂದಿಗಿಂತಲೂ ಹೆಚ್ಚಿನ ಜನಜಾಗೃತಿ ಕಾರ್ಯಕ್ರಮಗಳು ನಡೆಯುತ್ತಿವೆ. ಅಲ್ಲಿನವರು ಹಾಕಿಕೊಳ್ಳುವ ಕಾರ್ಯಗಳು ಕೂಡ ತೀರ ವಿಶಿಷ್ಟವಾಗಿರುತ್ತವೆ. ಗ್ರೀನ್‌ಪೀಸ್‌ನಂಥ ಪೃಥ್ವಿರಕ್ಷಣಾ ಯೋಧರ ದಟ್ಟಹೊಗೆ ಕಾರುವ ಕಾರ್ಖಾನೆಗಳ ಚಿಮಣಿಗಳ ಮೇಲೆ ಹತ್ತಿ ಶುದ್ಧಗಾಳಿ ನಮ್ಮೆಲ್ಲರ ಹಕ್ಕು ಎಂದು ಘೋಷಣೆ ಬರೆಯುತ್ತಾರೆ. ಹೆಮ್ಮರಗಳನ್ನು ಕಡಿದು ಸಾಗಿಸುವ ದಾರಿಗೆ ಅಡ್ಡಲಾಗಿ ಗುಂಡಿತೋಡಿ, ತಮಗೆ ತಾವೇ ಸರಪಳಿ ಬಿಗಿದು ಬೀಗ ಹಾಕಿ ಕೂತು ಬಿಡುತ್ತಾರೆ. ಚರ್ಮಕ್ಕಾಗಿ ಸೀಲ್‌ಪ್ರಾಣಿಗಳನ್ನು ಕೊಲ್ಲಬಾರದೆಂದು ಹಿಮಪ್ರಾಂತ್ಯಕ್ಕೆ ಹೋಗಿ ಸೀಲ್‌ಪ್ರಾಣಿಗಳ ಮೇಲೆ ಎನಾಮಲ್ ಬಣ್ಣಸುರಿದು ಚರ್ಮದ ಅಂದಗೆಡಿಸಿ ಬರುತ್ತಾರೆ. ಕಾರ್ಖಾನೆಗಳು ಸಮುದ್ರದ ಆಳಕ್ಕೆ ಕೊಳೆಯನ್ನು ಬಿಡಬಾರದೆಂದು ಮುಳುಕುವೀರರು ಸಮುದ್ರದ ಆಳಕ್ಕೆ ಹೋಗಿ ಕೊಳವೆಯ ಬಾಯಿಯನ್ನು ಕಟ್ಟಿ ಬರುತ್ತಾರೆ. ಇಂಥಹ ಕೆಚ್ಚೆದೆಯ ಸಾಹಸಗಳಲ್ಲಿ ತೊಡಗಿಕೊಂಡು ಮಾತ್ರ ಪರಿಸರ ರಕ್ಷಣೆ ಮಾಡುತ್ತಾರೆ.

**ವಿಶ್ವ ಪರಿಸರ ದಿನಾಚರಣೆ ಸಂಭ್ರಮ ಹೇಗಿರುತ್ತದೆ**?

**43ಆ** **ಉತ್ತರ :** ಜೂನ್ 5ರ 'ವಿಶ್ವ ಪರಿಸರ ದಿನಾಚರಣೆ' ಬಂತೆಂದರೆ ವಿದ್ಯಾರ್ಥಿಗಳೆಲ್ಲ ವಿಶೇಷ ಸಂಭ್ರಮ. ಅಂದು ಏನೆಲ್ಲ ವರ್ಣರಂಜಿತ ಮೆರವಣಿಗೆಗಳು, ಎಷ್ಟೆಲ್ಲ ವೈವಿಧ್ಯಮಯ ಕಾರ್ಯಕ್ರಮಗಳು ನಡೆಯುತ್ತವೆ. ಬೆಂಗಳೂರಿನಲ್ಲಂತೂ ಲಕ್ಷಾಂತರ ವಿದ್ಯಾರ್ಥಿಗಳು ಚಿತ್ರವಿಚಿತ್ರ ಮುಖವಾಡಗಳನ್ನು ಧರಿಸಿ ವಾಯುಮಾಲಿನ್ಯದ ವಿರುದ್ಧ ಮೌನಮೆರವಣಿಗೆ ಮಾಡುವುದೇನು; ಸಸ್ಯಸಂಪತ್ತಿನ ರಕ್ಷಣೆಯ ಘೋಷಣೆ ಮಾಡುತ್ತ ಲಾಲ್‌ಬಾಗಿನಿಂದ ಕಬ್ಬನ್ ಪಾರ್ಕ್‌ನವರೆಗೆ ಸಾಲಾಗಿ ಬರುವುದೇನು; ಜಲರಕ್ಷಣೆ ಮಾಡಬೇಕೆಂದು ಒತ್ತಾಯಿಸಿ ವಿಧಾನಸೌಧದಿಂದ ನೀರಿಗಾಗಿ ಓಟ ಮಾಡುವುದೇನು; ಕೆರೆಗಳ ರಕ್ಷಣೆ ಮಾಡಬೇಕೆಂದು ಒತ್ತಾಯಿಸಿ ಸ್ಯಾಂಕಿಟ್ಯಾಂಕ್ ಸುತ್ತ ಮಾನವ ಸರಪಳಿ ನಿರ್ಮಿಸುವುದು. ಕಂಠೀರವ ಕ್ರೀಡಾಂಗಣದಲ್ಲಿ ನೃತ್ಯ

| | | |
|---|---|---|
| | ಮಾಡುವುದು, ಕಲಾಪ್ರದರ್ಶನ ಮಾಡುವುದು. ಬೀದಿನಾಟಕ ಮಾಡುವುದು ಹೀಗೆ ಕಳೆದ ಹಲವಾರು ವರ್ಷಗಳಿಂದ ನಡೆಯುತ್ತವೆ. | |
| **XIV** | **ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.**<br><br>**ಅಂಕ ಸೂಚಿ: ವ್ಯಾವಹಾರಿಕ ಪತ್ರಕ್ಕೆ**<br>**ಇಂದ ಮತ್ತು ಗೆ ವಿಳಾಸ, ಸಂಬೋಧನೆ, ವಿಷಯ – 1 ಅಂಕ**<br>**ಪತ್ರದ ಒಡಲು, ವಿಷಯ ನಿರೂಪಣೆ – 2 ಅಂಕ**<br>**ವಂದನೆಗಳೊಂದಿಗೆ ಮುಕ್ತಾಯ, ಇಂತಿ, ಸಹಿ, ಸ್ಥಳ, ದಿನಾಂಕ– 1 ಅಂಕ**<br>**ಭಾಷಾ ಶೈಲಿಗೆ, ಸೂಕ್ತ ಪದಬಳಕೆ, ವಿನ್ಯಾಸ – 1 ಅಂಕ**<br><br>**ಅಂಕ ಸೂಚಿ: ಖಾಸಗಿ ಪತ್ರಕ್ಕೆ**<br>**ಇಂದ ವಿಳಾಸ, ದಿನಾಂಕ, ಸಂಬೋಧನೆ, ಕ್ಷೇಮ ವಿಚಾರ – 1 ಅಂಕ**<br>**ಪತ್ರದ ಒಡಲು, ವಿಷಯ ನಿರೂಪಣೆ – 2 ಅಂಕ**<br>**ಮುಕ್ತಾಯ, ಇಂತಿ, ಸಹಿ, ಹೊರ ವಿಳಾಸ – 1 ಅಂಕ**<br>**ಭಾಷಾ ಶೈಲಿಗೆ, ಸೂಕ್ತ ಪದಬಳಕೆ , ವಿನ್ಯಾಸ – 1 ಅಂಕ** | **1 x 5 = 5** |
| **44.** | ನಿಮ್ಮನ್ನು ಬೆಂಗಳೂರಿನ ಹೊಯ್ಸಳ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಜನನಿ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆದ ರಸಪ್ರಶ್ನೆ ಕಾರ್ಯಕ್ರಮ ಕುರಿತು ತುಮಕೂರಿನ ಶ್ರೀಸಿದ್ಧಗಂಗ ಮಠದಲ್ಲಿ 10ನೇ ತರಗತಿ ಓದುತ್ತಿರುವ ನಿಮ್ಮ ಸ್ನೇಹಿತ/ತೆಗೊಂದು ಪತ್ರ ಬರೆಯಿರಿ.<br><br>**ಕ್ಷೇಮ** **ಶ್ರೀ** **ಜನನಿ**<br>10 ನೇ ತರಗತಿ<br>ಶ್ರೀ ಹೊಯ್ಸಳ ಪ್ರೌಢಶಾಲೆ<br>ಹಾಸನಾಂಬ ಬಡಾವಣೆ,<br>ಬೆಂಗಳೂರು<br>ದಿನಾಂಕ:25–3–2024<br><br>**ನನ್ನ ಪ್ರೀತಿಯ ಸ್ನೇಹಿತ/ತೆ ವಸಂತ**<br>ಗೆಳತಿ ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀನು ಕ್ಷೇಮವಾಗಿದ್ದೀ ಎಂದು | |

ಭಾವಿಸಿರುತ್ತೇನೆ. ನಿನ್ನ ವಿದ್ಯಾಭ್ಯಾಸ ಚೆನ್ನಾಗಿ ನಡೆಯುತ್ತಿದೆ ಎಂದು ಭಾವಿಸಿದ್ದೇನೆ. ನನ್ನ ವಿದ್ಯಾಭ್ಯಾಸವು ಕೂಡ ಉತ್ತಮವಾಗಿ ನಡೆಯುತ್ತಿದೆ. ದಿನಾಂಕ 25–3–2024 ರಂದು ನಮ್ಮ ಶಾಲೆಯಲ್ಲಿ ರಸಪ್ರಶ್ನೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ನಾನು "ಸ್ವಚ್ಛಭಾರತ" ಎಂಬ ಪ್ರಬಂಧ ಸ್ಪರ್ಧೆಯ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿದ್ದೆ. ನನಗೆ ಪ್ರಥಮ ಸ್ಥಾನ ಬಂದಿದೆ. ತುಂಬಾ ಖುಷಿಯಾಯ್ತು. ನಿಮ್ಮ ಶಾಲೆಯಲ್ಲಿ ರಸಪ್ರಶ್ನೆ ಕಾರ್ಯಕ್ರಮ ಹೇಗೆ ನಡೆಯಿತು ಮತ್ತು ನೀನು ಯಾವ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ. ಫಲಿತಾಂಶ ಏನಾಯ್ತು ತಿಳಿಸು. ನಿನ್ನ ಪತ್ರಕ್ಕೋಸ್ಕರ ಕಾಯುತ್ತಿರುತ್ತೇನೆ.

**ಇಂತಿ ನಿನ್ನ ಪ್ರೀತಿಯ**
ಜನನಿ

**ಅಂಚೆ ವಿಳಾಸ**
ವಸಂತ
10ನೇ ತರಗತಿ 'ಎ' ವಿಭಾಗ
ಶ್ರೀಸಿದ್ಧಗಂಗ ಪ್ರೌಢಶಾಲೆ, ತುಮಕೂರ

**ಅಥವಾ**

ನಿಮ್ಮನ್ನು ರಾಮನಗರದ ಕುವೆಂಪು ಪ್ರೌಢಶಾಲೆಯಲ್ಲಿ 10ನೇ ತರಗತಿ ಓದುತ್ತಿರುವ 'ಧ್ರುವ' ಎಂದು ಭಾವಿಸಿಕೊಂಡು ಕನ್ನಡ ವಿಶ್ವಕೋಶ ಕಳಿಸಿಕೊಡುವಂತೆ ಜ್ಞಾನದೀಕ್ಷಾ ಪುಸ್ತಕ ಭಂಡಾರಕ್ಕೆ ಒಂದು ಮನವಿ ಪತ್ರ ಬರೆಯಿರಿ.

**ಇವರಿಂದ,**

ಧ್ರುವ — ಮಾರ್ಚ್ 25, 2024
10ನೇ ತರಗತಿ
ಕುವೆಂಪು ಪ್ರೌಢಶಾಲೆ
ರಾಮನಗರ.

**ಇವರಿಗೆ,**

ಮುಖ್ಯಸ್ಥರು
ಜ್ಞಾನದೀಪಿಕಾ ಪುಸ್ತಕ ಭಂಡಾರ
ಮೋತಿ ಸರ್ಕಲ್, ಬಳ್ಳಾರಿ.

ಮಾನ್ಯರೇ

**ವಿಷಯ: ಕನ್ನಡ ವಿಶ್ವಕೋಶ ಕಳಿಸಿಕೊಡುವಂತೆ**

ಸರ್, ಈ ಮೂಲಕ ತಿಳಿಸುವುದೇನೆಂದರೆ ನಾನು 10ನೇ ತರಗತಿ ಓದುತ್ತಿದ್ದು, ನನ್ನ ವಿದ್ಯಾಭ್ಯಾಸಕ್ಕೆ ಪೂರಕವಾದ ಮಾಹಿತಿ ಸಂಗ್ರಹಿಸಲು ಕನ್ನಡ ವಿಶ್ವಕೋಶ ಬೇಕಾಗಿದೆ. ಆದ್ದರಿಂದ ದಯಮಾಡಿ ಆ ಪುಸ್ತಕ ಕಳುಹಿಸಿಕೊಡಲು ಮನವಿ ಮಾಡಿಕೊಳ್ಳುತ್ತಿದ್ದೇನೆ. ಅಂಚೆಯ ಮೂಲಕ ಕಳುಹಿಸಿದರೆ ಹಣ ಸಂದಾಯ ಮಾಡಿ ಬಿಡಿಸಿಕೊಳ್ಳುತ್ತೇನೆ ಎಂದು ತಿಳಿಸುತ್ತೇನೆ.

ಧನ್ಯವಾದಗಳೊಂದಿಗೆ

ತಮ್ಮ ವಿಶ್ವಾಸಿ
ಧ್ರುವ

**XV.**

**ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** **1 x 5 = 5**

**ಅಂಕಸೂಚಿ:**

**ಪ್ರಸ್ತಾವನೆ/ಪೀಠಿಕೆ/ವಿಷಯ ಪ್ರವೇಶ – 1 ಅಂಕ**

**ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ – 2 ಅಂಕ**

**ಉಪಸಂಹಾರ/ ಮುಕ್ತಾಯ/ ವಿಷಯ ಸಮಾಪ್ತಿ – 1 ಅಂಕ**

**ಭಾಷಾ ಶೈಲಿಗೆ, ಸೂಕ್ತ ಪದಬಂಧ – 1 ಅಂಕ**

**45.** **ಸಮೂಹ ಮಾಧ್ಯಮಗಳು**

**ಪೀಠಿಕೆ:** ಆಧುನಿಕ ಯುಗದಲ್ಲಿ ಸಮೂಹ ಮಾಧ್ಯಮಗಳು ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಒಂದು ಸ್ಥಳದಲ್ಲಿಯ ವಿಚಾರಗಳನ್ನು ಮತ್ತೊಂದು ಸ್ಥಳದ ಜನರಿಗೆ ತಿಳಿಸುವ ಮಾಧ್ಯಮಗಳು ಸಮೂಹ ಮಾಧ್ಯಮಗಳು. ಸಮೂಹ ಮಾಧ್ಯಮಗಳು ಇಡೀ ವಿಶ್ವವನ್ನು ಒಂದುಗೂಡಿಸಿವೆ. ಪ್ರಪಂಚದ ಯಾವುದೇ ಮೂಲೆಯಲ್ಲಿ ಏನೇ ಘಟನೆ ನಡೆದರೂ ತತ್‌ಕ್ಷಣವಾಗಿ ಇಡೀ ವಿಶ್ವದ ಜನರಿಗೆ ಮುಟ್ಟಿಸುವಷ್ಟು ಸಾಮರ್ಥವನ್ನು ಇಂದಿನ ಸಮೂಹ ಮಾಧ್ಯಮಗಳು ಬೆಳೆಸಿಕೊಂಡಿವೆ.

**ವಿಷಯ ವಿವರಣೆ:** ಸಾಮಾನ್ಯವಾಗಿ ಒಂದು ವಿಷಯವನ್ನು ಜನರಿಗೆ ತಲುಪಿಸುವ ದೂರದರ್ಶನ, ರೇಡಿಯೋ, ವೃತ್ತಪತ್ರಿಕೆಗಳು, ಅಂತರ್ಜಾಲದಂತಹ ಮೊದಲಾದ ಸಂಪರ್ಕ ಸಾಧನಗಳನ್ನು ಸಮೂಹ ಮಾಧ್ಯಮಗಳು ಎಂದು ಕರೆಯಲಾಗುತ್ತದೆ. ಸುದ್ದಿ ಮಾಹಿತಿಯ

| | | |
|---|---|---|
| | ವರ್ಗಾವಣೆ ಅವಶ್ಯತೆ ಇದ್ದೇ ಇದೆ. ಒಬ್ಬರಿಗೆ ತಿಳಿದಿರುವ ಮಾಹಿತಿ ಘಟನೆಯ ಬಗ್ಗೆ ತಿಳುವಳಿಕೆ, ಚಿಂತನ–ಸುದ್ಧಿ–ಸಮಾಚಾರ–ವಾರ್ತೆ ವರದಿ ಮುಂತಾದವುಗಳನ್ನು ಸಮೂಹ ಮಾಧ್ಯಮಗಳಲ್ಲಿ ನೋಡಬಹುದು. ಸಮೂಹ ಮಾಧ್ಯಮಗಳನ್ನು ಪ್ರಜಾಪ್ರಭುತ್ವದ ನಾಲ್ಕನೆಯ ಅಂಗವೆಂದು ಕರೆಯಲಾಗುತ್ತದೆ. ನಮ್ಮ ಜನರಿಗೆ ಅವಶ್ಯವಾದ ವಿಷಯಗಳನ್ನು ಮುಟ್ಟಿಸುವಲ್ಲಿ ಹಾಗೂ ಸಮಾಜವನ್ನು ಸರಿದಾರಿಗೆ ತರುವಲ್ಲಿ ಶ್ರಮಿಸುತ್ತಿವೆ. ಇಂದಿನ ಮಾಧ್ಯಮಗಳು ಮನೋರಂಜನೆಯ ಜೊತೆಗೆ ಕ್ರೀಡೆ, ಕಲೆ, ಸಾಹಿತ್ಯ, ಸಂಗೀತ, ಸಂಸ್ಕೃತಿ ಮುಂತಾದ ವಿಷಯಗಳನ್ನು, ವಿಶ್ವದ ಇತರ ಸುದ್ಧಿಸಮಾಚಾರಗಳನ್ನು ತಿಳಿಸುತ್ತಿವೆ. ಶೈಕ್ಷಣಿಕ ಕ್ಷೇತ್ರದಲ್ಲಿ ಸಮೂಹ ಮಾಧ್ಯಮಗಳು ಜ್ಞಾನವಿಕಾಸಕ್ಕೂ ಕೂಡ ಸಹಕಾರಿ ಆಗಿವೆ. ಹಾಗೆಯೇ ಸಮೂಹ ಮಾಧ್ಯಮಗಳಿಂದ ಸಾಕಷ್ಟು ದುಷ್ಪರಿಣಾಮಗಳು ಇವೆ ಎಂಬುದನ್ನು ವಿದ್ಯಾರ್ಥಿಗಳು ತಿಳಿಯಬೇಕಾಗಿದೆ. ವಿದ್ಯಾರ್ಥಿಗಳು ಅವಶ್ಯವಾದ ವಿಚಾರಗಳನ್ನು ಮಾತ್ರ ಆಯ್ದು ತಮ್ಮ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು. ವಿಜ್ಞಾನದ ಆವಿಷ್ಕಾರದಿಂದ ಮೊಬೈಲ್ (ವಾಟ್ಸಪ್, ಈಮೇಲ್, ಹೈಕ್ ಗ್ರೂಪ್)ನಂತಹ ಮತ್ತಷ್ಟು ಸಮೂಹ ಮಾಧ್ಯಮಗಳು ಹುಟ್ಟಿಕೊಂಡು ವಿಚಾರ ವಿನಮಯಕ್ಕೆ ಸಹಕಾರಿಯಾಗಿವೆ.<br><br>**ಉಪಸಂಹಾರ** : ಒಟ್ಟಾರೆಯಾಗಿ ಸಮೂಹ ಮಾಧ್ಯಮಗಳಿಂದ ಇಡಿ ವಿಶ್ವವೇ ಸಾಕಷ್ಟು ವಿಚಾರಗಳನ್ನು ಕ್ಷಣಮಾತ್ರದಲ್ಲಿ ನೋಡಬಹುದಾಗಿದೆ. ಪ್ರತಿಯೊಂದು ಮಾಧ್ಯಮಗಳು ಸಮಾಜವನ್ನು ಸರಿದಾರಿಗೆ ತರುವ ಸುಖಿ ಸಮಾಜ ನಿರ್ಮಾಣ ಕಾರ್ಯದಲ್ಲಿ ತೊಡಗಬೇಕೆಂಬುದೇ ಎಲ್ಲರ ಆಶಯವಾಗಿದೆ.<br><br>**ಅಥವಾ**<br><br>**ದೂರದರ್ಶನದ ಒಳಿತು–ಕೆಡುಕುಗಳು**<br><br>**ಪೀಠಿಕೆ:** ಆಧುನಿಕ ವೈಜ್ಞಾನಿಕ ಆವಿಷ್ಕಾರಗಳಲ್ಲಿ ಅದ್ಭುತವಾದದ್ದು ದೂರದರ್ಶನವಾಗಿದೆ. ಪ್ರಸ್ತುತ ದಿನಮಾನಗಳಲ್ಲಿ ಅತ್ಯಂತ ಆಕರ್ಷಣೀಯ ಸಮೂಹ ಮಾಧ್ಯಮವೆಂದರೆ ಅದು ದೂರದರ್ಶನವೇ ಆಗಿದೆ. ಇದು ದೃಶ್ಯಮಾಧ್ಯಮವಾಗಿದ್ದು ಇದರಲ್ಲಿ ವೀಕ್ಷಿಸುವ ಮತ್ತು ಆಲಿಸುವ ಸೌಲಭ್ಯ ಇರುವುದರಿಂದ ಅಬಾಲವೃದ್ಧರಿಗೂ ಆಸಕ್ತಿದಾಯಕವಾಗಿದೆ. ವಿಚಾರಗಳನ್ನು ಅತ್ಯಂತ ಶೀಘ್ರವಾಗಿ ತಲುಪಿಸುವಲ್ಲಿ ದೂರದರ್ಶನ ಪ್ರಮುಖ ಪಾತ್ರವಹಿಸುತ್ತವೆ.<br><br>**ವಿಷಯ ವಿವರಣೆ:** ದೂರದರ್ಶನ ಅತ್ಯಂತ ಜನಪ್ರಿಯ ಮಾಧ್ಯಮವಾಗಿದ್ದು, ಇದರಿಂದ ಸಾಕಷ್ಟು ಅನೂಕೂಲಗಳಿವೆ. ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ವೈಜ್ಞಾನಿಕ, ಮನೋರಂಜನಾತ್ಮಕ, ಸಾಂಸ್ಕೃತಿಕ, ವೈದ್ಯಕೀಯ, ಕ್ರೀಡೆ ಮುಂತಾದ ವಿಚಾರಗಳು ಪ್ರಸಾರವಾಗುವುದರಿಂದ ಸಮಗ್ರಜ್ಞಾನವನ್ನು ಪಡೆಯಬಹುದು. ವಾರ್ತೆಗಳು, ಧಾರವಾಹಿಗಳು, ಚಲನಚಿತ್ರಗಳು, ನಾಟಕಗಳು, ಸಾಂಸ್ಕೃತಿಕ ಕಾರ್ಯಕ್ರಮಗಳು, ಹಾಸ್ಯಕಾರ್ಯಕ್ರಮಗಳು, ನೃತ್ಯಗಳು, ಅಡುಗೆ ಕಾರ್ಯಕ್ರಮಗಳು ಹೀಗೆ ವೈವಿಧ್ಯಮಯ ಕಾರ್ಯಕ್ರಮಗಳು ಪ್ರಸಾರವಾಗುವುದರಿಂದ ಪ್ರತಿಯೊಬ್ಬರು ದೂರದರ್ಶನವನ್ನು ವೀಕ್ಷಿಸುತ್ತಾರೆ. ಅನಕ್ಷರಸ್ಥರು ಕೂಡ ಸಾಕಷ್ಟು | |

| | | |
|---|---|---|
| | ವಿಚಾರಗಳನ್ನು ತಿಳಿದುಕೊಳ್ಳಬಹುದು. ಪ್ರತಿಯೊಂದು ಭಾಷೆಯಲ್ಲಿಯೂ ದೂರದರ್ಶನಗಳು ತೆರೆಯಲ್ಪಟ್ಟಿವೆ. ಹಾಗಾಗಿ ಇಡಿ ವಿಶ್ವವೇ ದೂರದರ್ಶನಕ್ಕೆ ಮನಸೋತಿದೆ ಎಂದು ಹೇಳಬಹುದು.<br>ದೂರದರ್ಶನದಿಂದ ದುಷ್ಪರಿಣಾಮಗಳು ಸಹ ಇವೆ. ವಿದ್ಯಾರ್ಥಿಗಳಾದವರು ಸದಾಕಾಲ ದೂರದರ್ಶನದ ಮುಂದೆ ಕುಳಿತು ತಮ್ಮ ಓದಿನಲ್ಲಿ ಆಸಕ್ತಿಯನ್ನು ಕಳೆದುಕೊಳ್ಳಬಹುದು. ಆದ್ದರಿಂದ ತಮ್ಮ ಜ್ಞಾನಕ್ಕೆ ಅವಶ್ಯವಾದ ಕಾರ್ಯಕ್ರಮಗಳನ್ನು ಮಾತ್ರ ವೀಕ್ಷಿಸಬೇಕು. ಚಿಕ್ಕಮಕ್ಕಳಿಗೆ ಟಿವಿಯನ್ನು ಹೆಚ್ಚು ನೋಡಲು ಬಿಡಬಾರದು.<br>**ಉಪಸಂಹಾರ :** ದೂರದರ್ಶನವನ್ನು **ಮೂರ್ಖರ ಪೆಟ್ಟಿಗೆ** ಎಂದು ಕರೆಯಲಾಗಿದೆ. ಆದರೂ ಇದರಿಂದ ಸಾಕಷ್ಟು ಒಳಿತುಗಳಿವೆ. ಅಷ್ಟೇ ದುಷ್ಪರಿಣಾಮಗಳಿವೆ ಎಂಬುದನ್ನು ಮರೆಯಬಾರದು. ಅತಿಯಾದರೆ ಅಮೃತವೂ ವಿಷವಾಗುತ್ತದೆ. ದೂರದರ್ಶನವನ್ನು ಅದರಲ್ಲೂ ವಿದ್ಯಾರ್ಥಿಗಳು ಜ್ಞಾನವಿಕಾಸಕ್ಕೆ ಸಂಬಂಧಿಸಿದ ವಿಚಾರಗಳಿಗೆ ಮಾತ್ರ ಆಕರ್ಷಿತರಾಗುವುದು ಒಳಿತು ಎಂದು ಹೇಳಬಹುದು. | |

# ಉಪನಿರ್ದೇಶಕರು (ಆಡಳಿತ) ರವರ ಕಚೇರಿ
# ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

## 2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು

## ವಿಷಯ : ಪ್ರಥಮ ಭಾಷೆ – ಕನ್ನಡ (01–K)

**ಅವಧಿ : 3 ಗಂಟೆ 15 ನಿಮಿಷ    ಅಭ್ಯಾಸ ಪತ್ರಿಕೆ – 04    ಗರಿಷ್ಠ ಅಂಕಗಳು : 100**

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ. 1 x 6 = 6**

1. **' ವಿದ್ವಾಂಸ ' ಎಂಬ ಪದವು :**

   (ಎ) ರೂಢನಾಮ (ಬಿ) ಅಂಕಿತನಾಮ
   (ಸಿ) ಅನ್ವರ್ಥಕ ನಾಮ (ಡಿ) ಸರ್ವನಾಮ

2. **ಇದೊಂದು ಗುಣವಾಚಕ ಪದ ;**

   (ಎ) ಆಟ (ಬಿ) ಅಷ್ಟು
   (ಸಿ) ಅದು (ಡಿ) ಹಳತು

3. **ಮನುಷ್ಯನಲ್ಲಿ – ಈ ನಾಮಪದದಲ್ಲಿರುವ ವಿಭಕ್ತಿ ಹೆಸರು :**

   (ಎ) ಸಪ್ತಮೀ (ಬಿ) ಪಂಚಮೀ
   (ಸಿ) ಷಷ್ಠೀ (ಡಿ) ಚತುರ್ಥಿ

4. **ವಿಧ್ಯರ್ಥಕ ರೂಪದ ಕ್ರಿಯಾಪದ ;**

   (ಎ) ಓದೆನು (ಬಿ) ಮಾಡೇವು
   (ಸಿ) ಓದಲಿ (ಡಿ) ಓದರು

5. **ಶ್ಚುತ್ವ ಸಂಧಿಗೆ ಉದಾಹರಣೆಯಾಗಿರುವ ಪದ :**

   (ಎ) ಶರಚ್ಚಂದ್ರ (ಬಿ) ಅಜಂತ
   (ಸಿ) ತನ್ಮಯ (ಡಿ) ಅತ್ಯಾದರ

6. **ಕೃದಂತ ಭಾವನಾಮಕ್ಕೆ ಉದಾಹರಣೆಯಾದ ಪದವಿದು :**

   (ಎ) ನಡೆಯುವ (ಬಿ) ಅಂಜಿಕೆ
   (ಸಿ) ಕನ್ನಡತಿ (ಡಿ) ಮಾಡುತ್ತ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 1 x 4 = 4**

7. ಹೊಗೆದೋರು : ಕ್ರಿಯಾಸಮಾಸ : : ಘಟಸಂಭೂತ : ____________
8. ಮೇಜು : ಪೋರ್ಚುಗೀಸು: : ದಿವಾನ : ______________
9. ಸತಿಪತಿ : ಜೋಡುನುಡಿ : : ಈಗೀಗ : ___________
10. ಕುಟಿಲ : ಮೋಸ : : ಕಾಪು : _________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ 1 x 7 = 7**

11. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
12. ಲಂಡನ್ನಿನ ರಸ್ತೆಗಳಲ್ಲಿ ಟ್ರಾಮ್ ಬಸ್ಸುಗಳು ಬಹಳ ಹೊತ್ತು ನಡು ನಡುವೆ ನಿಲ್ಲುವುದನ್ನು ತಪ್ಪಿಸಲು ಮಾಡಿರುವ ವ್ಯವಸ್ಥೆಯೇನು?
13. ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ?
14. ನೈಮಿತ್ತಿಕನು ಸುಕುಮಾರಸ್ವಾಮಿಯ ಬಗ್ಗೆ ಏನು ಹೇಳಿದನು?
15. ಕಾಡುಮೇಡುಗಳ ಸ್ಥಿತಿ ಹೇಗಿದೆ?
16. ದ್ರೋಣನು ಪರಶುರಾಮರಲ್ಲಿಗೆ ಏಕೆ ಬಂದನು?
17. ಯಾರಿಗೆ ವಸಂತಮುಖ ತೋರಲಿಲ್ಲ?

**IV.ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ 2 x 10 = 20**

18. ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆ ಏನು?
19. ರಾಜರ ಪ್ರಕೃತಿ ಹೇಗಿರುತ್ತದೆ?
20. ಹಣಕಾಸು ನೀತಿಯಲ್ಲಿ ವಿಶ್ವೇಶ್ವರ್ಯನವರು ಮಾಡಿದ ಬದಲಾವಣೆಗಳಾವುವು?
21. ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?
22. ಕುಂತಿ, ಮಾದ್ರಿಯರು ಯಾರ್‍ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?
23. ದ್ರುಪದನು ದ್ರೋಣರಿಗೆ ಗರ್ವದಿಂದ ಹೇಳಿದ ಮಾತುಗಳು ಯಾವುವು?
24. ಕ್ರಿಯಾ ಸ್ವಾತಂತ್ರ್ಯ ಎಂದರೇನು?
25. ಭಗತ್ ಸಿಂಗ್, ಜಲಿಯನ್ ವಾಲಾಬಾಗ್‌ನ ಮಣ್ಣಿನ ಕುರಿತು ತನ್ನ ತಂಗಿಗೆ ಏನೆಂದು ಹೇಳಿದನು?
26. ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸುಗಳು ಏಕೆ ಮರುಗಿವೆ? ತಿಳಿಸಿ.
27. ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು?

**V. ಕೆಳಗಿನ ಕವಿ/ ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 x 3 = 6**

28. ಶಿವಕೋಟ್ಯಾಚಾರ್ಯ
29. ಕುಮಾರವ್ಯಾಸ

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತನೇ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ. 1 x 3 = 3**

31. "ಭೀಮದುರ್ಯೋಧನರು ಮದಗಜಗಳಂತೆ ಹೋರಾಡಿದರು"

**VIII. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1 x 3 = 3**

**32**. ಮನಸ್ಸಿದ್ದರೆ ಮಾರ್ಗ

**ಅಥವಾ**

ಗುಣ ನೋಡಿ ಗೆಳೆತನ ಮಾಡು

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6 x 3 = 18**

33. "ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ."
34. "ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ."
35. "ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ"
36. "ಮುಂಗಾರಿನ ಮಳೆಯಾಗೋಣ."
37. "ಬೇರೆ ಬಣ್ಣವನೆ ಕಾಣೆ"
38. "ರಘೂದ್ವಹನ ಸೊಲ್ಗೇಳಿ ನಮಿಸಲ್"

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ** **1x4=4**

| | | |
|---|---|---|
| ನೀಲಮೇಘ | | ಯುಗ–ಯುಗಗಳ ________________ |
| ______________________ | **ಅಥವಾ** | ______________________ |
| ______________________ | | ______________________ |
| ______________________ | | ______________________ |
| ______________________ | | ಹಕ್ಕಿ ಹಾರುತಿದೆ ನೋಡಿದಿರಾ? |
| ಹಕ್ಕಿ ಹಾರುತಿದೆ ನೋಡಿದಿರಾ? | | |

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.** **1 x 4 = 4**

40 ಸಿಟ್ಟಿಲೆ ಮುಂಗೈ ಕಟ್ಟನೆ ಕಡಕೊಂಡ, ಹುಕುಮ ಕೊಟ್ಟ ಸಾಹೇಬಾಗ
ಕುದರಿ ಮಂದಿ ಕೂಡಿ ಮುಟ್ಟಿತೊ ಹಲಗಲಿ ತಳದ ಮ್ಯಾಗ
ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ
ಹೊರಗಿನ ಮಂದಿ ಗುಂಡ ಹತ್ತಿ ಸರಿದು ನಿಂತರೊ ಹಿಡಿದು ದಂಗ
ಕಾಗದ ಬರೆದು ಕಳುವ್ಯಾರೆ ಬೇಗ, ದಂಡು ಬರಲೆಂತ ಹೀಂಗ
ದಂಡ ಬಂದಿತೊ ತಯಾರಾಗಿ ಜಲದ ಮಾಡಿ ಹಲಗಲಿಗಿ

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2 x 4 = 8**

41. ವೃಕ್ಷ ಸಾಕ್ಷಿ ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು? ಏಕೆ?

**ಅಥವಾ**

ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ತಿಳಿಸಿ.

42. ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.

**ಅಥವಾ**

ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

ರೈತರನ್ನು **'ಅನ್ನದಾತ'** ದೇಶದ **'ಬೆನ್ನೆಲುಬು'** ಎಂದೆಲ್ಲ ಕರೆಯುತ್ತೇವೆ. ಆದರೆ ಇಂದು ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ನಿಸರ್ಗದ ಜೊತೆ ಸೆಣೆಸಬೇಕು. ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ. ಉತ್ತಮ ಗುಣಮಟ್ಟದ ಬೀಜ ಗೊಬ್ಬರದ ಸಮಸ್ಯೆಯಿಂದ ಭೂಮಿ ಬರಿದಾಗುತ್ತಿದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ರೋಗಗಳು ತಗುಲಿ ಬೆಳೆ ಸಿಗದ ಸಮಸ್ಯೆ, ಬೆಳೆ ಬೆಳೆದರೂ ಸರಿಯಾದ ಬೆಲೆ ಸಿಗದೆ ರೈತರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು. ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ, ಜನರು ಆಹಾರವಿಲ್ಲದೆ ಸಾಯುವ ಪರಿಸ್ಥಿತಿ ಬರುತ್ತದೆ. ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ. ಗೆಡ್ಡೆ-ಗೆಣಸುಗಳನ್ನು ತಿಂದು, ಎಲೆಗಳ ರಸ ಕುಡಿದು ಬದುಕುವ ಕಾಲ ಮತ್ತೆ ಬರಬಹುದು. ಆಹಾರಕ್ಕಾಗಿ ಮನುಷ್ಯರು ಮತ್ತು ಪ್ರಾಣಿಗಳ ನಡುವೆ ಹೋರಾಟ ಏರ್ಪಡಬಹುದು. ಆಹಾರವಿಲ್ಲದೆ ಬದುಕಲು ಸಾಧ್ಯವಿಲ್ಲ. ಅಕ್ಕಿ, ರಾಗಿ, ಗೋಧಿ, ಜೋಳ ತರಕಾರಿಗಳನ್ನು ತಯಾರಿಸುವ ಯಾವ ಕಾರ್ಖಾನೆಗಳು ಇಲ್ಲ. ಇವಕ್ಕೆಲ್ಲ ರೈತರ ಬೆವರು ಭೂಮಿಗೆ ಸುರಿಯಬೇಕು.

**ಪ್ರಶ್ನೆಗಳು :**

43(ಅ) ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು?

43(ಆ) ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಏನಾಗಬಹುದು?

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 x 5 = 5**

44. ನಿಮ್ಮನ್ನು ಮೈಸೂರಿನ ಶ್ರೀವಿವೇಕಾನಂದ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಅಥರ್ವ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಶಾಲಾ ಸ್ವಾತಂತ್ರ್ಯ ದಿನಾಚರಣೆಗೆ ಬರುವಂತೆ ಆಹ್ವಾನಿಸಿ ಬಳ್ಳಾರಿಯಲ್ಲಿರುವ ನಿಮ್ಮ ತಾಯಿಗೊಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಬಿಜಾಪುರದ ಗೋಳಗೊಮ್ಮಟ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಅರ್ಥ' ಎಂದು ಭಾವಿಸಿಕೊಂಡು ನಿಮ್ಮ ಊರಿಗೊಂದು ಗ್ರಂಥಾಲಯ ನಿರ್ಮಿಸಿಕೊಡುವಂತೆ ನಿಮ್ಮ ರಾಜ್ಯದ ಶಿಕ್ಷಣ ಸಚಿವರಿಗೊಂದು ಮನವಿ ಪತ್ರ ಬರೆಯಿರಿ.

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1 x 5 = 5**

45. ತ್ಯಾಜ್ಯವಸ್ತು ನಿರ್ವಹಣೆ

**ಅಥವಾ**

ಸಾವಯವ ಕೃಷಿ

# ಉಪನಿರ್ದೇಶಕರು (ಆಡಳಿತ) ರವರ ಕಚೇರಿ
# ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

## 2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು

## ವಿಷಯ : ಪ್ರಥಮ ಭಾಷೆ – ಕನ್ನಡ (01–K)

**ಅವಧಿ : 3 ಗಂಟೆ 15 ನಿಮಿಷ    ಅಭ್ಯಾಸ ಪತ್ರಿಕೆ – 04    ಗರಿಷ್ಠ ಅಂಕಗಳು : 100**

## ಮಾದರಿ ಉತ್ತರಗಳು

| ಕ್ರ.ಸಂ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.**<br><br>**ಅಂಕ ಸೂಚಿ : ಪ್ರತಿ ಸರಿಯುತ್ತರಕ್ಕೆ 1 ಅಂಕ ನೀಡುವುದು.** | **1 x 6 = 6** |
| **1.** | **' ವಿದ್ವಾಂಸ ' ಎಂಬ ಪದವು :**<br>(ಎ) ರೂಢನಾಮ (ಬಿ) ಅಂಕಿತನಾಮ<br>(ಸಿ) ಅನ್ವರ್ಥಕ ನಾಮ (ಡಿ) ಸರ್ವನಾಮ<br>**ಉತ್ತರ : (ಸಿ) ಅನ್ವರ್ಥಕ ನಾಮ** | |
| **2.** | **ಇದೊಂದು ಗುಣವಾಚಕ ಪದ ;**<br>(ಎ) ಆಟ (ಬಿ) ಅಷ್ಟು<br>(ಸಿ) ಅದು (ಡಿ) ಹಳತು<br>**ಉತ್ತರ : (ಡಿ) ಹಳತು** | |
| **3.** | **ಮನುಷ್ಯನಲ್ಲಿ – ಈ ನಾಮಪದದಲ್ಲಿರುವ ವಿಭಕ್ತಿ ಹೆಸರು :**<br>(ಎ) ಸಪ್ತಮೀ (ಬಿ) ಪಂಚಮೀ<br>(ಸಿ) ಷಷ್ಠೀ (ಡಿ) ಚತುರ್ಥಿ<br>**ಉತ್ತರ : (ಎ) ಸಪ್ತಮೀ** | |

| | | |
|---|---|---|
| 4. | **ವಿಧ್ಯರ್ಥಕ ರೂಪದ ಕ್ರಿಯಾಪದ ;**<br>(ಎ) ಓದೆನು (ಬಿ) ಮಾಡೇವು<br>(ಸಿ) ಓದಲಿ (ಡಿ) ಓದರು<br>**ಉತ್ತರ : (ಸಿ) ಓದಲಿ** | |
| 5. | **ಶ್ಚುತ್ವ ಸಂಧಿಗೆ ಉದಾಹರಣೆಯಾಗಿರುವ ಪದ :**<br>(ಎ) ಶರಚ್ಚಂದ್ರ (ಬಿ) ಅಜಂತ<br>(ಸಿ) ತನ್ಮಯ (ಡಿ) ಅತ್ಯಾದರ<br>ಉತ್ತರ : (ಎ) ಶರಚ್ಚಂದ್ರ | |
| 6. | **ಕೃದಂತ ಭಾವನಾಮಕ್ಕೆ ಉದಾಹರಣೆಯಾದ ಪದವಿದು :**<br>(ಎ) ನಡೆಯುವ (ಬಿ) ಅಂಜಿಕೆ<br>(ಸಿ) ಕನ್ನಡತಿ (ಡಿ) ಮಾಡುತ್ತ<br>**ಉತ್ತರ : (ಬಿ) ಅಂಜಿಕೆ** | |
| II. | **ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** | **1 x 4 = 4** |
| 7. | ಹೊಗೆದೋರು : ಕ್ರಿಯಾಸಮಾಸ : : ಘಟಸಂಭೂತ : **ಬಹುವ್ರೀಹಿ ಸಮಾಸ** | |
| 8. | ಮೇಜು : ಪೋರ್ಚುಗೀಸು: : ದಿವಾನ : **ಪರ್ಷಿಯನ್** | |
| 9. | ಸತಿಪತಿ : ಜೋಡುನುಡಿ : : ಈಗೀಗ : **ದ್ವಿರುಕ್ತಿ** | |
| 10. | ಕುಟಿಲ : ಮೋಸ : : ಕಾಪು : **ರಕ್ಷಣೆ** | |
| III. | **ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ**<br>**ಅಂಕ ಸೂಚಿ : ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿಯುತ್ತರಕ್ಕೆ 1 ಅಂಕ ನೀಡುವುದು** | **1 x 7 = 7** |
| 11. | **ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?**<br>**ಉತ್ತರ:–** ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ **ಶಬರಿ.** | |

| | | |
|---|---|---|
| **12.** | **ಲಂಡನ್ನಿನ ರಸ್ತೆಗಳಲ್ಲಿ ಟ್ರಾಮ್ ಬಸ್ಸುಗಳು ಬಹಳ ಹೊತ್ತು ನಡು ನಡುವೆ ನಿಲ್ಲುವುದನ್ನು ತಪ್ಪಿಸಲು ಮಾಡಿರುವ ವ್ಯವಸ್ಥೆಯೇನು?**<br>**ಉತ್ತರ:–** ಲಂಡನ್ನಿನ ರಸ್ತೆಗಳಲ್ಲಿ ಟ್ರಾಮ್ ಬಸ್ಸುಗಳು ಬಹಳ ಹೊತ್ತು ನಡುನಡುವೆ ನಿಲ್ಲುವುದನ್ನು ತಪ್ಪಿಸಲು **ಭೂಗರ್ಭದಲ್ಲಿ ಗಾಡಿಯನ್ನು ಒಯ್ಯುವ** ವ್ಯವಸ್ಥೆಯನ್ನು ಮಾಡಲಾಗಿದೆ. | |
| **13.** | **ಹಿತವಚನವು ಮನಸ್ಸಿನ ಕೊಳೆಯನ್ನು ಹೇಗೆ ತೊಳೆಯುತ್ತದೆ?**<br>**ಉತ್ತರ:** ಹಿತವಚನವು ಮುಸ್ಸಂಜೆಯ ಚಂದ್ರ ಕತ್ತಲನ್ನು ಕಳೆವಂತೆ ಮನಸ್ಸಿನ ಕೊಳೆಯನ್ನೆಲ್ಲ ತೊಳೆಯುತ್ತದೆ. | |
| **14.** | **ನೈಮಿತ್ತಿಕನು ಸುಕುಮಾರಸ್ವಾಮಿಯ ಬಗ್ಗೆ ಏನು ಹೇಳಿದನು?**<br>**ಉತ್ತರ:–** ನೈಮಿತ್ತಿಕನು **'ಈ ಸುಕುಮಾರಸ್ವಾಮಿಯು ಯಾವಾಗ ಋಷಿಗಳನ್ನು ಕಾಣುತ್ತಾನೆಯೋ ಅಂದು ತಪಸ್ಸಿಗೆ ಹೊರಡುತ್ತಾನೆ'** ಎಂದು ಹೇಳಿದನು. | |
| **15.** | **ಕಾಡುಮೇಡುಗಳ ಸ್ಥಿತಿ ಹೇಗಿದೆ?**<br>**ಉತ್ತರ:–** ಕಾಡುಮೇಡುಗಳು **ಬರಡಾಗಿವೆ.** | |
| **16.** | **ದ್ರೋಣನು ಪರಶುರಾಮರಲ್ಲಿಗೆ ಏಕೆ ಬಂದನು?**<br>**ಉತ್ತರ:–** ದ್ರೋಣನು ಪರಶುರಾಮನ ಬಳಿಗೆ **ದ್ರವ್ಯಾರ್ಥಿಯಾಗಿ** ಬಂದನು. | |
| **17.** | **ಯಾರಿಗೆ ವಸಂತಮುಖ ತೋರಲಿಲ್ಲ?**<br>**ಉತ್ತರ:–** ಕಮ್ಮಾರನಿಗೆ, ಕುಂಬಾರನಿಗೆ, ನೇಕಾರನಿಗೆ, ಕೇರಿಯ ಮಾರನಿಗೆ ವಸಂತ ಮುಖ ತೋರಲಿಲ್ಲ. | |
| **IV.** | **ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ**<br>**ಅಂಕ ಸೂಚಿ: ಅಂಶಗಳನ್ನಾಧರಿಸಿ ಪ್ರತ್ಯಾಂಶಕ್ಕೆ – 2 ಅಂಕ** | **2x10= 20** |
| **18.** | **ಸಾಮ್ರಾಟರ ರಾಜ್ಯಾಭಿಷೇಕವಾಗುವ ಸಿಂಹಾಸನದ ಮೇಲಿರುವ ಕಲ್ಲುಪಾಟಿಯ ವಿಶೇಷತೆ ಏನು?**<br>**ಉತ್ತರ:–** ಲಂಡನ್ ನಗರದಲ್ಲಿ ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಅವರ ಸಿಂಹಾಸನದ ಮೇಲೆ ಒಂದು ಕಲ್ಲುಪಾಟಿಯನ್ನು ಹಾಕುತ್ತಾರೆ. ಪಟ್ಟಾಭಿಷೇಕವಾಗುವಾಗ ಮಾತ್ರ ಸಾಮ್ರಾಟರು ಇದರ ಮೇಲೆ ಕೂರಬೇಕು. ಈ ಶಿಲೆಯನ್ನು ಒಳಗೊಂಡ ಸಿಂಹಾಸನವು ವೆಸ್ಟ್‌ಮಿನ್‌ಸ್ಟರ್ ಮಂದಿರದಲ್ಲಿಯ ಒಂದು ಭಾಗದಲ್ಲಿದೆ. **'ಸ್ಟೋನ್ ಆಫ್ ಸ್ಕೋನ್'** ಎಂದು ಇದರ ಹೆಸರು. ಮೂರನೆಯ ಎಡ್ವರ್ಡ್‌ನು ಸ್ಕಾಟ್‌ಲೆಂಡಿನ ಅರಸರಿಂದ ಇದನ್ನು ಕಿತ್ತುಕೊಂಡು ಬಂದಂತೆ ಕಾಣುತ್ತದೆ. ಅಂದಿನಿಂದ ಎಲ್ಲ ಸಾಮ್ರಾಟರ ಅಭಿಷೇಕವು ಈ ಕಲ್ಲಿನ ಮೇಲೆಯೇ ಆಗಿದೆ. | |

| | | |
|---|---|---|
| 19. | **ರಾಜರ ಪ್ರಕೃತಿ ಹೇಗಿರುತ್ತದೆ?**<br>**ಉತ್ತರ:** ರಾಜರಿಗೆ ಅಹಂಕಾರದ ದಾಹಜ್ವರ ತಲೆಗಡರಿ ಅವರ ಬಗೆಯಲ್ಲಿ ಕತ್ತಲು ತುಂಬಿರುತ್ತದೆ. ಸಂಪತ್ತಿನ ಪೈತ್ಯ ಅಡರಿ ಜಗತ್ತೆಲ್ಲ ಕ್ಷುದ್ರವಾಗಿ ಕಾಣುತ್ತದೆ. ಅಧಿಕಾರದ ಸೋಂಕು ತಾಗಿ ಬುದ್ಧಿ ಮಂಕಾಗಿ ಬಿಡುತ್ತದೆ. ಅಹಂಕಾರದಿಂದ ಅವರ ಕಿವಿ ಕಿವುಡಾಗಿಬಿಡುತ್ತದೆ. ಎಂಥ ಉಪದೇಶವೂ ಅವರ ಕಿವಿಗೆ ನಾಟುವುದಿಲ್ಲ. ತನಗೆ ಉಪದೇಶಿಸಬೇಕಾದ್ದು ಏನೂ ಉಳಿದಿಲ್ಲ ಎನ್ನುವಂಥ ಭಾವ ಹೊಂದಿರುತ್ತಾರೆ. ಹೀಗೆ ರಾಜರ ಪ್ರಕೃತಿ ಇರುತ್ತದೆ. | |
| 20. | **ಹಣಕಾಸು ನೀತಿಯಲ್ಲಿ ವಿಶ್ವೇಶ್ವರ್ಯನವರು ಮಾಡಿದ ಬದಲಾವಣೆಗಳಾವುವು?**<br>**ಉತ್ತರ:–** ವಿಶ್ವೇಶ್ವರಯ್ಯ ಅವರು **ಕ್ರಿ. ಶ. 1913ರಲ್ಲಿ ಮೈಸೂರು ಬ್ಯಾಂಕನ್ನು** ಸ್ಥಾಪಿಸಿದರು. ಕೈಗಾರಿಕೆಗಳ ಅಭಿವೃದ್ಧಿಗೆ **ಫೀಡರ್ ಬ್ಯಾಂಕ್** ಹಾಗೂ **ಕೈಗಾರಿಕಾ ಹೂಡಿಕೆ** ಮತ್ತು **ಅಭಿವೃದ್ಧಿ ನಿಧಿಗಳು** ರಚಿತಗೊಂಡವು. ಸಾರ್ವಜನಿಕ **ಜೀವವಿಮಾ ಯೋಜನೆ** ಜಾರಿಗೆ ತಂದರು. ರೈತರಿಗೆ ಹಾಗೂ ಕರಕುಶಲ ಕೆಲಸಗಾರರಿಗೆ ಸಾಲದ ಸೌಲಭ್ಯ ನೀಡಲು ಪ್ರಾಂತೀಯ **ಸಹಕಾರಿ ಬ್ಯಾಂಕ್**ಗಳನ್ನು ಸ್ಥಾಪಿಸಿದರು. ರಾಜ್ಯದ ಆಸ್ತಿಯನ್ನು ಹೆಚ್ಚಿಸಿ ಆದಾಯ ತರುವುದರ ಮೂಲಕ ಅಭಿವೃದ್ಧಿ ಕಾರ್ಯಗಳ ಪ್ರಭಾವವನ್ನು ಅಳೆಯಲು ಅನುಕೂಲವಾಗುವಂತೆ ಆಯವ್ಯಯದಲ್ಲಿ ಹೊಸ ದೃಷ್ಟಿಕೋನವನ್ನು ಕಂಡುಕೊಂಡರು. | |
| 21. | **ಮುದುಕಿಯು ರಾಹಿಲನ ಬಳಿ ಯುದ್ಧದ ಬಗ್ಗೆ ತಿರಸ್ಕಾರದಿಂದ ನುಡಿದ ಮಾತುಗಳೇನು?**<br>**ಉತ್ತರ:–** ಮುದುಕಿಯು ರಾಹಿಲನ ಬಳಿ **"**ನೋಡಪ್ಪಾ, ನಾನು ಈ ಊರಿಗೆ ಬಂದು ಐವತ್ತು ವರ್ಷಗಳಾದರೂ ಆಗಿರಬಹುದು. ಮದುವೆಯಾಗಿ ನವ ವಧುವಾಗಿ ಈ ಊರನ್ನು ಪ್ರವೇಶಿಸಿದೆ. ಕೆಲವು ಕಾಲ ನೆಮ್ಮದಿಯಿಂದಲೇ ಇದ್ದೆವು. ಜಮೀನು, ಆಸ್ತಿ ನಮಗೆ ಸಾಕಾಗುವಷ್ಟಿತ್ತು. ಈಗಲೂ ಇದೆ ಆದರೆ ನೆಮ್ಮದಿಯಿಂದ ಬದುಕಲು ಈ ಜನ ಬಿಡಬೇಕಲ್ಲ, ಯುದ್ಧವಂತೆ ಯುದ್ಧ!" ಎಂದು ತಿರಸ್ಕಾರದಿಂದ ನುಡಿದಳು. | |
| 22. | **ಕುಂತಿ, ಮಾದ್ರಿಯರು ಯಾರ್ಯಾರ ಅನುಗ್ರಹದಿಂದ ಮಕ್ಕಳನ್ನು ಪಡೆದರು?**<br>**ಉತ್ತರ:** ಕುಂತಿಯು ಯಮಧರ್ಮನ ಅನುಗ್ರಹದಿಂದ ಧರ್ಮರಾಯನನ್ನು, ವಾಯುವಿನ ಅನುಗ್ರಹದಿಂದ ಭೀಮನನ್ನು, ಇಂದ್ರನ ಅನುಗ್ರಹದಿಂದ ಅರ್ಜುನನನ್ನು ಪಡೆದಳು. ಮಾದ್ರಿಯು ಅಶ್ವಿನಿದೇವತೆಗಳ ಅನುಗ್ರಹದಿಂದ ನಕುಲ, ಸಹದೇವರನ್ನು ಪಡೆದಳು. | |
| 23. | **ದ್ರುಪದನು ದ್ರೋಣರಿಗೆ ಗರ್ವದಿಂದ ಹೇಳಿದ ಮಾತುಗಳು ಯಾವುವು?**<br>**ಉತ್ತರ:–** ದ್ರುಪದನು ದ್ರೋಣನಿಗೆ "ನಿನ್ನನ್ನು ನಾನು ತಿಳಿಯೆನು. ನೀನು ಅದೆಲ್ಲಿ ನನ್ನನ್ನು ಕಂಡಿದ್ದಿಯೋ? ರಾಜನಿಗೂ ಬ್ರಾಹ್ಮಣನಿಗೂ ಯಾವ ವಿಧವಾದ ಗೆಳೆತನವೋ? ಮನುಷ್ಯರಾದವರು ಇಷ್ಟು ನಾಚಿಕೆಗೆಟ್ಟವರಾಗುತ್ತಾರೆಯೇ?" ಎಂಬ ಮಾತುಗಳಿಂದ ಮರ್ಮಭೇದಕವಾಗುವಂತೆ ತೀವ್ರವಾದ ನಾಚಿಕೆಗೆ ಈಡಾಗುವಂತೆ ಮಾಡಿದನು. | |
| 24. | **ಕ್ರಿಯಾ ಸ್ವಾತಂತ್ರ್ಯ ಎಂದರೇನು?**<br>**ಉತ್ತರ:** ಕ್ರಿಯಾ ಸ್ವಾತಂತ್ರ್ಯವೆಂದರೆ, ತನಗೆ ಇಷ್ಟ ಬಂದ ಕೆಲಸ ಮಾಡಲು ವ್ಯಕ್ತಿಗೆ | |

| | | |
|---|---|---|
| | ಅವಕಾಶವಿರುವುದು. ಅದು ಔಪಚಾರಿಕವಾಗಿ, ವಾಸ್ತವಿಕವಾಗಿ ಜಾರಿಯಲ್ಲಿರಬೇಕು. ನಿರ್ದಿಷ್ಟ ಕಾರ್ಯಗಳನ್ನು ಮಾಡಲು ಇರುವ ಪರಿಣಾಮಕಾರಿಯಾದ ಸಾಮರ್ಥ್ಯವಾಗಬೇಕು. ಶೋಷಣೆ ಎಲ್ಲಿ ಇಲ್ಲವಾಗಿದೆಯೋ ಒಂದು ವರ್ಗವು ಇನ್ನೊಂದು ವರ್ಗವನ್ನು ತುಳಿಯುತ್ತಿಲ್ಲವೋ, ಎಲ್ಲಿ ನಿರುದ್ಯೋಗವಿಲ್ಲವೋ, ಬಡತನವಿಲ್ಲವೋ. ಎಲ್ಲಿ ತನ್ನ ಕೆಲಸದ ಫಲವಾಗಿ ತನ್ನ ಕೆಲಸ, ಮನೆ, ಆಹಾರಗಳನ್ನು ಕಳೆದುಕೊಂಡು ಬಿಡುವ ಭೀತಿ ವ್ಯಕ್ತಿಗೆ ಇರುವುದಿಲ್ಲವೋ ಅಲ್ಲಿ ನಿಜವಾದ ಕ್ರಿಯಾ ಸ್ವಾತಂತ್ರ್ಯ ಇದೆ ಎಂದು ಹೇಳಬಹುದು. | |
| **25.** | **ಭಗತ್ ಸಿಂಗ್, ಜಲಿಯನ್ ವಾಲಾಬಾಗ್‌ನ ಮಣ್ಣಿನ ಕುರಿತು ತನ್ನ ತಂಗಿಗೆ ಏನೆಂದು ಹೇಳಿದನು?**<br>**ಉತ್ತರ :** "ಇದು ಬಹಳ ಪೂಜ್ಯನೀಯವಾದ ಮಣ್ಣು, ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಹುತಾತ್ಮರಾದವರ ರಕ್ತದಿಂದ ಈ ಮಣ್ಣು ಒದ್ದೆಯಾಗಿದೆ" ಎಂದು ಭಗತ್ ಸಿಂಗ್ ತನ್ನ ತಂಗಿಗೆ ಹೇಳುತ್ತಾನೆ. | |
| **26.** | **ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸುಗಳು ಏಕೆ ಮರುಗಿವೆ? ತಿಳಿಸಿ.**<br>**ಉತ್ತರ:** ಆಚರಣೆಯ ಶ್ರದ್ಧೆ ಮರೆಯಾಗಿ ಖರೀದಿ ವಿಜೃಂಭಿಸಿದೆ! ಅಷ್ಟೇಕೆ, ರಾತ್ರಿ ಹಗಲಾಗಿಸುವ ವಿದ್ಯುತ್ ದೀಪಾಲಂಕಾರದಲ್ಲಿ ಪರದೇಶಿ ಚೈನಾ ಬಲ್ಬ್ ಮೆರೆದಿದೆ! ಆದ್ದರಿಂದ ಆಗ ಕರ್ಪೂರಕ್ಕೆ ಕಾದಾಡಿದ ಮನಸ್ಸುಗಳು ಮರುಗಿವೆ. | |
| **27.** | **ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು?**<br>**ಉತ್ತರ:** ಪಶ್ಚಿಮ ಘಟ್ಟದ ಕಾಡುಗಳಲ್ಲಿ ತೊಡಕಲುಕುಡಿ ಎಂಬ ಬೂದು ಬಣ್ಣದ ಗಿಡದ ಎಳೆಯ ಕುಡಿ ಸಂಗ್ರಹಿಸಿ, ಒಣಗಿಸಿ ಡಬ್ಬದಲ್ಲಿ ಶೇಖರಿಸಿಡಲಾಗುತ್ತಿತ್ತು. ಒಣಗಿದ ಕುಡಿಯನ್ನು ಎಣ್ಣೆಯನ್ನು ಅದ್ದಿ ನಿತ್ಯ ಆರತಿಗೆ ಬಳಸಲಾಗುತ್ತಿತ್ತು. ಇದು ಎಣ್ಣೆಯನ್ನು ಹತ್ತಿಯಂತೆ ಹೀರಿಕೊಂಡು ದೀಪ ಉರಿಯಲು ಸಹಾಯಕವಾಗಿತ್ತು. ನಾಗಸಂಪಿಗೆ ಬೀಜಗಳನ್ನು ಕುಟ್ಟಿ ಚಿಕ್ಕ ಚಿಕ್ಕ ಉಂಡೆಗಳನ್ನು ಕಟ್ಟಿ ಉರಿಸಲಾಗುತ್ತಿತ್ತು. ಇದಲ್ಲದೆ ಅಡಿಕೆ ತೋಟಗಳಂಚಿನಲ್ಲಿ ಬೆಳೆಯುತ್ತಿದ್ದ ಜವಾರಿ ಹತ್ತಿ ಗಿಡಗಳ ಹತ್ತಿಯನ್ನು ದೀಪಕ್ಕೆ ಬಳಸುವ ಮೂಲಕ ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಪರಿಹರಿಸಿಕೊಳ್ಳಲಾಯಿತು. | |
| **V.** | **ಕೆಳಗಿನ ಕವಿ/ ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**<br>**ಕಾಲ, ಸ್ಥಳ – 1 ಅಂಕ**<br>**ಕೃತಿಗಳು, ಪ್ರಶಸ್ತಿಗಳು/ಬಿರುದುಗಳು – 1 ಅಂಕ**<br>**ವಾಕ್ಯರೂಪ, ಭಾಷಾ ಶೈಲಿ – 1 ಅಂಕ** | **3 x 2 = 6** |

| | | |
|---|---|---|
| **28.** | **ಶಿವಕೋಟ್ಯಾಚಾರ್ಯ**<br>ಇವರು ಕ್ರಿ.ಶ. ಸುಮಾರು 10 ನೇ ಶತಮಾನದ ಆದಿಭಾಗದಲ್ಲಿ [ಕ್ರಿ.ಶ. 920] ಕೋಗಳಿನಾಡಿನಲ್ಲಿ ಜೀವಿಸಿದ್ದರು. ಇವರು 'ವಡ್ಡಾರಾಧನೆ' ಎಂಬ ಗದ್ಯಕಾವ್ಯವನ್ನು ರಚಿಸಿದ್ದಾರೆ. ಇದು ಉಪಲಬ್ದ ಕನ್ನಡದ ಮೊದಲ ಗದ್ಯಗ್ರಂಥವಾಗಿದೆ. ಇದರಲ್ಲಿ ಜೈನಧರ್ಮಕ್ಕೆ ಸೇರಿದ 19 ಕಥೆಗಳಿವೆ. ಅನೇಕ ಉಪಕಥೆಗಳು ಇದರಲ್ಲಿವೆ. ಇದಕ್ಕೆ 'ಉಪಸರ್ಗ ಕೇವಲಿಗಳ ಕಥೆ' ಎಂಬ ಹೆಸರೂ ಇದೆ. | |
| **29.** | **ಕುಮಾರವ್ಯಾಸ**<br>ಕುಮಾರವ್ಯಾಸನು ಕ್ರಿ.ಶ. **1430**ರಲ್ಲಿ ಗದಗ ಪ್ರಾಂತ್ಯದ **ಕೋಳಿವಾಡ**ದಲ್ಲಿ ಜನಿಸಿದನು. ಇವರು ಕನ್ನಡ ಭಾರತ, ಗದುಗಿನ ಭಾರತ, ಕುಮಾರವ್ಯಾಸ ಭಾರತ ಎಂಬ ಹೆಸರುಗಳಿಂದ ಜನಪ್ರಿಯವಾಗಿರುವ **'ಕರ್ಣಾಟ ಭಾರತ ಕಥಾಮಂಜರಿ'** ಮತ್ತು **'ಐರಾವತ'** ಎಂಬ ಗ್ರಂಥಗಳನ್ನು ರಚಿಸಿದ್ದಾರೆ.<br>ಈತನು ರೂಪಕ ಅಲಂಕಾರವನ್ನು ನಿರರ್ಗಳವಾಗಿ ಪ್ರಯೋಗಿಸಿರುವುದರಿಂದ **'ರೂಪಕ ಸಾಮ್ರಾಜ್ಯ ಚಕ್ರವರ್ತಿ'** ಎಂಬ ಬಿರುದು ಪಡೆದಿದ್ದಾನೆ. | |
| **VI.** | **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.**<br>**ಅಂಕ ಸೂಚಿ: ಪ್ರಸ್ತಾರ ಹಾಕುವುದು – 1 ಅಂಕ**<br>**ಗಣ ವಿಭಾಗ – 1 ಅಂಕ**<br>**ಛಂದಸ್ಸಿನ ಹೆಸರು – 1 ಅಂಕ** | **3 x 1 = 3** |
| **30.** | **ತಳವೆಳಗಾಗೆ ಕಟ್ಟಿಸದೆ ಮಾಣ್ದೊಡೆ ಕೆಮ್ಮನೆ ಮೀಸೆವೊತ್ತೆನೇ** | |

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| ∪∪∪ | ∪–∪ | –∪∪ | ∪ – ∪ | ∪–∪ | ∪ – ∪ | – ∪ – |
| ತಳವೆ | ಳಗಾಗೆ | ಕಟ್ಟಿಸ | ದೆಮಾಣ್ದೊ | ಡೆಕೆಮ್ಮ | ನೆ ಮೀಸೆ | ವೊತ್ತೆನೇ |

**ಛಂದಸ್ಸು – ಚಂಪಕ ಮಾಲಾ ವೃತ್ತ**

| | | |
|---|---|---|
| **VII.** | **ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ**<br>**ಅಂಕಸೂಚಿ: ಅಲಂಕಾರದ ಹೆಸರು – 1 ಅಂಕ**<br>**ಲಕ್ಷಣ ಬರೆಯುವುದು – 1 ಅಂಕ**<br>**ಅಂಶಗಳನ್ನು ಗುರುತಿಸಿ ಸಮನ್ವಯಗೊಳಿಸುವುದು – 1 ಅಂಕ** | **3 x 1 = 3** |

**31.** “ಭೀಮದುರ್ಯೋಧನರು ಮದಗಜಗಳಂತೆ ಹೋರಾಡಿದರು”

**ಅಲಂಕಾರ** : ಉಪಮಾಲಂಕಾರ

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯಸಂಪತ್ತನ್ನು ಹೋಲಿಸಿ ವರ್ಣಿಸಿದರೆ ಅದು ‘ಉಪಮಾಲಂಕಾರ’.

**ಉಪಮೇಯ** : ಭೀಮ ದುರ್ಯೋಧನರು

**ಉಪಮಾನ** : ಮದಗಜಗಳು

**ಉಪಮಾ ವಾಚಕ** : ಅಂತೆ

**ಸಮಾನ ಧರ್ಮ** : ಹೋರಾಡುವುದು

**ಸಮನ್ವಯ** : ಇಲ್ಲಿ ಉಪಮೇಯವಾದ ಭೀಮದುರ್ಯೋಧನರನ್ನು ಉಪಮಾನವಾದ ಮದಗಜಗಳಿಗೆ ಹೋಲಿಸಿ ವರ್ಣಿಸಲಾಗಿದೆ. ಹಾಗಾಗಿ ಇದು ಉಪಮಾ ಅಲಂಕಾರವಾಗಿದೆ.

**3 x 1 = 3**

**VIII.** **ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.**

**ಅಂಕ ಸೂಚಿ: ಗಾದೆಯ ಮಹತ್ವದ ವಿವರಣೆ – 1 ಅಂಕ**

**ಉದಾಹರಣೆಯೊಂದಿಗೆ ಅರ್ಥವಿವರಣೆ – 1 ಅಂಕ**

**ಭಾಷಾ ಶೈಲಿ ಮತ್ತು ಪದಬಂಧ – 1 ಅಂಕ**

**32.** **ಮನಸ್ಸಿದ್ದರೆ ಮಾರ್ಗ**

ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ “ವೇದ ಸುಳ್ಳಾದರೂ ಗಾದೆ ಸುಳ್ಳಾಗದು” ಎಂಬ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ “ಮನಸ್ಸಿದ್ದರೆ ಮಾರ್ಗ” ಎಂಬ ಗಾದೆಯೂ ಸಹ ಒಂದಾಗಿದೆ.

ಯಾವುದೇ ಸಾಧನೆಯನ್ನು ಮಾಡಬೇಕಾದುದು ಮನಸ್ಸು ಮಾಡಬೇಕು. ಈ ಕಾರ್ಯವನ್ನು ಮಾಡಲೇಬೇಕು ಎಂದು ಪ್ರಯತ್ನ ಮಾಡಲು ಹೊರಟಾಗ ಕಾರ್ಯವನ್ನು ಸಾಧಿಸುವ ಮಾರ್ಗವು ತನ್ನಿಂದ ತಾನೇ ತೋರುತ್ತದೆ. “ಕೈಯಲ್ಲಿ ಆಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ; ಮನಸ್ಸೊಂದಿದ್ದರೆ ಮಾರ್ಗವುಂಟು ಕೆಚ್ಚೆದೆ ಇರಬೇಕು ಎಂದೂ” ಎನ್ನುವ ಹಾಡನ್ನು ಮರೆಯಬಾರದು. ವಿದ್ಯಾರ್ಥಿಯು ಯಶಸ್ಸನ್ನು ಪಡೆಯಬೇಕು. ಎಂಬ ಮನಸ್ಸಿನಿಂದ ಪ್ರಯತ್ನಶೀಲನಾದರೆ; ಮನಸ್ಸಿಟ್ಟು ಅಧ್ಯಯನ ಮಾಡಿದರೆ ಖಂಡಿತ ಅವನ ಗುರಿಯನ್ನು ತಲುಪುವ ಮಾರ್ಗಗಳು ಕಾಣತೊಡಗುತ್ತವೆ ಎಂಬುದನ್ನು ಈ ಗಾದೆಯು ವಿವರಿಸುತ್ತದೆ.

**ಅಥವಾ**

**ಗುಣ ನೋಡಿ ಗೆಳೆತನ ಮಾಡು**

ಗಾದೆ ವೇದಗಳಿಗೆ ಸಮಾನ, ಗಾದೆ ಹಿರಿಯರು ಮತ್ತು ಜನಪದರ ಜೀವನದ ಅನುಭವದ ನುಡಿಮುತ್ತುಗಳು. ಗಾದೆಗಳು ಆಕಾರದಲ್ಲಿ ವಾಮನನಾದರೂ ಅರ್ಥದಲ್ಲಿ

| | | |
|---|---|---|
| | ತ್ರಿವಿಕ್ರಮನಂತೆ. ಗಾದೆಗಳು ಜೀವನದನುಭವಕ್ಕೆ ಹಿಡಿದ ಕನ್ನಡಿಯಾಗಿವೆ. ಆದುದರಿಂದ ಗಾದೆಗಳು ಸತ್ಯಕ್ಕೆ ಬಹಳ ಹತ್ತಿರವಾಗಿವೆ. **"ಗುಣ ನೋಡಿ ಗೆಳೆತನ ಮಾಡು"** ಎಂಬ ಈ ಮೇಲಿನ ಗಾದೆಯು ಪ್ರಸಿದ್ಧವಾಗಿದೆ.<br><br>ಜೀವನದಲ್ಲಿ ಯಾವುದೇ ವ್ಯಕ್ತಿ ಅಥವಾ ವಸ್ತುಗಳಿಗೆ ಗುಣ ಮುಖ್ಯ . ಗುಣವಿಲ್ಲದಿದ್ದರೆ ಯಾವುದೇ ವ್ಯಕ್ತಿಯ ಸ್ನೇಹ ಮಾಡಲಾಗದು. ಗುಣಮಟ್ಟವಿಲ್ಲದ ವಸ್ತುಗಳನ್ನು ಕೂಡ ಕೊಂಡುಕೊಳ್ಳಲಾಗದು. ಗುಣಮಟ್ಟವಿರುವ ವಸ್ತುಗಳನ್ನು ಬಯಸುವಾಗ ಗುಣವಂತನಾದ ಗೆಳೆಯನನ್ನು ಬಯಸುವುದು ಸಹಜ.ಆದ್ದರಿಂದ ಗೆಳೆತನ ಮಾಡುವಾಗ ಗುಣ ನೋಡಿ ಗೆಳೆತನ ಮಾಡಬೇಕು. **"ಸಜ್ಜನರ ಸಂಘ ಹೆಜ್ಜೇನು ಸವಿದಂತೆ"** ಎಂಬ ಮಾತಿನಂತೆ ಗುಣವಂತನಾದ ಗೆಳೆಯನ ಸಹವಾಸ ಅಮೃತವಿದ್ದಂತೆ ಅದರ ಸವಿರುಚಿ ಬಲ್ಲವನೆ ಬಲ್ಲ. ಗುಣವಂತರಾದ ಗೆಳೆಯರಲ್ಲಿ ಚಂಚಲತೆ ಇರುವುದಿಲ್ಲ, ವಂಚನೆಯೂ ಇರುವುದಿಲ್ಲ. ಆದ್ದರಿಂದ ನೀವು ಗುಣವಂತರಾಗಿ ಮತ್ತು ಗುಣವಂತರಾದವರನ್ನು ಗೆಳೆಯರನ್ನಾಗಿ ಮಾಡಿಕೊಂಡು ಚೆನ್ನಾಗಿರಬಹುದು. | |
| **IX.** | **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**<br>**ಅಂಕ ಸೂಚಿ: ಕರ್ತೃ, ಆಕರ ಕೃತಿ ಮತ್ತು ಪಠ್ಯದ ಹೆಸರು – 1 ಅಂಕ**<br>**ಸಂದರ್ಭದ ವಿವರಣೆ – 1 ಅಂಕ**<br>**ಸ್ವಾರಸ್ಯ ಮತ್ತು ಶೈಲಿ – 1 ಅಂಕ** | **3x6 = 18** |
| **33.** | **"ನಾಚುತಿಹೆನೀ ಪೂಜ್ಯೆಯೀ ನಲುಮೆಯಿಂದ."**<br>**ಆಯ್ಕೆ:–** ಈ ವಾಕ್ಯವನ್ನು **ಪು.ತಿ. ನರಸಿಂಹಾಚಾರ್** ಅವರು ರಚಿಸಿರುವ **'ಶಬರಿ'** ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಗದ್ಯಭಾಗದಿಂದ ಆರಿಸಲಾಗಿದೆ.<br>**ಸಂದರ್ಭ:** ತನ್ನಿಂದ ಇನಿತು ಉಪಕಾರವಿಲ್ಲದಿದ್ದರು ತನ್ನನ್ನು ಪ್ರೀತಿಯಿಂದ ನೆನೆಯುತ್ತ ಹಂಬಲಿಸುತ್ತಿರುವ ವೃದ್ಧೆ ಶಬರಿಯನ್ನು ಕಂಡ ಸಂದರ್ಭದಲ್ಲಿ ರಾಮನು ಲಕ್ಷ್ಮಣನಿಗೆ ಈ ಮಾತನ್ನು ಹೇಳುತ್ತಾನೆ.<br>**ಸ್ವಾರಸ್ಯ:** ಪೂಜ್ಯೆಯಾದ ಶಬರಿಯು ತನ್ನನ್ನು ಪ್ರೀತಿಯಿಂದ ನೆನೆಯುತ್ತ, ಬರುವಿಕೆಗಾಗಿ ಭಕ್ತಿಯಿಂದ ಹಂಬಲಿಸುತ್ತ ಇರುವ ದೃಶ್ಯವನ್ನು ನೋಡಿ ರಾಮನು "ಅವಳ ಅನುರಾಗವನ್ನು ಕಂಡು ನಾಚಿದೆನು" ಎಂದು ಹೇಳುವುದು ಸ್ವಾರಸ್ಯಪೂರ್ಣವಾಗಿದೆ. | |
| **34.** | **"ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ."**<br>**ಆಯ್ಕೆ:** ಈ ವಾಕ್ಯವನ್ನು ಶ್ರೀ **ಡಿ.ಎಸ್. ಜಯಪ್ಪಗೌಡ** ಅವರು ರಚಿಸಿರುವ **'ದಿವಾನ್ ಸರ್ ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **'ಭಾಗ್ಯಶಿಲ್ಪಿ ಸರ್. ಎಂ. ವಿಶ್ವೇಶ್ವರಯ್ಯ'** ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.<br>**ಸಂದರ್ಭ:** ಪಂಡಿತ್ ಜವಾಹರಲಾಲ್ ನೆಹರು ಅವರು ಬೆಂಗಳೂರಿನಲ್ಲಿ ನಡೆದ ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಿ, ಪ್ರಧಾನ ಭಾಷಣ ಮಾಡಿದ ಸಂದರ್ಭದಲ್ಲಿ ವಿಶ್ವೇಶ್ವರಯ್ಯ ಅವರನ್ನು ಕುರಿತು ಈ ಮಾತುಗಳನ್ನು ಹೇಳುತ್ತಾರೆ. | |

**ಸ್ವಾರಸ್ಯ:** ವಿಶ್ವೇಶ್ವರಯ್ಯ ಅವರು 'ಮಾತಿಗಿಂತ ಕೃತಿ ಲೇಸು' ಎಂದು ತಿಳಿದು ಕಾರ್ಯ ಪ್ರವೃತ್ತರಾಗಿ ಆದರ್ಶಪ್ರಾಯರಾಗಿದ್ದರು ಎನ್ನುವುದನ್ನು ಈ ಮಾತಿನ ಮೂಲಕ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಪಡಿಸಲಾಗಿದೆ.

**35.** **"ದಯವಿಟ್ಟು ಬಾಗಿಲು ತೆಗೆಯಿರಿ ನಾನು ಗಾಯಗೊಂಡಿದ್ದೇನೆ"**

**ಆಯ್ಕೆ:** ಈ ವಾಕ್ಯವನ್ನು **ಶ್ರೀಮತಿ ಸಾರಾ ಅಬೂಬಕರ್** ಅವರು ರಚಿಸಿರುವ **'ಚಪ್ಪಲಿಗಳು'** ಕಥಾ ಸಂಕಲದಿಂದ ಆಯ್ದ **'ಯುದ್ಧ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ:** ಯುದ್ಧವಿಮಾನ ಸ್ಫೋಟದಿಂದ ಗಾಯಗೊಂಡು ಸಮುದ್ರಕ್ಕೆ ಬಿದ್ದು, ಕತ್ತಲಿನಲ್ಲೇ ಈಜಿ ದಡ ಸೇರಿ, ದಡದಲ್ಲೇ ಇದ್ದ ಮಂದ ಬೆಳಕಿನಲ್ಲಿ ಮನೆಯ ಬಳಿಗೆ ತೆವಳುತ್ತ ಬಂದು ಬಾಗಿಲನ್ನು ಬಡಿಯುವ ಸಂದರ್ಭದಲ್ಲಿ ಸೇನಾವೈದ್ಯನಾದ ರಾಹಿಲನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ಸೇನಾವೈದ್ಯನಾದ ರಾಹಿಲನ ದಯನೀಯ ಸ್ಥಿತಿ, ಹೇಗಾದರೂ ಸರಿ ರಕ್ಷಣೆಯನ್ನು ಪಡೆದು ಜೀವ ಉಳಿಸಿಕೊಳ್ಳಬೇಕೆಂಬ ಹಂಬಲ ಈ ಮಾತಿನಲ್ಲಿ ಅಭಿವ್ಯಕ್ತಗೊಂಡಿದೆ.

**36.** **"ಮುಂಗಾರಿನ ಮಳೆಯಾಗೋಣ."**

**ಆಯ್ಕೆ:** ಈ ವಾಕ್ಯವನ್ನು ಕವಿ **ಶ್ರೀ ಜಿ.ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ.

**ಸಂದರ್ಭ:** ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ದೃಢಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**ಸ್ವಾರಸ್ಯ:** "ನಾವು ಮುಂಗಾರಿನ ಮಳೆಯಂತೆ ಪರಿಸರ ಸಂರಕ್ಷಿಸುವ ಸಂಕಲ್ಪ ಕೈಗೊಳ್ಳುವುದರಿಂದ ನದೀಜಲಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬಹುದು" ಎಂದು ಕವಿಗಳು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ.

**37.** **"ಬೇರೆ ಬಣ್ಣವನೆ ಕಾಣೆ"**

**ಆಯ್ಕೆ:–** ಈ ವಾಕ್ಯವನ್ನು **'ಕುವೆಂಪು'** ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ **ಕುಪ್ಪಳ್ಳಿ ವೆಂಕಟಪ್ಪ** ಪುಟ್ಟಪ್ಪ ಅವರು ರಚಿಸಿರುವ **'ಪಕ್ಷಿಕಾಶಿ'** ಕವನ ಸಂಕಲನದಿಂದ ಆಯ್ದ **'ಹಸುರು'** ಎಂಬ ಕವನದಿಂದ ಆರಿಸಲಾಗಿದೆ.

**ಸಂದರ್ಭ:–** ಕುವೆಂಪು ಅವರು ಕುಪ್ಪಳ್ಳಿಯ ಕವಿಶೈಲದಲ್ಲಿ ಆಶ್ವಯುಜ ಮಾಸದ ನವರಾತ್ರಿಯಲ್ಲಿ ಕುಳಿತು, ಆನಂದದಿಂದ ಸವಿದ ಪ್ರಕೃತಿಯ ಹಚ್ಚಹಸುರಿನ ಸೌಂದರ್ಯದ ವರ್ಣನೆಯನ್ನು ಮಾಡುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:–** "ಆಶ್ವಯುಜ ಮಾಸದ ನವರಾತ್ರಿಯಲ್ಲಿ ಮಲೆನಾಡಿನಲ್ಲಿ ಭೂಮಿಯ ತುಂಬ ಹೊಸ ಹಸುರು ಬಣ್ಣದ ಮಕಮಲ್ಲಿನ ಜಮಖಾನೆಯನ್ನು ಹರಡಿಸಿ, ಭೂದೇವಿಯ ಮೈಮುಚ್ಚಿದಂತೆ ಕಾಣುತ್ತಿದೆ. ಆದ್ದರಿಂದ ಇಲ್ಲಿ ಬೇರೆ ಬಣ್ಣಗಳು ಕಾಣುತ್ತಿಲ್ಲ" ಎಂಬುದನ್ನು ಈ ನುಡಿ ಅರ್ಥಪೂರ್ಣವಾಗಿ ಅಭಿವ್ಯಕ್ತಿಪಡಿಸುತ್ತದೆ.

| | | |
|---|---|---|
| **38.** | **"ರಘೂದ್ವಹನ ಸೊಲ್ಗೇಳಿ ನಮಿಸಲ್"**<br>**ಆಯ್ಕೆ:–** ಈ ವಾಕ್ಯವನ್ನು **ಕವಿ ಲಕ್ಷ್ಮೀಶನು** ರಚಿಸಿರುವ **'ಜೈಮಿನಿ ಭಾರತ'** ಮಹಾಕಾವ್ಯದಿಂದ ಆಯ್ದ **'ವೀರಲವ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.<br>**ಸಂದರ್ಭ:** ಶ್ರೀರಾಮನ ಅಶ್ವಮೇಧ ಯಾಗದ ಯಜ್ಞಾಶ್ವವು ಸಂಚರಿಸಿದ ಕಡೆಯಲ್ಲೆಲ್ಲ ರಾಜರುಗಳಿಂದ ಅದಕ್ಕೆ ದೊರೆತ ಭವ್ಯ ಸ್ವಾಗತ ಹಾಗೂ ನೀಡಿದ ಗೌರವವನ್ನು ಕುರಿತು ವರ್ಣಿಸುವ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ.<br>**ಸ್ವಾರಸ್ಯ:** ಶ್ರೀರಾಮನ ಹೆಸರನ್ನು ಕೇಳಿಯೇ ಪರಾಕ್ರಮಿಗಳಾದ ರಾಜರುಗಳು ಗೌರವದಿಂದ ನಮಿಸಿ ಶರಣಾಗಿ ಯಜ್ಞಾಶ್ವವು ಮುಂದೆ ಸಂಚರಿಸಲು ಅನುವು ಮಾಡಿಕೊಟ್ಟರು ಎಂದು ಸಾಂದರ್ಭಿಕ ಅಂಶವನ್ನು ತಿಳಿಸಲಾಗಿದೆ. | |
| **X.** | **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.**<br>**ಅಂಕಸೂಚಿ: ತಪ್ಪಿಲ್ಲದೇ ಬರೆದ ಪ್ರತಿ ಪೂರ್ಣ ಸಾಲಿಗೆ – 1 ಅಂಕ** | **4 x 1= 4** |
| **39.** | ನೀಲಮೇಘಮಂಡಲ–ಸಮ ಬಣ್ಣ<br>ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ<br>ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು<br>ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ<br>ಹಕ್ಕಿ ಹಾರುತಿದೆ ನೋಡಿದಿರಾ?<br>**ಅಥವಾ**<br>ಯುಗ–ಯುಗಗಳ ಹಣೆ ಬರೆಹವ ಒರಸಿ<br>ಮನ್ವಂತರಗಳ ಭಾಗ್ಯವ ತೆರೆಸಿ<br>ರೆಕ್ಕೆಯ ಬೀಸುತ ಚೇತನಗೊಳಿಸಿ<br>ಹೊಸಗಾಲದ ಹಸುಮಕ್ಕಳ ಹರಸಿ<br>ಹಕ್ಕಿ ಹಾರುತಿದೆ ನೋಡಿದಿರಾ? | |
| **XI.** | **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**<br>**ಅಂಕ ಸೂಚಿ: ವಿಷಯಾಂಶಕ್ಕೆ – 3 ಅಂಕ**<br>**ಅಡಕಗೊಂಡ ಮೌಲ್ಯ ಗುರುತಿಸುವುದು,**<br>**ಪದಬಂಧ ಮತ್ತು ಭಾಷಾ ಶೈಲಿ – 1 ಅಂಕ** | **4 x 1= 4** |
| **40.** | ಸಿಟ್ಟೆಲಿ ಮುಂಗೈ ಕಟ್ಟನೆ ಕಡಕೊಂಡ, ಹುಕುಮ ಕೊಟ್ಟ ಸಾಹೇಬಾಗ<br>ಕುದರಿ ಮಂದಿ ಕೂಡಿ ಮುಟ್ಟಿತೊ ಹಲಗಲಿ ತಳದ ಮ್ಯಾಗ<br>ಒಳಗಿನ ಮಂದಿ ಗುಂಡು ಹೊಡಿದರೊ ಮುಂಗಾರಿ ಸಿಡಿಲ ಸಿಡಿದ್ಹಾಂಗ | |

| | | |
|---|---|---|
| | ಹೊರಗಿನ ಮಂದಿ ಗುಂಡ ಹತ್ತಿ ಸರಿದು ನಿಂತರೊ ಹಿಡಿದು ದಂಗ<br>ಕಾಗದ ಬರೆದು ಕಳುವ್ಯಾರೆ ಬೇಗ, ದಂಡು ಬರಲೆಂತ ಹೀಂಗ<br>ದಂಡ ಬಂದಿತೊ ತಯಾರಾಗಿ ಜಲದ ಮಾಡಿ ಹಲಗಲಿಗಿ<br><br>ಈ ಪದ್ಯಭಾಗವನ್ನು ವನ್ನು **ಡಾ. ಬಿ. ಎಸ್. ಗದ್ದಗಿ ಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿಯ ಬೇಡರು'** ಎಂಬ ಲಾವಣಿ ಯಿಂದ ಆರಿಸಲಾಗಿದೆ.<br><br>ಈ ಸುದ್ದಿ ತಿಳಿಯುತ್ತಿದಂತೆಯೇ ಲೆಫ್ಟಿನೆಂಟ್ ಕರ್ನಲ್ ಜೆ. ಬಿ. ಸೆಟೆನ್‌ಕರ್ ಸಾಹೇಬನು ಬಹುಕೋಪಗೊಂಡು, ಹಲಗಲಿಯ ಮೇಲೆ ದಾಳಿ ಮಾಡುವಂತೆ ಅಶ್ವದಳ ಸೈನಿಕರಿಗೆ ಆದೇಶ ಮಾಡುತ್ತಾನೆ. ಈ ಆದೇಶದಂತೆ ಅಶ್ವದಳವು ಒಟ್ಟಾಗಿ ಹಲಗಲಿ ನೆಲದ ಮೇಲೆ ಬಂದು ದಾಳಿ ಮಾಡತೊಡಗುತ್ತದೆ. ಆಗ ಊರಿನ ಒಳಗಿದ್ದ ಬೇಡರು ಬ್ರಿಟಿಷ್ ಸೈನ್ಯದ ಮೇಲೆ ಮುಂಗಾರಿನ ಸಿಡಿಲು ಸಿಡಿಯುವಂತೆ ಗುಂಡಿನ ಮಳೆಗರೆ ಯುತ್ತಾರೆ. ಇದರಿಂದ ಊರಿನ ಹೊರಗೆ ಇದ್ದ ಬ್ರಿಟಿಷ್ ಸೈನ್ಯವು ಗಾಬರಿಗೊಂಡು ಹಿಂದೆ ಸರಿದು ನಿಲ್ಲುತ್ತದೆ. ಆಗ ಸೈನ್ಯದ ಮುಖ್ಯಸ್ಥನು (ಲೆಫ್ಟಿನೆಂಟ್ ಕರ್ನಲ್ ಜೆ. ಬಿ. ಸೆಟೆನ್‌ಕರ್ ಸಾಹೇಬನು) ಹೆಚ್ಚಿನ ಸೈನ್ಯವನ್ನು ಬೇಗ ಕಳುಹಿಸಬೇಕೆಂದು ತನ್ನ ಮೇಲಧಿಕಾರಿಗೆ ಕಾಗದ ಬರೆಯುತ್ತಾನೆ. ಇದರನ್ವಯ (ಲೆಫ್ಟಿನೆಂಟ್ ಕರ್ನಲ್ ಮಾಲ್ಕಮ್ ಹಾಗೂ ಫಸ್ಟ್ ಅಸಿಸ್ಟಂಟ್ ಮ್ಯಾಜಿಸ್ಟ್ರೇಟ್ ವಿಲಿಯಂ ಹೆನ್ರಿ ಹ್ಯಾವಲಾಕ್ ಮುಖಂಡತ್ವದಲ್ಲಿ) ಹೆಚ್ಚಿನ ಸೈನ್ಯವು ಬಹುಬೇಗ ಸಿದ್ಧವಾಗಿ ಹಲಗಲಿಗೆ ಬರುತ್ತದೆ.<br><br>ಇಲ್ಲಿ ಹಲಗಲಿಯ ಬೇಡರ ವೀರ ಮತ್ತು ಸಾಹಸ ಗುಣಗಳು ಅಭಿವ್ಯಕ್ತಗೊಂಡಿವೆ. ಹಲಗಲಿ ಬೇಡರು ತ್ಯಾಗ ಮತ್ತು ಬಲಿದಾನಗಳ ಮೂಲಕ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಮೌಲ್ಯಯುತ ಸಂದೇಶವು **ಈ ಲಾವಣಿಯಲ್ಲಿ ಅಭಿವ್ಯಕ್ತಗೊಂಡಿದೆ.** | |
| **XII.** | **ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**<br>**ಅಂಕ ಸೂಚಿ: ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ – 3 ಅಂಕ**<br>**ಪದಬಂಧ ಮತ್ತು ಭಾಷಾ ಶೈಲಿ – 1 ಅಂಕ** | **4 x 2= 8** |
| **41.** | **ವೃಕ್ಷ ಸಾಕ್ಷಿ ಪಾಠದಲ್ಲಿ ನೀವು ಮೆಚ್ಚುವ ಪಾತ್ರ ಯಾವುದು? ಏಕೆ?**<br><br>**ಉತ್ತರ:** 'ವೃಕ್ಷಸಾಕ್ಷಿ' ಪಾಠದಲ್ಲಿ ನಾನು ಮೆಚ್ಚುವ ಪಾತ್ರ ಧರ್ಮಬುದ್ಧಿಯದು. ಧರ್ಮಬುದ್ಧಿಯು ವ್ಯಾಪಾರಿ ಆದರೂ ಕಪಟವರಿಯದ ಸತ್ಯವಂತ, ಆಧ್ಯಾತ್ಮಿಕ ಮನೋಭಾವವುಳ್ಳವನು. ಸೂರ್ಯೋದಯಕ್ಕೆ ಮೊದಲೇ ಎದ್ದು ನಿತ್ಯಕರ್ಮ ಮುಗಿಸಿ ದೇವರು, ಗುರುಗಳು, ವೇದಾಧ್ಯಯನ ನಿರತರನ್ನು ಪೂಜಿಸುವವನು. ದುಷ್ಟಬುದ್ಧಿಯು ಮರದ ಪೊಟರೆಯೊಳಗೆ ತಂದೆಯನ್ನು ಕೂರಿಸಿ ಧರ್ಮಬುದ್ಧಿಯೇ ಚಿನ್ನದ ನಾಣ್ಯಗಳನ್ನು ಕದ್ದನೆಂದು ಹೇಳಿಸಿದಾಗಲೂ ಧರ್ಮಬುದ್ಧಿ ಕೂಗಾಡಲಿಲ್ಲ, ಶಾಂತನಾಗಿಯೇ ಇದ್ದನು. ಅವನಿಗೆ ದೇವರ ಮೇಲೆ ನಂಬಿಕೆ. | |

| | | |
|---|---|---|
| | ದೇವರಿದ್ದರೆ ಸತ್ಯವೇ ಹೊರಬರಬೇಕಿತ್ತು ಎಂಬುದು ಅವನ ಅನಿಸಿಕೆ. ಮರವನ್ನು ಪರೀಕ್ಷಿಸಬೇಕೆಂದು ಮರವನ್ನು ಸುತ್ತಿದಾಗ ಮನುಷ್ಯ ಸಂಚಾರವಾಗಿರುವುದನ್ನು ಬುದ್ಧಿವಂತಿಕೆಯಿಂದ ಕಂಡುಕೊಂಡನು. ದುಷ್ಟಬುದ್ಧಿಗೆ ಬುದ್ಧಿ ಕಲಿಸುವ ಚಾಣಾಕ್ಷತನವನ್ನು ಮೆರೆಯುತ್ತಾನೆ. **"ಸುಳ್ಳನ್ನು ಸುಳ್ಳಿನಿಂದಲೇ ; ಮುಳ್ಳನ್ನು ಮುಳ್ಳಿನಿಂದಲೇ ಜಯಿಸುವಂತೆ"** ಧರ್ಮಬುದ್ಧಿಯು ತಂತ್ರಬುದ್ಧಿಯಿಂದ ತನಗೆ ಒದಗಿದ್ದ ಕೆಟ್ಟ ಹೆಸರನ್ನು ಹೋಗಲಾಡಿಸಿಕೊಂಡನು. ಆದ್ದರಿಂದ ಸತ್ಯವಂತನಾದ ಧರ್ಮಬುದ್ಧಿ ನನ್ನ ಮೆಚ್ಚುಗೆಗೆ ಪಾತ್ರನಾಗುತ್ತಾನೆ.<br><br>**ಅಥವಾ**<br>**ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗುಬಾಣವಾದ ಬಗೆಯನ್ನು ತಿಳಿಸಿ.**<br>**ಉತ್ತರ:–** ದುಷ್ಟಬುದ್ಧಿಯು ಧರ್ಮಬುದ್ಧಿಯೊಡನೆ ಸೇರಿ ವ್ಯಾಪಾರ ಮಾಡಿ, ಲಾಭ ಗಳಿಸಿದ್ದ ಚಿನ್ನದ ನಾಣ್ಯಗಳನ್ನು ತಾನೇ ದೋಚಿ, ಕಳ್ಳತನವನ್ನು ಧರ್ಮಬುದ್ಧಿಯ ಮೇಲೆ ಹೊರಿಸಿ, ಇದಕ್ಕೆ ವಟವೃಕ್ಷವೇ ಸಾಕ್ಷಿ ಎಂದು ಧರ್ಮಾಧಿಕಾರಿಗಳ ಮುಂದೆ ಹೇಳುತ್ತಾನೆ. ಮರದಿಂದ ಸಾಕ್ಷಿ ಹೇಳಿಸಲು ತನ್ನ ತಂದೆಯನ್ನೇ ಪೊಟರೆಯಲ್ಲಿ ಕೂರಿಸಿ, ಅವನಿಂದ ಧರ್ಮಬುದ್ಧಿಯೇ ಚಿನ್ನದ ನಾಣ್ಯಗಳನ್ನು ಕದ್ದನೆಂದು ಸುಳ್ಳನ್ನು ಬಲವಂತದಿಂದ ಹೇಳಿಸುತ್ತಾನೆ. ಧರ್ಮಬುದ್ಧಿಯು ಇಲ್ಲೇನೋ ಮೋಸವಿದೆ ಎಂದು ಅನುಮಾನಗೊಂಡು, ಮರದ ಬಳಿ ಪರೀಕ್ಷಿಸಿ, ಪೊಟರೆಯೊಳಗೆ ಮನುಷ್ಯ ಸಂಚಾರವಾಗಿರುವುದನ್ನು ಕಂಡುಕೊಳ್ಳುತ್ತಾನೆ. ಧರ್ಮಾಧಿಕಾರಿಗಳಿಗೆ ತಾನು ವ್ಯಾಪಾರಿಯ ಮನೋಭಾವದಂತೆ ಸುಳ್ಳು ಹೇಳಿದ್ದಾಗಿ, ಚಿನ್ನದ ನಾಣ್ಯಗಳನ್ನು ತಾನೇ ತೆಗೆದುಕೊಂಡುದ್ದಾಗಿ ತಿಳಿಸಿ, ಈಗ ಆ ಚಿನ್ನದ ನಾಣ್ಯಗಳಿಗೆ ಹಾವು ಸುತ್ತುಕೊಂಡಿದೆ ಎಂದು ಹೇಳಿ, ಚಿನ್ನದ ನಾಣ್ಯಗಳನ್ನು ತೆಗೆಯಲು ಮರದ ಪೊಟರೆಗೆ ಹುಲ್ಲುಕಡ್ಡಿಯಿಟ್ಟು ಬೆಂಕಿ ಇಡುತ್ತಾನೆ. ಪೊಟರೆಗೆ ಹೊಗೆ ತುಂಬಿ ದುಷ್ಟಬುದ್ಧಿಯ ತಂದೆ ಪ್ರೇಮವತಿ ಉಸಿರುಕಟ್ಟಿ ಕೂಗಾಡುತ್ತ ಪೊಟರೆಯಿಂದ ಉರುಳಿ ಪ್ರಾಣಬಿಡುತ್ತಾನೆ. ದುಷ್ಟಬುದ್ಧಿಯ ಕುಟಿಲತೆ ಧರ್ಮಾಧಿಕಾರಿಗಳಿಗೆ ತಿಳಿಯುತ್ತದೆ. ಹೀಗೆ ದುಷ್ಟಬುದ್ಧಿಯ ತಂತ್ರ ಅವನಿಗೆ ತಿರುಗು ಬಾಣವಾಯಿತು. | |
| **42.** | **ಭೀಷ್ಮ ಮತ್ತು ದುರ್ಯೋಧನರ ನಡುವಿನ ಸಂಭಾಷಣೆಯ ಸ್ವಾರಸ್ಯವನ್ನು ವಿವರಿಸಿ.**<br>**ಉತ್ತರ:–** ಭೀಷ್ಮನು ದುರ್ಯೋಧನನನ್ನು ಕುರಿತು "ನೀನು ಒಪ್ಪಿಕೊಳ್ಳುವುದಾದರೆ ಪಾಂಡವರನ್ನು ಒಪ್ಪಿಸಿ, ಸಂಧಿಯನ್ನು ಮಾಡಿ, ಮೊದಲಿನಂತೆಯೇ ಅವರು ನಡೆಯುವ ಹಾಗೆ ಮಾಡುವೆನು. ಇನ್ನು ಅವರು ನಾವು ಹೇಳಿದುದನ್ನು ಒಪ್ಪಿಕೊಳ್ಳದೇ ಮಾತನ್ನು ಮೀರುವವರಲ್ಲ, ನೀನೂ ಕೂಡ ನಾವು ಹೇಳಿದುದನ್ನು ಮೀರದೆ ನಡೆದುಕೊಳ್ಳಬೇಕು" ಎಂದು ಹೇಳುತ್ತಾನೆ. ಆಗ ದುರ್ಯೋಧನನು ಮುಗುಳು ನಕ್ಕು ಭೀಷ್ಮರನ್ನು ಕುರಿತು **"ಅಜ್ಜ, ನಿಮಗೆ ವಂದಿಸಿ, ಆಶೀರ್ವಾದವನ್ನು ಪಡೆದು ಹೋಗುವ ನಿರ್ಧಾರದಿಂದ ಬಂದೆನು"**. ಏನು ಶತ್ರುಗಳೊಡನೆ ಸಂಧಿಯ ಒಪ್ಪಂದವನ್ನು ಮಾಡಿಕೊಳ್ಳಲೆಂದು ಬಂದಿರುವೆನೆ? ಯುದ್ಧದಲ್ಲಿ ನಾನು ಮಾಡಬೇಕಾದ ಕಾರ್ಯ ಯಾವುದು ಹೇಳಿರಿ. ನಾನು ಪಾಂಡವರಲ್ಲಿ ನೆಲಕ್ಕಾಗಿ ಯುದ್ಧ ಮಾಡುವೆನು ಎಂದು ತಿಳಿದಿರುವರೇ; ಛಲಕ್ಕಾಗಿ ಯುದ್ಧ ಮಾಡುವೆನು. ನನ್ನ ಪಾಲಿಗೆ ಇದು ಪಾಳುಭೂಮಿ. ಮಿತ್ರನಾದ ಕರ್ಣನನ್ನು ಕೊಲ್ಲಿಸಿದ ಈ ನೆಲದೊಡನೆ ಮತ್ತೆ ಹೊಸಬಾಳು | |

| | | |
|---|---|---|
| | ಬಾಳುವೆನೇ? ನನ್ನ ಪ್ರೀತಿಯ ಬಂಟನಾದ ಕರ್ಣನನ್ನು, ಪ್ರೀತಿಯ ತಮ್ಮನಾದ ದುಶ್ಯಾಸನನನ್ನು ಕೊಂದ ಅರ್ಜುನ ಭೀಮರು ಇರುವತನಕ ಹಾಗೂ ನನ್ನ ದೇಹದಲ್ಲಿ ಪ್ರಾಣ ಇರುವತನಕ ನಾನು ಸಂಧಿಯನ್ನು ಒಪ್ಪುವುದಿಲ್ಲ. ಮೊದಲು ಅವರಿಬ್ಬರನ್ನು ಕೊಲ್ಲುವೆನು; ಕೊಂದ ಬಳಿಕ ಸಂಧಿ ಮಾಡಿಕೊಳ್ಳುವೆನು. ನನ್ನ ದುಃಖವು ತಣ್ಣಗಾದಾಗ ಪ್ರಸಿದ್ಧನಾದ ಧರ್ಮರಾಯನೊಡನೆ ಸಂಧಿಯನ್ನು ಮಾಡಿಕೊಳ್ಳಲು ಆಗುವುದಿಲ್ಲ ಎಂದು ಹೇಳುವೆನೇ? ಎಂದು ಹೇಳಿದನು.<br><br>**ಅಥವಾ**<br><br>**ದುರ್ಯೋಧನನ ಛಲದ ಗುಣ ಅವನ ಮಾತುಗಳಲ್ಲಿ ವ್ಯಕ್ತವಾಗಿರುವ ಬಗೆಯನ್ನು ವಿವರಿಸಿ.**<br>**ಉತ್ತರ:–** ದುರ್ಯೋಧನನು ಭೀಷ್ಮರನ್ನು ಕುರಿತು "ನಾನು ಪಾಂಡವರಲ್ಲಿ ನೆಲಕ್ಕಾಗಿ ಯುದ್ಧ ಮಾಡುವೆನು ಎಂದು ತಿಳಿದಿರುವರೇ; ಛಲಕ್ಕಾಗಿ ಯುದ್ಧ ಮಾಡುವೆನು. ನನ್ನ ಪಾಲಿಗೆ ಇದು ಪಾಳುಭೂಮಿ. ಮಿತ್ರನಾದ ಕರ್ಣನನ್ನು ಕೊಲ್ಲಿಸಿದ ಈ ನೆಲದೊಡನೆ ಮತ್ತೆ ಹೊಸಬಾಳು ಬಾಳುವೆನೇ? ಅಜ್ಜ, ನನ್ನ ಪ್ರೀತಿಯ ಬಂಟನಾದ ಕರ್ಣನನ್ನು, ಪ್ರೀತಿಯ ತಮ್ಮನಾದ ದುಶ್ಯಾಸನನನ್ನು ಕೊಂದ ಅರ್ಜುನ ಭೀಮರು ಇರುವತನಕ ಹಾಗೂ ನನ್ನ ದೇಹದಲ್ಲಿ ಪ್ರಾಣ ಇರುವತನಕ ನಾನು ಸಂಧಿಯನ್ನು ಒಪ್ಪುವುದಿಲ್ಲ. ಮೊದಲು ಅವರಿಬ್ಬರನ್ನು ಕೊಲ್ಲುವೆನು; ಕೊಂದ ಬಳಿಕ ಸಂಧಿ ಮಾಡಿಕೊಳ್ಳುವೆನು. ನನ್ನ ದುಃಖವು ತಣ್ಣಗಾದಾಗ ಪ್ರಸಿದ್ಧನಾದ ಧರ್ಮರಾಯನೊಡನೆ ಸಂಧಿಯನ್ನು ಮಾಡಿಕೊಳ್ಳಲು ಆಗುವುದಿಲ್ಲ ಎಂದು ಹೇಳುವೆನೇ? ನನ್ನ ನೂರುಜನ ತಮ್ಮಂದಿರು ಶತ್ರುಗಳನ್ನು ಎದುರಿಸಿ ಯುದ್ಧ ಮಾಡಿ ಸತ್ತರು. ಆಗ ನನಗೆ ಕೋಪವು ಹುಟ್ಟಿ ಹೊರಹೊಮ್ಮಿತು. ಸತ್ತವರು ಮತ್ತೆ ಹುಟ್ಟುವುದಿಲ್ಲವೇ? ಆದ್ದರಿಂದ ಪಾಂಡವರೊಡನೆ ಯುದ್ಧ ಮಾಡಿ, ಛಲವನ್ನೇ ಮೆರೆಯುವೆನು. ಅಜ್ಜ, ನಾನು ಪಾಂಡವರೊಡನೆ ಯುದ್ಧ ಮಾಡದೆ ಇರುವುದಿಲ್ಲ. ಇಂದಿನ ಯುದ್ಧದಲ್ಲಿ ಒಂದೋ ಪಾಂಡವರು ಭೂಮಿಗೆ ಒಡೆಯರಾಗುವರು ಅಥವಾ ನಾನು ಭೂಮಿಗೆ ಒಡೆಯನಾಗುವೆನು. ಆದ್ದರಿಂದ ನಾನು ಯುದ್ಧವನ್ನು ಮಾಡುವೆನು" ಎಂದು ಹೇಳಿದನು. | |
| **XIII.** | **ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**<br>ರೈತರನ್ನು **'ಅನ್ನದಾತ'** ದೇಶದ **'ಬೆನ್ನೆಲುಬು'** ಎಂದೆಲ್ಲ ಕರೆಯುತ್ತೇವೆ. ಆದರೆ ಇಂದು ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ನಿಸರ್ಗದ ಜೊತೆ ಸೆಣೆಸಬೇಕು. ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ. ಉತ್ತಮ ಗುಣಮಟ್ಟದ ಬೀಜ ಗೊಬ್ಬರದ ಸಮಸ್ಯೆಯಿಂದ ಭೂಮಿ ಬರಿದಾಗುತ್ತಿದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ರೋಗಗಳು ತಗುಲಿ ಬೆಳೆ ಸಿಗದ ಸಮಸ್ಯೆ, ಬೆಳೆ ಬೆಳೆದರೂ ಸರಿಯಾದ ಬೆಲೆ ಸಿಗದೆ ರೈತರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು. ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ, ಜನರು ಆಹಾರವಿಲ್ಲದೆ ಸಾಯುವ ಪರಿಸ್ಥಿತಿ ಬರುತ್ತದೆ. ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ. ಗೆಡ್ಡೆ–ಗೆಣಸುಗಳನ್ನು ತಿಂದು, ಎಲೆಗಳ ರಸ ಕುಡಿದು ಬದುಕುವ ಕಾಲ ಮತ್ತೆ ಬರಬಹುದು. ಆಹಾರಕ್ಕಾಗಿ ಮನುಷ್ಯರು ಮತ್ತು ಪ್ರಾಣಿಗಳ ನಡುವೆ ಹೋರಾಟ ಏರ್ಪಡಬಹುದು. ಆಹಾರವಿಲ್ಲದೆ | **1x4=(2+2)** |

| | | |
|---|---|---|
| | ಬದುಕಲು ಸಾಧ್ಯವಿಲ್ಲ. ಅಕ್ಕಿ, ರಾಗಿ, ಗೋಧಿ, ಜೋಳ ತರಕಾರಿಗಳನ್ನು ತಯಾರಿಸುವ ಯಾವ ಕಾರ್ಖಾನೆಗಳು ಇಲ್ಲ. ಇವಕ್ಕೆಲ್ಲ ರೈತರ ಬೆವರು ಭೂಮಿಗೆ ಸುರಿಯಬೇಕು.<br><br>**ಪ್ರಶ್ನೆಗಳು :** | |
| **43ಅ** | **ರೈತರು ಎದುರಿಸುತ್ತಿರುವ ಸಮಸ್ಯೆಗಳಾವುವು?**<br>ರೈತರ ಪರಿಸ್ಥಿತಿ ಚಿಂತಾಜನಕವಾಗಿದೆ. ನಿಸರ್ಗದ ಜೊತೆ ಸೆಣೆಸಬೇಕು. ಸಕಾಲಕ್ಕೆ ಸರಿಯಾಗಿ ಮಳೆ ಬರುವುದಿಲ್ಲ. ಉತ್ತಮ ಗುಣಮಟ್ಟದ ಬೀಜ ಗೊಬ್ಬರದ ಸಮಸ್ಯೆಯಿಂದ ಭೂಮಿ ಬರಿದಾಗುತ್ತಿದೆ. ಕ್ರಿಮಿಕೀಟಗಳ ಹಾವಳಿಯಿಂದ ಬೆಳೆಗೆ ರೋಗಗಳು ತಗುಲಿ ಬೆಳೆ ಸಿಗದ ಸಮಸ್ಯೆ, ಬೆಳೆ ಬೆಳೆದರೂ ಸರಿಯಾದ ಬೆಲೆ ಸಿಗದೆ ರೈತರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. | |
| **43ಆ** | **ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ ಏನಾಗಬಹುದು?**<br>ವ್ಯವಸಾಯ ಇಲ್ಲದಿದ್ದರೆ ದೇಶದ ಆಟವೇ ನಡೆಯದು. ಕೃಷಿಕರು ಭೂಮಿಯನ್ನು ಉಳುವುದಿಲ್ಲ ಎಂದು ಸತ್ಯಾಗ್ರಹ ಮಾಡಿದರೆ, ಜನರು ಆಹಾರವಿಲ್ಲದೆ ಸಾಯುವ ಪರಿಸ್ಥಿತಿ ಬರುತ್ತದೆ. ದೇಶದ ಅಭಿವೃದ್ಧಿ ಕುಂಠಿತವಾಗುತ್ತದೆ. ಗೆಡ್ಡೆ–ಗೆಣಸುಗಳನ್ನು ತಿಂದು, ಎಲೆಗಳ ರಸ ಕುಡಿದು ಬದುಕುವ ಕಾಲ ಮತ್ತೆ ಬರಬಹುದು. ಆಹಾರಕ್ಕಾಗಿ ಮನುಷ್ಯರು ಮತ್ತು ಪ್ರಾಣಿಗಳ ನಡುವೆ ಹೋರಾಟ ಏರ್ಪಡಬಹುದು. ಆಹಾರವಿಲ್ಲದೆ ಬದುಕಲು ಸಾಧ್ಯವಿಲ್ಲ. | |
| **XIV.**<br>**44.** | **ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.**<br>ನಿಮ್ಮನ್ನು ಮೈಸೂರಿನ ಶ್ರೀವಿವೇಕಾನಂದ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಅಥರ್ವ' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಶಾಲಾ ಸ್ವಾತಂತ್ರ್ಯ ದಿನಾಚರಣೆಗೆ ಬರುವಂತೆ ಆಹ್ವಾನಿಸಿ ಬಳ್ಳಾರಿಯಲ್ಲಿರುವ ನಿಮ್ಮ ತಾಯಿಗೊಂದು ಪತ್ರ ಬರೆಯಿರಿ.<br>**ಅಥವಾ**<br>ನಿಮ್ಮನ್ನು ಬಿಜಾಪುರದ ಗೋಳಗೊಮ್ಮಟ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಅರ್ಥ' ಎಂದು ಭಾವಿಸಿಕೊಂಡು ನಿಮ್ಮ ಊರಿಗೊಂದು ಗ್ರಂಥಾಲಯ ನಿರ್ಮಿಸಿಕೊಡುವಂತೆ ನಿಮ್ಮ ರಾಜ್ಯದ ಶಿಕ್ಷಣ ಸಚಿವರಿಗೊಂದು ಮನವಿ ಪತ್ರ ಬರೆಯಿರಿ.<br>**(ಉತ್ತರಕ್ಕಾಗಿ ಮಾದರಿ ಉತ್ತರ ಪತ್ರಿಕೆ 1,2,3 ರಲ್ಲಿ ನೋಡಿರಿ)** | **5 x 1 = 5** |
| **XV.**<br><br>**45.** | **ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**<br><br>**ತ್ಯಾಜ್ಯವಸ್ತು ನಿರ್ವಹಣೆ**<br><br>**ಪೀಠಿಕೆ :** ಕಸದ ಸಂಗ್ರಹ, ಸಾಗಣೆ, ಸಂಸ್ಕರಣೆ, ಮರುಬಳಕೆ ಅಥವಾ ವಿಲೇವಾರಿಯನ್ನು ತ್ಯಾಜ್ಯವಸ್ತುಗಳ ನಿರ್ವಹಣೆ ಎನ್ನುತ್ತೇವೆ. ಮಾನವನು ಬಳಸಿ, ಬಿಸಾಡಿದ ವಸ್ತುಗಳೇ | **5 x 1 = 5** |

ತ್ಯಾಜ್ಯವಸ್ತುಗಳು. ಈ ತ್ಯಾಜ್ಯವಸ್ತುಗಳನ್ನು ಸರಿಯಾದ ರೀತಿಯಲ್ಲಿ ನಿರ್ವಹಣೆ ಮಾಡದೆ ಇದ್ದರೆ ಅವು ಪರಿಸರ ಹಾಗೂ ಮನುಷ್ಯನ ಆರೋಗ್ಯದ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತವೆ.

**ವಿಷಯ ನಿರೂಪಣೆ** : ತ್ಯಾಜ್ಯವಸ್ತುಗಳನ್ನು ಘನತ್ಯಾಜ್ಯವಸ್ತುಗಳು, ದ್ರವರೂಪದ ತ್ಯಾಜ್ಯವಸ್ತುಗಳು, ಅನಿಲ ರೂಪದ ತ್ಯಾಜ್ಯವಸ್ತುಗಳು, ವೈದ್ಯಕೀಯ ತ್ಯಾಜ್ಯವಸ್ತುಗಳು, ಕೈಗಾರಿಕಾ ತ್ಯಾಜ್ಯಗಳು ಎಂದು ವಿಂಗಡಿಸಬಹುದು. ತ್ಯಾಜ್ಯವಸ್ತು ನಿರ್ವಹಣೆಯು ಪ್ರಗತಿ ಹೊಂದಿದ ಮತ್ತು ಪ್ರಗತಿ ಹೊಂದುತ್ತಿರುವ ದೇಶಗಳ ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಿಭಿನ್ನವಾಗಿರುತ್ತದೆ. ಸ್ಥಳೀಯ ಸಂಸ್ಥೆಗಳು ತ್ಯಾಜ್ಯವಸ್ತು ನಿರ್ವಹಣೆಯ ಜವಾಬ್ದಾರಿಯನ್ನು ಹೊಂದಿರುತ್ತವೆ. ಜನ ವಸತಿ ಪ್ರದೇಶದಿಂದ ದೂರದಲ್ಲಿ, ನಿರ್ದಿಷ್ಟ ಪ್ರದೇಶದಲ್ಲಿ ತ್ಯಾಜ್ಯವಸ್ತು ನಿರ್ವಹಣಾ ಘಟಕಗಳನ್ನು ಸ್ಥಾಪಿಸಿ, ಆರೋಗ್ಯಕರವಾದ ರೀತಿಯಲ್ಲಿ ಅವುಗಳ ವಿಲೇವಾರಿ ಮಾಡುವುದು ಅತ್ಯಗತ್ಯವಾದ ಕಾರ್ಯವಾಗಿದೆ.

ಅನಾರೋಗ್ಯಕರ ವಾತಾವರಣದಲ್ಲಿ, ಜನ ವಸತಿ ಪ್ರದೇಶಗಳ ಬಳಿ ತ್ಯಾಜ್ಯವಸ್ತುಗಳ ದಹನ ಮಾಡುವುದರಿಂದ ಅವುಗಳಲ್ಲಿರುವ ಕ್ರಿಮಿಕೀಟಗಳು ಗಾಳಿಯಲ್ಲಿ ತೂರಿಬಂದು ಅಪಾಯಕಾರಿಯಾಗಬಹುದಾಗಿದೆ. ತ್ಯಾಜ್ಯವಸ್ತುಗಳನ್ನು ನೆಲದ ಮೇಲೆ ಹೂತು ಹಾಕುವುದರಿಂದ ಅದು ಕೊಳತು, ಜೈವಿಕ ವಿಷಕಾರಿ ಅನಿಲಗಳ ಉತ್ಪಾದನೆಯಾಗಿ, ದುರ್ವಾಸನೆಯುಂಟಾಗಿ ಪ್ರಾಣಹಾನಿಯೂ ಆಗಬಹುದು. ಇದು ಕಸದ ಮರು ಬಳಕೆ ವಿಧಾನಗಳ ಬಗ್ಗೆ ಹೆಚ್ಚು ಗಮನವನ್ನು ನೀಡಬೇಕು. ಸರ್ಕಾರವು ಕಸದಿಂದ ಕಾಂಪೋಸ್ಟ್ ಗೊಬ್ಬರ ತಯಾರಿಸುವ ಘಟಕಗಳನ್ನು ಸ್ಥಾಪಿಸುವುದರ ಮೂಲಕ ನಿರ್ವಹಣೆ ಮಾಡಬಹುದು.

**ಉಪಸಂಹಾರ** : ಆಧುನಿಕ ರೀತಿಯಲ್ಲಿ ತ್ಯಾಜ್ಯವಸ್ತುಗಳನ್ನು ವಿಲೇವಾರಿ ಮಾಡಬೇಕು. ಯಂತ್ರಗಳ ಸಹಾಯದಿಂದ ಕಸ ವಿಲೇವಾರಿ ಮಾಡಬೇಕು. ಹಾನಿಕಾರಕ ತ್ಯಾಜ್ಯಗಳನ್ನು ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಬೇಕು. ಮನೆಯಲ್ಲಿಯೇ ಕಸವನ್ನು ವಿಂಗಡಿಸುವ ಪದ್ಧತಿಯ ಬಗ್ಗೆ ಜನರಿಗೆ ಜಾಗೃತಿಯಲ್ಲಿ ಮೂಡಿಸಬೇಕು. ಈ ಮೊದಲಾದ ಕ್ರಮಗಳಿಂದ ಮಾತ್ರ ತ್ಯಾಜ್ಯವಸ್ತು ನಿರ್ವಹಣೆಯನ್ನು ಮಾಡಬಹುದು ಎಂಬುದು ನನ್ನ ಅಭಿಪ್ರಾಯವಾಗಿದೆ.

**ಅಥವಾ**

**ಸಾವಯವ ಕೃಷಿ**

**ಪ್ರಸ್ತಾವನೆ:–** ಇಂದು ಕೃಷಿ ಕ್ಷೇತ್ರದಲ್ಲಿ ಅನೇಕ ರೀತಿಯ ಸಂಶೋಧನೆಗಳು ನಡೆಯುತ್ತಿವೆ. ಪಾರಂಪರಿಕ ಕೃಷಿ ಪದ್ಧತಿ ಹಾಗೂ ವೈಜ್ಞಾನಿಕ ಕೃಷಿ ಪದ್ಧತಿಗಳ ಸಾಧಕ ಬಾಧಕಗಳ ಬಗ್ಗೆ ಕೃಷಿ ವಿಜ್ಞಾನಿಗಳು ಚರ್ಚೆ ನಡೆಸುತ್ತಿದ್ದರೆ, ಹೊಸಹೊಸ ಪ್ರಯೋಗಗಳು ನಡೆಯುತ್ತಿವೆ. ಇದರ ಫಲಸ್ವರೂಪವಾಗಿ ಬಂದಿರುವುದೇ ಸಾವಯವ ಬೇಸಾಯ ಪದ್ಧತಿ.

**ವಿಷಯ ವಿಸ್ತರಣೆ:–** ಬೆಳೆಯ ಆವರ್ತನೆ, ಹಸಿರು ಗೊಬ್ಬರ, ಮಿಶ್ರಗೊಬ್ಬರ, ಜೈವಿಕವಾಗಿ ಕೀಟಗಳ ನಿಯಂತ್ರಣಗಳನ್ನು ಅವಲಂಬಿತಗೊಂಡಿರುವುದೇ ಸಾವಯವ ಬೇಸಾಯ. ಹಲವು ರಾಷ್ಟ್ರಗಳಲ್ಲಿ ಸಾವಯವ ಬೇಸಾಯ ಪದ್ಧತಿಗಳನ್ನು ಅಂತಾರಾಷ್ಟ್ರೀಯವಾಗಿ ನಿಯಮಗಳಿಗೊಳಪಡಿಸಲಾಗಿದೆ ಅಂತರರಾಷ್ಟ್ರೀಯವಾಗಿ ನಿಯಮಗಳಿಗೊಳಪಡಿಸಲಾಗಿದೆ. ಅಂತಾರಾಷ್ಟ್ರೀಯ ಆಶ್ರಯ ಸಂಘಟನೆಯ ಸಾವಯವ ಸಮಷ್ಟಿಯನ್ನು ರಚಿಸುವುದಕ್ಕಾಗಿ 1972ರಲ್ಲಿ ಸ್ಥಾಪಿಸಲಾಗಿದೆ. ಸಾವಯವ ಚಳವಳಿ 1930 – 1940 ರ ದಶಕದಲ್ಲಿ ಬೇಸಾಯ ಕ್ಷೇತ್ರವನ್ನು ಕೃತಕ ಗೊಬ್ಬರಗಳ ಮೇಲೆ ಹೆಚ್ಚು ಅವಲಂಬಿಸುವುದನ್ನು ಹಿಮ್ಮೆಟ್ಟಿಸುವ ಸಲುವಾಗಿ

| | | |
|---|---|---|
| | ಪ್ರಾರಂಭವಾಯಿತು. ಸರ್. ಆಲ್ಬರ್ಟ್ ಹೊವಾರ್ಡ್ ಅವರನ್ನು ಸಾವಯವ ಬೇಸಾಯದ ಪಿತಾಮಹನೆಂದು ವಿಶೇಷವಾಗಿ ಪರಿಗಣಿಸಲಾಗಿದೆ. ವಿಶ್ವದ ಒಟ್ಟು ಕೃಷಿ ಉತ್ಪನ್ನದ ಪ್ರಮಾಣವನ್ನು ಪರಿಗಣಿಸಿದಾಗ ಸಾವಯವ ಉತ್ಪನ್ನ ಸಣ್ಣ ಪ್ರಮಾಣವೆನಿಸುತ್ತದೆಯಾದರೂ ಅದು ಅನೇಕ ರಾಷ್ಟ್ರಗಳಲ್ಲಿ ವೇಗವಾಗಿ ಬೆಳೆಯುತ್ತಿದೆ. ಸಾವಯವ ವ್ಯವಸಾಯವು ಅರ್ಥಪೂರ್ಣವಾದ ಸಾಮಾಜಿಕ ಆರ್ಥಿಕ ಮತ್ತು ಪರಿಸರ ವಿಜ್ಞಾನದ ಸಮರ್ಥನೀಯ ಬೆಳವಣಿಗೆಗಾಗಿ, ವಿಶೇಷವಾಗಿ ಬಡ ರಾಷ್ಟ್ರಗಳ ಬೆಳವಣಿಗೆಗೆ ಮಹತ್ವಪೂರ್ಣ ಕೊಡುಗೆ ನೀಡುತ್ತದೆ. ಹಲವು ರಾಷ್ಟ್ರಗಳಲ್ಲಿ ಸಾವಯವ ಬೇಸಾಯ ಪದ್ಧತಿಗಳನ್ನು ಅಂತಾರಾಷ್ಟ್ರೀಯವಾಗಿ ನಿಯಮಗಳಿಗೆ ಒಳಪಡಿಸಲಾಗಿದೆ ಮತ್ತು ಕಾನೂನುಬದ್ಧವಾಗಿ ವಿಧಿಸಲಾಗಿದೆ. ಕರ್ನಾಟಕದಲ್ಲಿ ಸಾವಯವ ಕೃಷಿಯನ್ನು ಪ್ರೋತ್ಸಾಹಿಸಲೆಂದು **'ಸಾವಯವ ಕೃಷಿ ಮಿಷನ್'** ರಚಿಸಲಾಗಿದೆ.<br>**ಉಪಸಂಹಾರ:** ಸಾವಯವ ವ್ಯವಸಾಯವು ಒಂದು ಉತ್ತಮ ಜ್ಞಾನಯುಕ್ತ ಕೇಂದ್ರಿಕೃತ ಉತ್ಪಾದನೆಯ ವ್ಯವಸ್ಥೆಯಾಗಿದೆ. ಇಷ್ಟಲ್ಲದೆ ಹೆಚ್ಚು ಇಳುವರಿ ನೀಡುವ ಬೇಸಾಯ ವ್ಯವಸ್ಥೆಗಳಿಗಿಂತ ಹೆಚ್ಚು ಪರಿಸರ ಸ್ನೇಹಿಯಾಗಿದೆ. ಆದ್ದರಿಂದ ಇದನ್ನು ರೈತರು ಆಳವಡಿಸಿಕೊಳ್ಳುವ ಮೂಲಕ ತಮ್ಮ ಬದುಕನ್ನು ಉತ್ತಮಪಡಿಸಿಕೊಳ್ಳಬಹುದೆಂಬುದು ನನ್ನ ಅಭಿಪ್ರಾಯವಾಗಿದೆ. | |

# ಉಪನಿರ್ದೇಶಕರು (ಆಡಳಿತ) ರವರ ಕಚೇರಿ
# ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

## 2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು

## ವಿಷಯ : ಪ್ರಥಮ ಭಾಷೆ – ಕನ್ನಡ (01–K)

**ಅವಧಿ : 3 ಗಂಟೆ 15 ನಿಮಿಷ      ಅಭ್ಯಾಸ ಪತ್ರಿಕೆ – 05      ಗರಿಷ್ಠ ಅಂಕಗಳು : 100**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.** **1 x 6 = 6**

1. ಕನ್ನಡ ವರ್ಣಮಾಲೆಯಲ್ಲಿರುವ ಅಲ್ಪಪ್ರಾಣಗಳ ಸಂಖ್ಯೆ
(ಎ) ಹದಿಮೂರು (ಬಿ) ಐದು (ಸಿ) ಇಪ್ಪತ್ತೈದು (ಡಿ) ಹತ್ತು

2. "ತಜ್ಞರು ಬಹಳಷ್ಟು ಸಂಶೋಧನೆಗಳನ್ನು ನಡೆಸಲಿ." ಈ ವಾಕ್ಯದಲ್ಲಿಯ ಕ್ರಿಯಾಪದವು ಈ ರೂಪದಲ್ಲಿದೆ:
(ಎ) ಸಂಭವನಾರ್ಥಕ (ಬಿ) ವಿಧ್ಯರ್ಥಕ (ಸಿ) ನಿಷೇಧಾರ್ಥಕ (ಡಿ) ಆತ್ಮಾರ್ಥಕ

3. 'ಕಂಬನಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.
(ಎ) ಲೋಪಸಂಧಿ (ಬಿ) ಆಗಮ ಸಂಧಿ (ಸಿ) ಜಶ್ತ್ವ ಸಂಧಿ (ಡಿ) ಆದೇಶ ಸಂಧಿ

4. 'ಇರ್ಕುಂ' ಈ ಪದದ ಹೊಸಗನ್ನಡ ರೂಪವಿದು
(ಎ) ಇರುವೆನು (ಬಿ) ಇರುವವು (ಸಿ) ಇದ್ದೆ (ಡಿ) ಇದ್ದನು

5. ಹೆಚ್ಚಿನ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭಗಳಲ್ಲಿ ಬಳಸುವ ಲೇಖನ ಚಿಹ್ನೆ:
(ಎ) ಉದ್ಧರಣ ಚಿಹ್ನೆ (ಬಿ) ವಾಕ್ಯವೇಷ್ಟನ ಚಿಹ್ನೆ
(ಸಿ) ಆವರಣ ಚಿಹ್ನೆ (ಡಿ) ವಿವರಣಾತ್ಮಕ ಚಿಹ್ನೆ

6. "ಮಕ್ಕಳು ಶೈಕ್ಷಣಿಕ ಪ್ರವಾಸಕ್ಕೆ ಹೋಗಿದ್ದರು ಆದರೆ ಕೆಲವು ಸ್ಥಳಗಳನ್ನು ಮಾತ್ರ ತುಂಬಾ ಇಷ್ಟಪಟ್ಟರು." ಈ ವಾಕ್ಯವು:
(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ
(ಸಿ) ಮಿಶ್ರ ವಾಕ್ಯ (ಡಿ) ವಿಧ್ಯರ್ಥಕ ವಾಕ್ಯ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4 x 1 = 4**

7. ಯಮಕ : ಶಬ್ದಾಲಂಕಾರ : : ಉಪಮಾಲಂಕಾರ : ____________
8. ಎಣ್ದೆಸೆ : ದ್ವಿಗು ಸಮಾಸ : : ನೆಯ್ದುವಸ್ತ್ರ : ______________
9. ಚಂದ್ರನಂತೆ : ತದ್ಧಿತಾಂತಾವ್ಯಯ : : ಜಾಣ್ಮೆ : __________
10. ಕಾವಲ್ಗೆ : ಕಾವಲಿಗೆ : : ಪಸುರ್ಗೆ : _____________

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ 1 x 7 = 7**

11. ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?
12. ದರ್ಭೆಯ ಚಿಗುರು ಯಾವ ಗುಣವನ್ನು ಒರೆಸಿಬಿಡುತ್ತದೆ?
13. "ಕೈಗಾರಿಕೀಕರಣ ಇಲ್ಲವೆ ಅವನತಿ" ಎಂಬ ಘೋಷಣೆ ಮಾಡಿದರು ಯಾರು?
14. ರಾಹಿಲನು ಯಾರು?
15. ನದೀಜಲಗಳು ಏನಾಗಿವೆ?
16. ದಿನಪಸುತ ಎಂದರೆ ಯಾರು?
17. ಪೆರಿಯಾರ್ ಅವರ ಬದುಕಿನ ಧ್ಯೇಯವೇನಾಗಿತ್ತು?

**IV. ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ 10 x 2 =20**

18. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?
19. ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?
20. ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾದಿಯಿದೆ ಎಂದುಕೊಳ್ಳಲು ಕಾರಣವೇನು?
21. ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?
22. ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ (ಉ)ಭಯವನ್ನು ಬಿತ್ತಿದನು?
23. ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ?
24. 'ಅನ್ ಟು ದಿ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ರೀತಿಯ ಪರಿಣಾಮ ಬೀರಿತು?
25. 'ವಸಂತ ಮುಖ ತೋರಲಿಲ್ಲ' ಕವನದ ಆಶಯವೇನು?
26. ಭಗತ್ ಸಿಂಗ್ ಜಲಿಯನ್ ವಾಲಾಬಾಗ್‌ನ ಮಾರಣಹೋಮದಿಂದ ತೆಗೆದುಕೊಂಡ ನಿರ್ಧಾರವೇನು?
27. ಮಂಗಳೂರಿನಲ್ಲಿ ಮರಾಠಿ ನಾಟಕ ಮಂಡಳಿಯವರು ಆಡಿದ ನಾಟಕಗಳು ಗೋವಿಂದ ಪೈ ಅವರ ಮೇಲೆ ಬೀರಿದ ಪರಿಣಾಮವನ್ನು ವಿವರಿಸಿ.

**V. ಕೆಳಗಿನ ಕವಿ/ ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 2 x 3 = 6**

28 ದುರ್ಗಸಿಂಹ
29. ಕುವೆಂಪು

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ. 1 x 3 = 3**

30. ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ. 1 x 3 = 3**

31. ಮಾರಿಗೌತಣವಾಯ್ತು ನಾಳಿನ ಭಾರತವು

**VIII. ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 x 3 = 3**

32. ತಾಳಿದವನು ಬಾಳಿಯಾನು

**ಅಥವಾ**

ಮನಸಿದ್ದರೆ ಮಾರ್ಗ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x 3 = 18**

33. "ಗುರೂಪದೇಶ ಎಂದರೆ ತಲೆ ನೆರೆಯದೆ ಬರುವ ಮುಪ್ಪು."
34. "ಯುದ್ಧಕ್ಕೆ ಹೋದ ನನ್ನ ಮಗನ ಕಣ್ಣುಗಳಂತೆ ಇವೆಯಲ್ಲ"
35. "ರಿಸಿಯರ ರೂಪಂ ಕಾಣ್ಬುಮಂದೀತನುಂ ತಪಂಬಡುಗುಮ್"
36. "ಹೊಸ ಭರವಸೆಗಳ ಕಟ್ಟೋಣ."
37. "ಜೀವ ಸತ್ತು ಹೋಗುವುದು ಗೊತ್ತ"
38. "ನಿನ್ನಪದೆಸೆಯ ಬಯಸುವನಲ್ಲ"

**X. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ 1 x 4 = 4**

39. ಅಂತೆಂಬನಾರ್ಗೆ ______________________

______________________

______________________

______________________ ನುಡಿದಂ.

**ಅಥವಾ**

ಒಡವೆಯನರ್ಥಿಗಿತ್ತೆ ______________________

______________________

______________________

______________________ ಕುಂಭಸಂಭವಂ

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ. 1 x 4 = 4**

40. ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ
ಮಂಡಲ – ಗಿಂಡಲಗಳ ಗಡಮುಕ್ಕಿ
ತೇಲಿಸಿ ಮುಳುಗಿಸಿ ಖಂಡ ಖಂಡಗಳ
ಸಾರ್ವಭೌಮರ ನೆತ್ತಿಯ ಕುಕ್ಕಿ
ಹಕ್ಕಿ ಹಾರುತಿದೆ ನೋಡಿದಿರಾ !

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 4 = 8**

41. ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು?

**ಅಥವಾ**

'ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ.

42. ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?

**ಅಥವಾ**

ಲವನ ನಡೆವಳಿಕೆ ಮೆಚ್ಚುಗೆಯಾಯಿತೇ? ಏಕೆ?

**XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 4=(2+2)**

ಪ್ರಕೃತಿ ಒಂದು ಅದ್ಭುತ ಸೃಷ್ಟಿ. ಪ್ರಕೃತಿಯಲ್ಲಿ ಕ್ರಿಮಿ, ಕೀಟ, ಪ್ರಾಣಿ, ಪಕ್ಷಿಗಳು ಒಂದು ಮಿತಿಯಲ್ಲಿದ್ದರೆ ಮಾತ್ರ ಪರಿಸರ ಸಮತೋಲನವಾಗಿರುತ್ತದೆ, ಇಲ್ಲದಿದ್ದರೆ ಪರಿಸರದಲ್ಲಿ ಅಸಮತೋಲನವುಂಟಾಗಿ ಜೀವರಾಶಿಗಳಿಗೆಲ್ಲ ಅಪಾಯ ಕಟ್ಟಿಟ್ಟದ್ದು. ಎಲ್ಲಾ ಪ್ರಾಣಿ ಪಕ್ಷಿಗಳು ತಮ್ಮ ಸಂತತಿ ವೃದ್ಧಿಸಿಕೊಳ್ಳಲು ಪ್ರಯತ್ನಿಸುತ್ತವೆ. ಜನಿಸಿದ ಎಲ್ಲಾ ಪ್ರಾಣಿ ಪಕ್ಷಿಗಳು ಉಳಿಯುವುದಿಲ್ಲ. ಪ್ರಾಣಿಗಳು ತಮ್ಮ ಬದುಕಿಗಾಗಿ ಇತರ ಪ್ರಾಣಿ ಪಕ್ಷಿಗಳೊಂದಿಗೆ ಹೋರಾಟ ನಡೆಸಿದಾಗ ಶಕ್ತಿಯುತವಾದವು ಉಳಿಯುತ್ತವೆ. ದುರ್ಬಲ ಪ್ರಾಣಿಗಳು ನಶಿಸಿ ಹೋಗುತ್ತವೆ. ಬದುಕುಳಿದ ಪ್ರಾಣಿ ಪಕ್ಷಿಗಳನ್ನು ಮಾನವ ದುರಾಸೆ, ಮೋಜು ಅಥವಾ ಹೊಟ್ಟೆಪಾಡಿಗಾಗಿ ನಾಶಮಾಡುತ್ತಿದ್ದಾನೆ. ಇದರಿಂದ ಪ್ರಾಣಿಗಳ ಸಂತತಿ ಕ್ಷೀಣವಾಗುತ್ತದೆ. ಪ್ರಾಣಿಗಳಂತೆ ಸಸ್ಯಗಳೂ ತಮ್ಮ ವಂಶ ಮುಂದುವರಿಯಬೇಕೆಂದು ಯತ್ನಿಸುವ ವರ್ಗಕ್ಕೆ ಸೇರಿವೆ. ಕೀಟ, ವಾಯು, ನೀರು ಮೊದಲಾದವುಗಳ ಮೂಲಕ ಬೀಜಗಳನ್ನು ವಿತರಣೆ ಮಾಡುತ್ತವೆ. ಈ ಬೀಜಗಳು ಎಲ್ಲ ಭೂಜಲ–ಪ್ರದೇಶದಲ್ಲಿ ಹರಡಿಕೊಂಡರೂ ಅವು ತಮಗೆ ಅನುಕೂಲವಾದ ವಾತಾವರಣ ದೊರೆತಾಗ ಮೊಳೆಕೆಯೊಡೆದು ವಂಶಗಳ ಬೆಳವಣಿಗೆಗೆ ಕಾರಣವಾಗುತ್ತವೆ. ವಿಪುಲವಾದ ನೀರು, ಆರ್ದ್ರತೆ ಇರುವಲ್ಲಿ ದಟ್ಟವಾದ ಕಾಡು ಬೆಳೆದರೆ, ಬಯಲು ಪ್ರದೇಶದಲ್ಲಿ ಜಾಲಿ ಗಿಡಗಳೇ ವೃಕ್ಷರಾಜ ಎನಿಸಿಕೊಳ್ಳುವುವು. ಇವೇ ಬೀಜಗಳು ಮರುಭೂಮಿ, ರಸ್ತೆ, ಕಟ್ಟಡಗಳ ಮೇಲೆ ಬಿದ್ದರೆ ಅವುಗಳ ಬೆಳವಣಿಗೆಗೆ ಅವಕಾಶವೇ ದೊರೆಯುವುದಿಲ್ಲವಾದ್ದರಿಂದ ನಾಶವಾಗುವುವು.

**ಪ್ರಶ್ನೆಗಳು :**

**43**. ಅ) ಸಸ್ಯಗಳು ತಮ್ಮ ವಂಶವನ್ನು ಹೇಗೆ ಬೆಳೆಸುತ್ತವೆ ?

**43**. ಆ) ಪ್ರಾಣಿಗಳ ಸಂತತಿ ಕ್ಷೀಣಿಸಲು ಕಾರಣಗಳಾವುವು ?

**XIV. ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1 x 5 = 5**

44. ನಿಮ್ಮನ್ನು ಮಂಗಳೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ವಿನಯ' ಎಂದು ಭಾವಿಸಿಕೊಂಡು ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಚಿಕ್ಕಬಳ್ಳಾಪುರದಲ್ಲಿರುವ ನಿಮ್ಮ ತಾಯಿ ವರುಣರವರಿಗೆ ಒಂದು ಪತ್ರ ಬರೆಯಿರಿ.

**ಅಥವಾ**

ನಿಮ್ಮನ್ನು ಮೈಸೂರಿನ ಶಾರದಾವಿಲಾಸ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಸಂಗಮೇಶ್' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಕ್ರೀಡಾಕೂಟದ ಉದ್ಘಾಟಕರಾಗಿ ಬರುವಂತೆ ಆಹ್ವಾನಿಸಿ ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಿರಿ.

XV. **ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ. 1 x 5 = 5**

45. ಸ್ವಚ್ಛ ಭಾರತ ಅಭಿಯಾನ

**ಅಥವಾ**

ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ

# ಉಪನಿರ್ದೇಶಕರು (ಆಡಳಿತ) ರವರ ಕಚೇರಿ
# ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಉತ್ತರ ಜಿಲ್ಲೆ, ಬೆಂಗಳೂರು

## 2023–24 ನೇ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸಲು ರಚಿಸಲಾಗಿರುವ ಅಭ್ಯಾಸ ಪತ್ರಿಕೆಗಳು

**ವಿಷಯ : ಪ್ರಥಮ ಭಾಷೆ – ಕನ್ನಡ (01–K)**

**ಅವಧಿ : 3 ಗಂಟೆ 15 ನಿಮಿಷ ಅಭ್ಯಾಸ ಪತ್ರಿಕೆ – 05 ಗರಿಷ್ಠ ಅಂಕಗಳು : 100**

## ಮಾದರಿ ಉತ್ತರಗಳು

| ಕ್ರ.ಸಂ | ಪ್ರಶ್ನಾವಾರು ಮೌಲ್ಯಮಾಪನ | ಅಂಕಗಳು |
|---|---|---|
| I. | **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.**<br>**ಅಂಕ ಸೂಚಿ : ಪ್ರತಿ ಸರಿಯುತ್ತರಕ್ಕೆ 1 ಅಂಕ ನೀಡುವುದು** | **1 x 6 = 6** |
| 1. | **ಕನ್ನಡ ವರ್ಣಮಾಲೆಯಲ್ಲಿರುವ ಅಲ್ಪಪ್ರಾಣಗಳ ಸಂಖ್ಯೆ:**<br>(ಎ) ಹದಿಮೂರು (ಬಿ) ಐದು<br>(ಸಿ) ಇಪ್ಪತ್ತೈದು (ಡಿ) ಹತ್ತು<br>**ಉತ್ತರ: ಡಿ. ಹತ್ತು** | |
| 2. | **"ತಜ್ಞರು ಬಹಳಷ್ಟು ಸಂಶೋಧನೆಗಳನ್ನು ನಡೆಸಲಿ." ಈ ವಾಕ್ಯದಲ್ಲಿಯ ಕ್ರಿಯಾಪದವು ಈ ರೂಪದಲ್ಲಿದೆ:**<br>(ಎ) ಸಂಭವನಾರ್ಥಕ (ಬಿ) ವಿದ್ಯರ್ಥಕ<br>(ಸಿ) ನಿಷೇಧಾರ್ಥಕ (ಡಿ) ಆತ್ಮಾರ್ಥಕ<br>**ಉತ್ತರ:– ಬಿ. ವಿದ್ಯರ್ಥಕ** | |
| 3. | **'ಕಂಬನಿ'ಪದವು ಈ ಸಂಧಿಗೆ ಉದಾಹರಣೆಯಾಗಿದೆ.**<br>(ಎ) ಲೋಪಸಂಧಿ (ಬಿ) ಆಗಮ ಸಂಧಿ<br>(ಸಿ) ಜಶ್ತ್ವ ಸಂಧಿ (ಡಿ) ಆದೇಶ ಸಂಧಿ<br>**ಉತ್ತರ:– ಡಿ. ಆದೇಶ ಸಂಧಿ** | |

| | | |
|---|---|---|
| **4.** | **'ಇರ್ಕುಂ' ಈ ಪದದ ಹೊಸಗನ್ನಡ ರೂಪವಿದು**<br>(ಎ) ಇರುವೆನು (ಬಿ) ಇರುವವು (ಸಿ) ಇದ್ದೆ (ಡಿ) ಇದ್ದನು<br>**ಉತ್ತರ:– ಎ. ಇರುವೆನು** | |
| **5.** | **ಹೆಚ್ಚಿನ ವಿವರಣೆಗಳನ್ನು, ಅರ್ಥಗಳನ್ನು ನೀಡುವ ಸಂದರ್ಭಗಳಲ್ಲಿ ಬಳಸುವ ಲೇಖನ ಚಿಹ್ನೆ:**<br>(ಎ) ಉದ್ಧರಣ ಚಿಹ್ನೆ (ಬಿ) ವಾಕ್ಯವೇಷ್ಟನ ಚಿಹ್ನೆ<br>(ಸಿ) ಆವರಣ ಚಿಹ್ನೆ (ಡಿ) ವಿವರಣಾತ್ಮಕ ಚಿಹ್ನೆ<br>**ಉತ್ತರ:– ಸಿ. ಆವರಣ ಚಿಹ್ನೆ** | |
| **6.** | **"ಮಕ್ಕಳು ಶೈಕ್ಷಣಿಕ ಪ್ರವಾಸಕ್ಕೆ ಹೋಗಿದ್ದರು ಆದರೆ ಕೆಲವು ಸ್ಥಳಗಳನ್ನು ಮಾತ್ರ ತುಂಬಾ ಇಷ್ಟಪಟ್ಟರು." ಈ ವಾಕ್ಯವು:**<br>(ಎ) ಸಾಮಾನ್ಯ ವಾಕ್ಯ (ಬಿ) ಸಂಯೋಜಿತ ವಾಕ್ಯ<br>(ಸಿ) ಮಿಶ್ರ ವಾಕ್ಯ (ಡಿ) ವಿಧ್ಯರ್ಥಕ ವಾಕ್ಯ<br>**ಉತ್ತರ:– ಬಿ. ಸಂಯೋಜಿತ ವಾಕ್ಯ** | |
| **II.** | **ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** | **1 x 4 = 4** |
| **7.** | ಯಮಕ : ಶಬ್ದಾಲಂಕಾರ : : ಉಪಮಾಲಂಕಾರ **: ಅರ್ಥಾಲಂಕಾರ** | |
| **8.** | ಎಣ್ದೆಸೆ : ದ್ವಿಗು ಸಮಾಸ : : ನೆಯ್ದುವಸ್ತ್ರ **: ಗಮಕ ಸಮಾಸ** | |
| **9.** | ಚಂದ್ರನಂತೆ : ತದ್ಧಿತಾಂತಾವ್ಯಯ : : ಜಾಣ್ಮೆ **: ತದ್ಧಿತಾಂತ ಭಾವನಾಮ** | |
| **10.** | ಕಾವಲ್ಗೆ : ಕಾವಲಿಗೆ : : ಪಸುರ್ಗೆ : **ಹಸುರಿಗೆ** | |
| **III.** | **ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ**<br>**ಅಂಕ ಸೂಚಿ : ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿಯುತ್ತರಕ್ಕೆ 1 ಅಂಕ ನೀಡುವುದು** | **1 x 7 = 7** |
| **11.** | **ರಾಮಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು?**<br>**ಉತ್ತರ:–** ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ದಂಡಕಾರಣ್ಯದಲ್ಲಿ ವಾಸ ಮಾಡುತ್ತಿದ್ದ ಕಬಂಧ (ಧನು). | |

| | | |
|---|---|---|
| 12. | **ದರ್ಭೆಯ ಚಿಗುರು ಯಾವ ಗುಣವನ್ನು ಒರೆಸಿಬಿಡುತ್ತದೆ?**<br>**ಉತ್ತರ:** ದರ್ಭೆಯ ಚಿಗುರು ರಾಜರ ಕ್ಷಮಾಗುಣವನ್ನು ಒರೆಸಿಬಿಡುತ್ತದೆ. | |
| 13. | **"ಕೈಗಾರಿಕೀಕರಣ ಇಲ್ಲವೆ ಅವನತಿ" ಎಂಬ ಘೋಷಣೆ ಮಾಡಿದರು ಯಾರು?**<br>**ಉತ್ತರ :** "ಕೈಗಾರಿಕೀಕರಣ ಇಲ್ಲವೆ ಅವನತಿ" ಎಂಬ ಘೋಷಣೆ ಮಾಡಿದರು ಸರ್ ಎಂ ವಿಶ್ವೇಶ್ವರಯ್ಯ | |
| 14. | **ರಾಹಿಲನು ಯಾರು?**<br>**ಉತ್ತರ:–** ರಾಹಿಲನು ಸೈನ್ಯದಲ್ಲಿ ಸೇವೆಯನ್ನು ಸಲ್ಲಿಸುತ್ತಿದ್ದ **ಒಬ್ಬ ಡಾಕ್ಟರ್.** | |
| 15. | **ನದೀಜಲಗಳು ಏನಾಗಿವೆ?**<br>**ಉತ್ತರ:–** ನದೀಜಲಗಳು **ಕಲುಷಿತವಾಗಿವೆ.** | |
| 16. | **ದಿನಪಸುತ ಎಂದರೆ ಯಾರು?**<br>**ಉತ್ತರ:–** ದಿನಪಸುತ ಎಂದರೆ **ಕರ್ಣ.** | |
| 17. | **ಪೆರಿಯಾರ್ ಅವರ ಬದುಕಿನ ಧ್ಯೇಯವೇನಾಗಿತ್ತು?**<br>**ಉತ್ತರ:** ಎಲ್ಲ ಬಗೆಯ ಶೋಷಣೆಗಳಿಂದ ಮುಕ್ತವಾಗಿ, ಜಾತಿ, ಲಿಂಗ ಅಸಮಾನತೆಗಳಿಂದ ಹೊರಬಂದು 'ಸರ್ವಧರ್ಮಸಹಿಷ್ಣತೆಯ' ಸಮಾಜ ರೂಪುಗೊಳ್ಳಬೇಕು ಎನ್ನುವುದೇ ಅವರ ಬದುಕಿನ ಧ್ಯೇಯವಾಗಿತ್ತು. | |
| IV. | **ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ**<br>**ಅಂಕ ಸೂಚಿ: ಅಂಶಗಳನ್ನಾಧರಿಸಿ ಪತ್ಯಾಂಶಕ್ಕೆ – 2 ಅಂಕ** | **2x20=20** |
| 18. | **ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?**<br>**ಉತ್ತರ:–** "ಗಿರಿವನಗಳೇ, ನಾನು ನಿಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಭೂಜಾತೆ ನನ್ನ ಮನದಾಸೆಯ ಸುಂದರ ಸೀತೆ ನನಗೆ ಸಿಕ್ಕುತ್ತಾಳೆಯೇ? ಅವಳು ಎಲ್ಲಿರುವಳೆಂಬುದನ್ನು ನೀವು ಯಾರು ತಿಳಿದಿಲ್ಲವೇ? ಅವಳು ನನಗೆ ದೊರೆಯುತ್ತಾಳೆಯೇ? ಇಲ್ಲವೇ? ನಿಮ್ಮನ್ನು ಪ್ರಾರ್ಥಿಸುತ್ತೇನೆ. ದಯಮಾಡಿ ಹೇಳಿರಿ" ಎಂದು ರಾಮನು ಗಿರಿವನಗಳನ್ನು ಕೇಳಿಕೊಂಡನು. | |
| 19. | **ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಯಾವ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು?**<br>**ಉತ್ತರ:–** ನಾಲ್ವಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ಸ್ಥಳೀಯ ಸಂಸ್ಥೆಗಳನ್ನು ರಚಿಸಿ ಆಡಳಿತ ವಿಕೇಂದ್ರೀಕರಣಕ್ಕೆ ಅನುವು ಮಾಡಿಕೊಡಲಾಯಿತು. ನಗರಪಾಲಿಕೆಗಳು ಹಾಗೂ ಗ್ರಾಮ | |

ಪಂಚಾಯಿತಿಗಳು ಕಾರ್ಯನಿರ್ವಹಿಸಲು ಆರಂಭ ಮಾಡಿದವು. ಇವರ ಕಾಲದಲ್ಲಿ 1. ಗ್ರಾಮ ನಿರ್ಮಲೀಕರಣ, 2. ವೈದ್ಯ ಸಹಾಯ, 3. ವಿದ್ಯಾಪ್ರಚಾರ, 4. ನೀರಿನ ಸೌಕರ್ಯ, 5. ಪ್ರಯಾಣ ಸೌಲಭ್ಯ ಮುಂತಾದ ಕ್ಷೇತ್ರಗಳು ಸ್ವಯಂ ಆಡಳಿತ ಕ್ಷೇತ್ರಗಳಾದವು. ಇದರಿಂದ ಮೈಸೂರು ಸಂಸ್ಥಾನಕ್ಕೆ 'ಮಾದರಿ ಮೈಸೂರು' ಎಂಬ ಹೆಸರು ಬಂದಿತು.

**20.** **ವೃಷಭಾಂಕನು ಸುಕುಮಾರಸ್ವಾಮಿಗೆ ವ್ಯಾದಿಯಿದೆ ಎಂದುಕೊಳ್ಳಲು ಕಾರಣವೇನು?**

**ಉತ್ತರ:–** ಯಶೋಭದ್ರೆಯ ವೈಭವವನ್ನು ನೋಡಲು ಬಂದ ಉಜ್ಜೇನಿ ಅರಸ ವೃಷಭಾಂಕನನ್ನು ಹಾಗೂ ಸುಕುಮಾರಸ್ವಾಮಿಯನ್ನು ಸುಪ್ಪತ್ತಿಗೆಯ ಮೇಲೆ ಕೋರಿಸಿ, ಸ್ವಜನರು ಮತ್ತು ಪರಿಜನರು ಬಿಳಿಸಾಸಿವೆ ಕಾಳುಗಳುಳ್ಳ ಮಂತ್ರಾಕ್ಷತೆಯನ್ನು ಹಾಕಿದರು. ಆಗ ಅವು ಸುಕುಮಾರಸ್ವಾಮಿಯ ದೇಹದ ಹಿಂಭಾಗದ ಪೀಠಕ್ಕೆ ಒತ್ತಿದಂತಾಗಿ ಅವನು ತನ್ನ ದೇಹವನ್ನು ಅಲುಗಾಡಿಸುತ್ತಿದ್ದನು. ದೀಪದ ಬೆಳಕನ್ನು ನೋಡಿದಾಗ ಸುಕುಮಾರಸ್ವಾಮಿಯ ಕಣ್ಣಲ್ಲಿ ನೀರು ಸುರಿಯಲಾರಂಭಿಸಿತು. ಸುಕುಮಾರಸ್ವಾಮಿಯು ಊಟ ಮಾಡುವಾಗ ಅರ್ಧ ಆಹಾರವನ್ನು ನುಂಗುತ್ತ ಅರ್ಧ ಆಹಾರವನ್ನು ಉಗುಳುತ್ತಿದ್ದನು. ಇದನ್ನು ಕಂಡು ವೃಷಭಾಂಕನು ಸುಕುಮಾರಸ್ವಾಮಿಗೆ ಯಾವುದೋ ವ್ಯಾಧಿ ಇರಬೇಕೆಂದು ಅಂದುಕೊಂಡನು.

**21.** **ಧರ್ಮಾಧಿಕರಣರು ವಟವೃಕ್ಷಕ್ಕೆ ಏನು ಹೇಳಿದರು?**

**ಉತ್ತರ:** ಧರ್ಮಾಧಿಕರಣರು 'ನೀನಾದರೂ ಯಕ್ಷಾದಿ ದಿವ್ಯ ದೇವತೆಗಳು ವಾಸಮಾಡುವಂತ ಹವನು ಆಗಿದ್ದೀಯಾ ಆ ಕಾರಣದಿಂದ ನಿನ್ನನ್ನು ಸಾಕ್ಷಿ ಮಾಡಿ ಕೇಳುತ್ತಿದ್ದೇವೆ. ನೀನು ತಪ್ಪದೇ ಸಾಕ್ಷಿಯನ್ನು ನುಡಿ" ಎಂದು ಹೇಳಿದರು.

**22.** **ಕೃಷ್ಣನು ಕರ್ಣನ ಮನದಲ್ಲಿ ಯಾವ ರೀತಿಯಲ್ಲಿ (ಉ)ಭಯವನ್ನು ಬಿತ್ತಿದನು?**

**ಉತ್ತರ:–** ಕರ್ಣ ನಿಮಗೂ ಯಾದವರಿಗೂ ಕೌರವರಿಗೆ ವಂಶ ಗೌರವದಲ್ಲಿ ಬೇಧವಿಲ್ಲ. ನೀನು ನಿಜವಾಗಿಯೂ  ಭೂಮಿಯ ಒಡೆಯ. ಆದರೆ ನಿನಗೆ ಮನದಲ್ಲಿ ಅದರ ಅರಿವಿಲ್ಲ ಎಂದು ಹೇಳುತ್ತ ಕೃಷ್ಣನು ಕರ್ಣನ ಕಿವಿಯಲ್ಲಿ ಭಯವನ್ನು ಭಿತ್ತಿದನು.

**23.** **ಈ ನೆಲದೊಡನೆ ತಾನು ಸಹಬಾಳ್ವೆ ಮಾಡುವುದಿಲ್ಲವೆಂದು ದುರ್ಯೋಧನ ಹೇಳುವುದೇಕೆ?**

**ಉತ್ತರ:–** ದುರ್ಯೋಧನನು "ತನ್ನ ಪ್ರೀತಿಯ ಬಂಟನಾದ ಕರ್ಣನನ್ನು, ಪ್ರೀತಿಯ ತಮ್ಮನಾದ ದುಶ್ಯಾಸನನ್ನು ಹಾಗೂ ನೂರುಜನ ತಮ್ಮಂದಿರನ್ನು ಈ ಯುದ್ಧದಲ್ಲಿ ಕಳೆದುಕೊಂಡಿದ್ದನು. ಆದ್ದರಿಂದ ತನ್ನ ಪ್ರೀತಿ ಪಾತ್ರರನ್ನು ಕೊಲ್ಲಿಸಿದ ಈ ನೆಲದೊಡನೆ ಮತ್ತೆ ಸಹಬಾಳ್ವೆ ಮಾಡುವುದಿಲ್ಲ" ಎಂದು ತೀರ್ಮಾನಿಸಿದನು.

**24.** **'ಅನ್ ಟು ದಿ ಲಾಸ್ಟ್' ಕೃತಿ ಗಾಂಧೀಜಿಯವರ ಮೇಲೆ ಯಾವ ರೀತಿಯ ಪರಿಣಾಮ ಬೀರಿತು?**

**ಉತ್ತರ:** ಗಾಂಧೀಜಿಯವರಿಗೆ ರಸ್ಕಿನ್‌ನ 'ಅನ್‌ಟು ದಿಸ್ ಲಾಸ್ಟ್' ಎಂಬ ಪುಸ್ತಕವನ್ನು ಓದಲು ಪ್ರಾರಂಭಿಸಿದುದೇ ತಡ, ಅದನ್ನು ಕೆಳಗಿಳಿಸಲು ಸಾಧ್ಯವಾಗಲಿಲ್ಲ. ಅದು ಅವರ ಮನಸ್ಸನ್ನು ಸೆರೆಹಿಡಿಯಿತು. ಆ ಪುಸ್ತಕದಲ್ಲಿ ಹೇಳಿದ್ದ ಧ್ಯೇಯಗಳಿಗನುಸಾರವಾಗಿ ಜೀವನವನ್ನು

| | | |
|---|---|---|
| | ಬದಲಾಯಿಸಿಕೊಳ್ಳಬೇಕೆಂದು ನಿರ್ಣಯಿಸಿಕೊಂಡರು. ಅವರ ಬಾಳಿನಲ್ಲಿ ತತ್‌ಕ್ಷಣ ಪರಿಣಾಮಕಾರಿಯಾದ ಬದಲಾವಣೆಯನ್ನು ಮಾಡಿದುದು 'ಅನ್‌ಟು ದಿಸ್ ಲಾಸ್ಟ್' ಎಂಬ ಈ ಪುಸ್ತಕ. ಅನಂತರ ಆ ಪುಸ್ತಕವನ್ನು ಸರ್ವೋದಯವೆಂಬ ಹೆಸರಿನಿಂದ ಗುಜರಾತಿ ಭಾಷೆಗೆ ಅನುವಾದ ಮಾಡಿದರು. | |
| **25.** | **'ವಸಂತ ಮುಖ ತೋರಲಿಲ್ಲ' ಕವನದ ಆಶಯವೇನು?**<br>**ಉತ್ತರ:** ನಮ್ಮ ಸಮಾಜದಲ್ಲಿ ಇಂದಿಗೂ ಎಷ್ಟೋ ಜನರು ಶೋಷಣೆಗೊಳಗಾಗಿದ್ದಾರೆ. ಮಹಿಳಾ ಶೋಷಣೆಯೆಂಬುದು ಭ್ರೂಣದಿಂದಲೇ ಪ್ರಾರಂಭವಾಗುವುದು. ಅದು ಅವಳ ಬಾಲ್ಯ, ಯೌವನ, ಮುಪ್ಪು ಎಲ್ಲವನೂ ಆಕ್ರಮಿಸಿಕೊಂಡಿದೆ. ಸಾಮಾಜಿಕ ನ್ಯಾಯ ದೊರೆತು, ಶೋಷಣೆ ಮುಕ್ತ ಸಮಾಜವಾದರೆ ಮಾತ್ರ ಸರ್ವರ ಏಳಿಗೆ ಸಾಧ್ಯ ಎಂಬುದು 'ವಸಂತ ಮುಖ ತೋರಲಿಲ್ಲ' ಕವನದ ಆಶಯವಾಗಿದೆ. | |
| **26.** | **ಭಗತ್‌ಸಿಂಗ್ ಜಲಿಯನ್ ವಾಲಾಬಾಗ್‌ನ ಮಾರಣಹೋಮದಿಂದ ತೆಗೆದುಕೊಂಡ ನಿರ್ಧಾರವೇನು?**<br>**ಉತ್ತರ :** ಒಂದಲ್ಲ ಒಂದು ದಿನ ಈ ಬ್ರಿಟಿಷರ ಧಮನಕಾರಿ ಪ್ರಭುತ್ವವನ್ನ ಧ್ವಂಸ ಮಾಡಲು ಏನನ್ನಾದರೂ ಮಾಡಿಯೇ ತಿರುತ್ತೇನೆಂದೂ, ಕ್ರೂರ ಬ್ರಿಟಿಷ್ ಆಳ್ವಿಕೆಯನ್ನು ಅಂತ್ಯಗೊಳಿಸಬೇಕೆಂಬ ನಿರ್ಧಾರವನ್ನು ತೆಗೆದುಕೊಂಡನು. | |
| **27.** | **ಮಂಗಳೂರಿನಲ್ಲಿ ಮರಾಠಿ ನಾಟಕ ಮಂಡಳಿಯವರು ಆಡಿದ ನಾಟಕಗಳು ಗೋವಿಂದ ಪೈ ಅವರ ಮೇಲೆ ಬೀರಿದ ಪರಿಣಾಮವನ್ನು ವಿವರಿಸಿ.**<br>**ಉತ್ತರ :** ಮಂಗಳೂರಿಗೆ ಬಂದಿದ್ದ ಮರಾಠಿ ನಾಟಕ ಮಂಡಳಿಯವರು ಆಡಿದ ಹಲವಾರು ನಾಟಕಗಳನ್ನು ಕಂಡಿದ್ದ ಗೋವಿಂದ ಪೈ ಅವರಿಗೆ ಅಂಥವನ್ನು ಬರೆಯಬೇಕೆಂದು ಮನಸ್ಸು ತುಯ್ಯುತ್ತಿತ್ತು. ಅಲ್ಲಿಂದಲೇ ಕೆಲಕೆಲವು ಹಾಡುಗಳನ್ನು ಮನಸ್ಸಿನಲ್ಲೇ ಜೋಡಿಸುತ್ತಲೂ ಮನಸ್ಸಿನಲ್ಲೇ ಜಾಡಿಸುತ್ತಲೂ ಇದ್ದರು. ಕೊನೆಗೆ ಆ ನಾಟಕಗಳಂತೆ 5 ಅಂಕಗಳ ಉದ್ದಕ್ಕೆ ಒಮ್ಮೇಲೆ ಹೆಣೆಯಲಾರದೆ ಏಕಾಂಕವನ್ನು ಬರೆದರು. | |
| **V.** | **ಕೆಳಗಿನ ಕವಿ/ ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿ / ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.**<br>**ಕಾಲ, ಸ್ಥಳ – 1 ಅಂಕ**<br>**ಕೃತಿಗಳು, ಪ್ರಶಸ್ತಿಗಳು/ಬಿರುದುಗಳು – 1 ಅಂಕ**<br>**ವಾಕ್ಯರೂಪ, ಭಾಷಾ ಶೈಲಿ – 1 ಅಂಕ** | **3 x 2 = 6** |
| **28.** | **ದುರ್ಗಸಿಂಹ**<br>ದುರ್ಗಸಿಂಹನು ಕ್ರಿ.ಶ. **1031ರಲ್ಲಿ** ಕಿಸುಕಾಡು ನಾಡಿನ **ಸೈಯ್ಯಡಿಯಲ್ಲಿ** ಜನಿಸಿದನು. ಈತನು ಐದು ತಂತ್ರಗಳನ್ನಾಧರಿಸಿ **'ಕರ್ನಾಟಕ ಪಂಚತಂತ್ರ'** ಎಂಬ **ಚಂಪೂ ಕಾವ್ಯವನ್ನು** ರಚಿಸಿದ್ದಾನೆ. ಈ ಕೃತಿಗಳಲ್ಲಿ 41 ಫಲಕಗಳು 452 ಪದ್ಯಗಳು 239 ಶ್ಲೋಕಗಳು ಇವೆ. ಇದೊಂದು ವಿಶಿಷ್ಟ ಕೃತಿಯಾಗಿದೆ. **ಒಂದನೇ ಜಗದೇಕಮಲ್ಲನ** ಆಸ್ಥಾನದಲ್ಲಿ ದಂಡನಾಯಕ ಹಾಗೂ ಸಂಧಿವಿಗ್ರಹಿಯಾಗಿ ಇದ್ದನು. | |

29. **ಕುವೆಂಪು**

**ಕುವೆಂಪು** ಎಂಬ ಕಾವ್ಯನಾಮದಿಂದ ಪ್ರಸಿದ್ದರಾದ ಕುಪ್ಪಳ್ಳಿ ವೆಂಕಟಪ್ಪನವರ ಮಗ ಪುಟ್ಟಪ್ಪ ಅವರು ಕ್ರಿ.ಶ. **1904** ರಲ್ಲಿ ಶಿವಮೊಗ್ಗ ಜಿಲ್ಲೆಯ **ತೀರ್ಥಹಳ್ಳಿ** ತಾಲೂಕಿನ **ಕುಪ್ಪಳ್ಳಿಯಲ್ಲಿ** ಜನಿಸಿದರು. ಇವರು ಮಲೆನಾಡಿನ ಚಿತ್ರಗಳು, ಕೊಳಲು, ಪಾಂಚಜನ್ಯ, ನನ್ನ ದೇವರು ಮತ್ತು ಇತರ ಕಥೆಗಳು, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಜಲಗಾರ, ನೆನಪಿನ ದೋಣಿಯಲ್ಲಿ, **ಶ್ರೀರಾಮಾಯಣ ದರ್ಶನಂ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಜ್ಞಾನಪೀಠ ಪ್ರಶಸ್ತಿ, ರಾಷ್ಟ್ರಕವಿ ಪ್ರಶಸ್ತಿ, ಪಂಪ ಪ್ರಶಸ್ತಿ ಹೀಗೆ ಮೊದಲಾದ ಪ್ರಶಸ್ತಿಗಳನ್ನು ಪಡೆದಿದ್ದಾರೆ.

VI. **ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **3 x 1 = 3**

**ಅಂಕ ಸೂಚಿ: ಪ್ರಸ್ತಾರ ಹಾಕುವುದು – 1 ಅಂಕ**
**ಗಣ ವಿಭಾಗ – 1 ಅಂಕ**
**ಛಂದಸ್ಸಿನ ಹೆಸರು – 1 ಅಂಕ**

30. **ಮೇದಿನಿಯಂ ಕ್ರಮಕ್ರಮದೆ ಪರ್ವಿದುದಾತ್ತನಭೋವಿಭಾಗಮಾ**

| ಭ | ರ | ನ | ಭ | ಭ | ರ | ಲಗು |
|---|---|---|---|---|---|---|
| – ∪∪ | – ∪ – | ∪∪∪ | – ∪∪ | – ∪∪ | – ∪ – | ∪ – |
| ಮೇದಿನಿ | ಯಂ ಕ್ರಮ | ಕ್ರಮದೆ | ಪರ್ವಿದು | ದಾತ್ತನ | ಭೋವಿಭಾ | ಗಮಾ |

**ಛಂದಸ್ಸು – ಉತ್ಪಲ ಮಾಲಾ ವೃತ್ತ**

VII. **ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಗೊಳಿಸಿರಿ.** **3 x 1 = 3**

**ಅಂಕಸೂಚಿ: ಅಲಂಕಾರದ ಹೆಸರು – 1 ಅಂಕ**
**ಲಕ್ಷಣ ಬರೆಯುವುದು – 1 ಅಂಕ**
**ಅಂಶಗಳನ್ನು ಗುರುತಿಸಿ ಸಮನ್ವಯಗೊಳಿಸುವುದು – 1 ಅಂಕ**

31. **ಮಾರಿಗೌತಣವಾಯ್ತು ನಾಳಿನ ಭಾರತವು**

**ಅಲಂಕಾರ** : ರೂಪಕಾಲಂಕಾರ

**ಲಕ್ಷಣ** :ಉಪಮೇಯ ಮತ್ತು ಉಪಮಾನಗಳಿಗೆ ಭೇದವು ಕಂಡುಬರದೆ ಅವೆರಡೂ ಒಂದೇ ಎಂದು ವರ್ಣಿಸಿದರೆ ಅದೇ 'ರೂಪಕಾಲಂಕಾರ'.

**ಉಪಮೇಯ** : ನಾಳಿನ ಭಾರತ ಯುದ್ಧ

**ಉಪಮಾನ** : ಮಾರಿಯ ಔತಣ

**ಸಮನ್ವಯ** : ಇಲ್ಲಿ ಉಪಮೇಯವಾದ ನಾಳಿನ ಭಾರತ ಯುದ್ಧವನ್ನು ಉಪಮಾನವಾದ ಮಾರಿಯ ಔತಣಕ್ಕೆ ಅಭೇದವಾಗಿ ವರ್ಣಿಸಿರುವುದರಿಂದ ಇದು ರೂಪಕಾಲಂಕಾರ.

| | | |
|---|---|---|
| **VIII** | **ಈ ಕೆಳಗೆ ಕೊಟ್ಟಿರುವ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ.**<br>**ಅಂಕ ಸೂಚಿ: ಗಾದೆಯ ಮಹತ್ವದ ವಿವರಣೆ – 1 ಅಂಕ**<br>**ಉದಾಹರಣೆಯೊಂದಿಗೆ ಅರ್ಥವಿವರಣೆ – 1 ಅಂಕ**<br>**ಭಾಷಾ ಶೈಲಿ ಮತ್ತು ಪದಬಂಧ – 1 ಅಂಕ** | **3 x 1 = 3** |
| **32.** | **ತಾಳಿದವನು ಬಾಳಿಯಾನು**<br>ಗಾದೆಗಳು ವೇದಗಳಿಗೆ ಸಮ, ಗಾದೆಗಳು ಹಿರಿಯರ ಅನುಭವದ ಮಾತುಗಳಾಗಿವೆ. ಇದು ಒಂದು ಜನಪ್ರಿಯ ಗಾದೆ ಮಾತಾಗಿದ್ದು; **ಅತಿಯಾಗಿ ಕೋಪಮಾಡಿಕೊಳ್ಳದೆ ಸಮಾಧಾನದಿಂದ ಇರಬೇಕು. ಕೋಪ ಅನಾಹುತಕ್ಕೆ ಕಾರಣವಾಗುತ್ತದೆ** ಎಂಬುದನ್ನು ತಿಳಿಸುತ್ತದೆ. "ಕೋಪಂ ಅನರ್ಥ ಸಾಧನಂ" ಎಂಬ ಮಾತಿನಂತೆ ಕೋಪವು ಕೆಡುಕನ್ನು ಉಂಟುಮಾಡುತ್ತದೆ. ಕ್ಷಣಕಾಲ ಕೋಪದ ಕೈಗೆ ಬುದ್ಧಿ ಕೊಟ್ಟರೆ ಅದು ನಮ್ಮನ್ನು ಮಾತ್ರವಲ್ಲದೆ ಅದಕ್ಕೆ ಗುರಿಯಾದವರನ್ನೂ ಅಪಾಯಕ್ಕೆ ನೂಕುತ್ತದೆ. ಕುಂಬಾರನು ಹಲವು ದಿನಗಳು ಶ್ರಮ ಪಟ್ಟು ತಯಾರಿಸಿ ಮಡಕೆಯನ್ನು ಒಂದು ದೊಣ್ಣೆಯಿಂದ ನಾಶ ಮಾಡಿದಂತೆ ಕೋಪವು ಅನಾಹುತವನ್ನು ಉಂಟುಮಾಡುತ್ತದೆ. ಆದರೆ ಅದನ್ನು ಸರಿಪಡಿಸಲಾಗುತ್ತದೆಯೇ? ತಾಳ್ಮೆಯಿಂದ ಆಲೋಚಿಸಿ ಮುನ್ನಡೆದವರೇ ಜೀವನದಲ್ಲಿ ವಿಜಯಶಾಲಿಗಳಾಗಲು ಸಾಧ್ಯ. ಎಂಬುದು ಈ ಗಾದೆಯ ನೀತಿಯಾಗಿದೆ.<br>**ಅಥವಾ**<br>**ಮನಸಿದ್ದರೆ ಮಾರ್ಗ.**<br>ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ "ವೇದ ಸುಳ್ಳಾದರೂ ಗಾದೆ ಸುಳ್ಳಾಗದು" ಎಂಬ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ "ಮನಸ್ಸಿದ್ದರೆ ಮಾರ್ಗ" ಎಂಬ ಗಾದೆಯೂ ಸಹ ಒಂದಾಗಿದೆ.<br>ಯಾವುದೇ ಸಾಧನೆಯನ್ನು ಮಾಡಬೇಕಾದುದು ಮನಸ್ಸು ಮಾಡಬೇಕು. ಈ ಕಾರ್ಯವನ್ನು ಮಾಡಲೇಬೇಕು ಎಂದು ಪ್ರಯತ್ನ ಮಾಡಲು ಹೊರಟಾಗ ಕಾರ್ಯವನ್ನು ಸಾಧಿಸುವ ಮಾರ್ಗವು ತನ್ನಿಂದ ತಾನೇ ತೋರುತ್ತದೆ. "ಕೈಯಲ್ಲಿ ಆಗದು ಎಂದು ಕೈಕಟ್ಟಿ ಕುಳಿತರೆ ಸಾಗದು ಕೆಲಸವು ಮುಂದೆ; ಮನಸ್ಸೊಂದಿದ್ದರೆ ಮಾರ್ಗವುಂಟು ಕೆಚ್ಚೆದೆ ಇರಬೇಕು ಎಂದೂ" ಎನ್ನುವ ಹಾಡನ್ನು ಮರೆಯಬಾರದು. ವಿದ್ಯಾರ್ಥಿಯು ಯಶಸ್ಸನ್ನು ಪಡೆಯಬೇಕು. ಎಂಬ ಮನಸ್ಸಿನಿಂದ ಪ್ರಯತ್ನಶೀಲನಾದರೆ; ಮನಸ್ಸಿಟ್ಟು ಅಧ್ಯಯನ ಮಾಡಿದರೆ ಖಂಡಿತ ಅವನ ಗುರಿಯನ್ನು ತಲುಪುವ ಮಾರ್ಗಗಳು ಕಾಣತೊಡಗುತ್ತವೆ ಎಂಬುದನ್ನು ಈ ಗಾದೆಯು ವಿವರಿಸುತ್ತದೆ. | |

| | | |
|---|---|---|
| **IX.** | **ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.**<br>**ಅಂಕ ಸೂಚಿ: ಕರ್ತೃ, ಆಕರ ಕೃತಿ ಮತ್ತು ಪಠ್ಯದ ಹೆಸರು – 1 ಅಂಕ**<br>**ಸಂದರ್ಭದ ವಿವರಣೆ – 1 ಅಂಕ**<br>**ಸ್ವಾರಸ್ಯ ಮತ್ತು ಶೈಲಿ – 1 ಅಂಕ** | **3x 6 = 18** |
| **33.** | **"ಗುರೂಪದೇಶ ಎಂದರೆ ತಲೆ ನೆರೆಯದೆ ಬರುವ ಮುಪ್ಪು."**<br>**ಆಯ್ಕೆ:–** ಈ ವಾಕ್ಯವನ್ನು ಡಾ.ಬನ್ನಂಜೆ ಗೋವಿಂದಾಚಾರ್ಯರರು ಅನುವಾದಿಸಿದ **'ಕಾದಂಬರಿ'** ಕೃತಿಯಿಂದ ಆಯ್ದ **'ಶುಕನಾಸನ ಉಪದೇಶ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.<br>**ಸಂದರ್ಭ:–** ಕಾಶ್ಮೀರದ ರಾಜ ತಾರಾಪೀಡನ ಮಂತ್ರಿ ಶುಕನಾಸನು, ಯುವರಾಜನಾದ ಚಂದ್ರಪೀಡನ ಪಟ್ಟಾಭಿಷೇಕದ ಸಂದರ್ಭದಲ್ಲಿ ಉಪದೇಶ ನೀಡುವ ಸನ್ನಿವೇಶದಲ್ಲಿ ಈ ಮಾತನ್ನು ಹೇಳುತ್ತಾನೆ. ಗುರೂಪದೇಶ ಎಂದರೆ ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ 'ಮೀಹ'. ತಲೆ ನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು; ಬೊಜ್ಜು ಬೆಳೆಯದೆ ಬರುವ ಗುರುತ್ವ; ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ; ಪಂಜು ಇಲ್ಲದೆ ಬೆಳಗುವ ಬೆಳಕು; ಉದ್ವೇಗ ಬರಿಸದ ಜಾಗರಣೆ ಎಂದು ಉಪದೇಶ ನೀಡುವ ಸನ್ನಿವೇಶವಾಗಿದೆ.<br>**ಸ್ವಾರಸ್ಯ:–** ಈ ವಾಕ್ಯದಲ್ಲಿ ಗುರೂಪದೇಶ ಎಂದರೆ ತಲೆ ನೆರೆಯದೆ ಅಂದರೆ ವಯಸ್ಸಾಗದೇ ಬರುವ ಮುಪ್ಪು ಎಂದು ಗುರೂಪದೇಶದ ಮಹತ್ತ್ವವನ್ನು ಅತ್ಯಂತ ಸ್ವಾರಸ್ಯಪೂರ್ಣವಾಗಿ ಅರ್ಥೈಸಲಾಗಿದೆ. | |
| **34.** | **"ಯುದ್ಧಕ್ಕೆ ಹೋದ ನನ್ನ ಮಗನ ಕಣ್ಣುಗಳಂತೆ ಇವೆಯಲ್ಲ"**<br>**ಆಯ್ಕೆ:** ಈ ವಾಕ್ಯವನ್ನು **ಶ್ರೀಮತಿ ಸಾರಾ ಅಬೂಬಕರ್** ಅವರು ರಚಿಸಿರುವ **'ಚಪ್ಪಲಿಗಳು'** ಕಥಾ ಸಂಕಲದಿಂದ ಆಯ್ದ **'ಯುದ್ಧ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.<br>**ಸಂದರ್ಭ:** ಮುದುಕಿಯು ತನ್ನ ಸೊಸೆಯನ್ನು ಬದುಕಿಸಿದ ಸೇನಾವೈದ್ಯನು ತಮ್ಮವನಲ್ಲ; ತನ್ನ ದೇಶಕ್ಕೆ ದ್ರೋಹ ಮಾಡಿದವನು ಎಂದು ತಿಳಿದು ರೋಷದಿಂದ ಕೆರಳಿ ಅವನ ಮುಖವನ್ನು ನೋಡಿದ ಸಂದರ್ಭದಲ್ಲಿ ಮುದುಕಿಯು ಈ ಮಾತನ್ನು ತನ್ನಲ್ಲಿಯೇ ಹೇಳಿಕೊಳ್ಳುತ್ತಾಳೆ.<br>**ಸ್ವಾರಸ್ಯ :** ತನ್ನ ಮನೆಯಲ್ಲಿರುವ ಸೇನಾವೈದ್ಯನು ಶತ್ರುದೇಶದವನು ಎಂದು ತಿಳಿದು ರೋಷಗೊಂಡ ಮುದುಕಿಯು ಮನದಲ್ಲಿ ಯುದ್ಧಕ್ಕೆ ಹೋದ ತನ್ನ ಮಗನ ಕಣ್ಣುಗಳಂತೆಯೇ ಇವೆ ಎಂದು ಭಾವಿಸುವುದು, ಅವಳ ಹೃದಯದಲ್ಲಿರುವ ಮಾತೃವಾತ್ಸಲ್ಯವನ್ನು ಅಭಿವ್ಯಕ್ತಗೊಳಿಸುತ್ತದೆ. | |
| **35.** | **"ರಿಸಿಯರ ರೂಪಂ ಕಾಣ್ಬುಮಂದೀತನುಂ ತಪಂಬಡುಗುಮ್"**<br>**ಆಯ್ಕೆ:–** ಈ ವಾಕ್ಯವನ್ನು ಶಿವಕೋಟ್ಯಾಚಾರ್ಯ ಅವರು ರಚಿಸಿರುವ **'ವಡ್ಡಾರಾಧನೆ'** ಕೃತಿಯಿಂದ ಆಯ್ದ **'ಸುಕುಮಾರಸ್ವಾಮಿ ಕಥೆ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.<br>**ಸಂದರ್ಭ:–** ಸುಕುಮಾರಸ್ವಾಮಿಯು ಸಕಲ ಸುಖಭೋಗಗಳನ್ನು ವೈಭವದಿಂದ ಅನುಭವಿಸುತ್ತಿರುವ ಸಂದರ್ಭದಲ್ಲಿ ಬಂದ ಜೋಯಿಸನೊಬ್ಬನ ಸುಕುಮಾರಸ್ವಾಮಿಯನ್ನು ನೋಡಿ ಈ | |

| | | |
|---|---|---|
| | ಭವಿಷ್ಯವಾಣಿಯನ್ನು ಹೇಳುತ್ತಾನೆ.<br>**ಸ್ವಾರಸ್ಯ:–** 'ಪೂರ್ವಕಾಲದಿಂದಲೂ ಜೋಯಿಸುವ ಭವಿಷ್ಯವಾಣಿಯನ್ನು ಜನರು ನಂಬುತ್ತಿದ್ದರು ಎಂಬುದು ಈ ವಾಕ್ಯದಿಂದ ತಿಳಿದುಬರುವ ಸ್ವಾರಸ್ಯಪೂರ್ಣ ಅಂಶವಾಗಿದೆ. | |
| **36.** | **"ಹೊಸ ಭರವಸೆಗಳ ಕಟ್ಟೋಣ."**<br>**ಆಯ್ಕೆ:** ಈ ವಾಕ್ಯವನ್ನು ಕವಿ **ಶ್ರೀ ಜಿ.ಎಸ್. ಶಿವರುದ್ರಪ್ಪ** ಅವರು ರಚಿಸಿರುವ **'ಎದೆತುಂಬಿ ಹಾಡಿದೆನು'** ಕವನ ಸಂಕಲನದಿಂದ ಆಯ್ದ **'ಸಂಕಲ್ಪಗೀತೆ'** ಎಂಬ ಕವಿತೆಯಿಂದ ಆರಿಸಲಾಗಿದೆ.<br>**ಸಂದರ್ಭ:** ಕವಿಗಳು "ಜೀವನದಲ್ಲಿ ಧನಾತ್ಮಕ ಮನೋಭಾವನೆಯ ದೃಢಸಂಕಲ್ಪವನ್ನು ಹೊಂದಿರಬೇಕು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.<br>**ಸ್ವಾರಸ್ಯ:** "ನಾವು ಹೊಸ ಭರವಸೆಯನ್ನು ಮೂಡಿಸುವ ಸಂಕಲ್ಪ ಕೈಗೊಳ್ಳುವುದರಿಂದ ಸಮಾಜದ ನೈತಿಕ ಅಧಃಪತನವನ್ನು ತಡೆಯಬಹುದು" ಎಂದು ಕವಿಗಳು ಸ್ವಾರಸ್ಯಪೂರ್ಣವಾಗಿ ತಮ್ಮ ಭಾವನೆಯನ್ನು ಅಭಿವ್ಯಕ್ತಪಡಿಸುತ್ತಾರೆ. | |
| **37.** | **"ಜೀವ ಸತ್ತು ಹೋಗುವುದು ಗೊತ್ತ"**<br>**ಆಯ್ಕೆ:** ಈ ವಾಕ್ಯವನ್ನು **ಡಾ. ಬಿ.ಎಸ್. ಗದ್ದಗಿ ಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದ **'ಹಲಗಲಿಯ ಬೇಡರು'** ಎಂಬ ಲಾವಣಿಯಿಂದ ಆರಿಸಲಾಗಿದೆ.<br>**ಸಂದರ್ಭ:** ಬ್ರಿಟೀಷರು ಆಜ್ಞೆಯನ್ನು ಹೊರಡಿಸಿ, ಜನರಿಂದ ಆಯುಧಗಳನ್ನು ಬಲವಂತವಾಗಿ ಕಿತ್ತುಕೊಳ್ಳಲು ಪ್ರಯತ್ನಿಸಿದಾಗ ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಜಡಗ, ರಾಮ ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ, ನೀಡಿದರೆ ತಾವು ಸತ್ತಂತೆ ಎಂದು ಹೇಳಿಕೊಂಡ ಸಂದರ್ಭದಲ್ಲಿ ಈ ಮಾತು ಬಂದಿದೆ.<br>**ಸ್ವಾರಸ್ಯ:** ಹಲಗಲಿಯ ಬೇಡರು **"ಆಯುಧಗಳು ತಮ್ಮ ಪ್ರಾಣಕ್ಕಿಂತ ಮಿಗಿಲಾದುದು ಎಂಬ ಭಾವನೆಯನ್ನು ಹೊಂದಿದ್ದರು"** ಎಂಬುದು ಈ ಮಾತಿನಲ್ಲಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ. | |
| **38.** | **"ನಿನ್ನಪದೆಸೆಯ ಬಯಸುವನಲ್ಲ"**<br>**ಆಯ್ಕೆ:** ಈ ವಾಕ್ಯವನ್ನು **ಕುಮಾರವ್ಯಾಸ**ನೆಂದು ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಮಹಾಕಾವ್ಯದಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.<br>**ಸಂದರ್ಭ:** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸುವ ಸಂದರ್ಭದಲ್ಲಿ ಈ ಮಾತನ್ನು ಕವಿಯು ಹೇಳುತ್ತಾನೆ.<br>**ಸ್ವಾರಸ್ಯ:** ತನ್ನ ಜನ್ಮ ರಹಸ್ಯವನ್ನು ಅರಿತು ಕರ್ಣನು ಮನದಲ್ಲಿ ಚಿಂತಿತನಾಗಿ ಮೌನವಾದಾಗ, ಕೃಷ್ಣನು "ನಿನ್ನ ದುರ್ದೆಸೆಯನ್ನು ಕಾಣಲು ಇಷ್ಟವಿಲ್ಲ; ನಾನು ನಿನ್ನ ಹಿತಚಿಂತಕ" ಎಂದು ಹೇಳುವುದರ ಮೂಲಕ ಕರ್ಣನನ್ನು ಸಮಾಧಾನಪಡಿಸಿದ್ದು ಸ್ವಾರಸ್ಯಪೂರ್ಣವಾಗಿದೆ. | |

| | | |
|---|---|---|
| X.<br>39. | **ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.**<br>ಒಡವೆಯನರ್ಥಿಗಿತ್ತೆನವನೀತಳಮಂ ಗುರುಗಿತ್ತೆನೀಗಳೊಂ<br>ದಡೆಕೆಯುಮಿಲ್ಲ ಕೈಯೊಳೆರೆದಂ ಶ್ರುತಪಾರಗನೆಂತು ಸಂತಸಂ<br>ಬಡಿಸುವೆನಿನ್ನಿದೊಂದು ಧನುವಿರ್ದುದು ದಿವ್ಯಶರಾಳಿಯಿರ್ದುದಿ<br>ಲ್ಲೊಡಮೆ ಸಮಂತು ಪೇಟಿವರೊಳಾವುದನೀವುದೊ ಕುಂಭಸಂಭವ<br><br>**ಅಥವಾ**<br><br>ಅಂತೆಂಬನಾರ್ಗೆ ಪಿರಿದುಂ<br>ಭ್ರಾಂತು ದಲೇಂ ದ್ರೋಣನೆಂಬನೇಂ ಪಾರ್ವನೆ ಪೇ<br>ಟೆಂತೆನಗೆ ಕೆಳೆಯನೇ ನೂಂ<br>ಕಂತಪ್ಪನನಜೆಯೆನೆಂದು ಸಭೆಯೊಳ್ ನುಡಿದಂ | **4 x 1 = 4** |
| XI.<br>40. | **ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**<br>**ಅಂಕ ಸೂಚಿ: ವಿಷಯಾಂಶಕ್ಕೆ – 3 ಅಂಕ**<br>**ಅಡಕಗೊಂಡ ಮೌಲ್ಯ ಗುರುತಿಸುವುದು,**<br>**ಪದಬಂಧ ಮತ್ತು ಭಾಷಾ ಶೈಲಿ – 1 ಅಂಕ**<br><br>ರಾಜ್ಯದ ಸಾಮ್ರಾಜ್ಯದ ತೆನೆ ಒಕ್ಕಿ<br>ಮಂಡಲ – ಗಿಂಡಲಗಳ ಗಡಮುಕ್ಕಿ<br>ತೇಲಿಸಿ ಮುಳುಗಿಸಿ ಖಂಡ ಖಂಡಗಳ<br>ಸಾರ್ವಭೌಮರ ನೆತ್ತಿಯ ಕುಕ್ಕಿ<br>ಹಕ್ಕಿ ಹಾರುತಿದೆ ನೋಡಿದಿರಾ !<br><br>**ವರಕವಿ ದ. ರಾ. ಬೇಂದ್ರೆ** ಅವರು ರಚಿಸಿರುವ **'ಗರಿ'** ಕವನ ಸಂಕಲನದಿಂದ ಆಯ್ದ **'ಹಕ್ಕಿ ಹಾರುತಿದೆ ನೋಡಿದಿರಾ'** ಪದ್ಯದಲ್ಲಿ ಚಲನಶೀಲವಾದ ಕಾಲವನ್ನು ಹಾರುತ್ತಿರುವ ಹಕ್ಕಿಗೆ ಹೋಲಿಸಿ ವರ್ಣಿಸಲಾಗಿದೆ.<br>ಈ ಚರಣದಲ್ಲಿ ಕವಿಗಳು ಕಾಲಚಕ್ರದಲ್ಲಿ ನಡೆದಿರುವ ಭೂಮಂಡಲದ ರಾಜಕೀಯ ಹಾಗೂ ಪ್ರಾಕೃತಿಕ ಬದಲಾವಣೆಗಳನ್ನು ಕುರಿತು ವರ್ಣಿಸುತ್ತಾರೆ. ಕಾಲಪಕ್ಷಿಯು ತನ್ನ ಪಯಣದಲ್ಲಿ ಅನೇಕ ಸಣ್ಣಸಣ್ಣ ರಾಜಮನೆತನಗಳನ್ನು ಹಾಗೂ ದೊಡ್ಡದೊಡ್ಡ ಸಾಮ್ರಾಜ್ಯಗಳನ್ನು ಹುಟ್ಟಿಸಿ, ಬೆಳೆಯಿಸಿ, ಅವುಗಳ ಫಲಿತವನ್ನು ಕೊಯ್ಲು ಮಾಡಿದೆ. ಅದೇ ರೀತಿ ಅನೇಕ ಸಾಮ್ರಾಜ್ಯಗಳನ್ನು, ರಾಜ್ಯಗಳನ್ನು, ಕೋಟೆ ಕೊತ್ತಲಗಳನ್ನು ನಾಶಗೊಳಿಸಿದೆ. ಕಾಲಪಕ್ಷಿಯು ತನ್ನ ಪಯಣದಲ್ಲಿ ಭೂಮಂಡಲದ ಮೇಲಿರುವ ಖಂಡಗಳನ್ನು ತೇಲಿಸಿ, ಮುಳುಗಿಸಿ ಪ್ರಾಕೃತಿಕ (ಪ್ರಗತಿ ಮತ್ತು ವಿನಾಶ) ಬದಲಾವಣೆಗಳಿಗೂ ಕಾರಣವಾಗಿದೆ. ಕಾಲಪಕ್ಷಿಯು ಸಾರ್ವಭೌಮರೆಂದು ಮೆರೆಯುತ್ತಿದ್ದ ಸಾಮ್ರಾಟರ ನೆತ್ತಿಯನ್ನು ಕುಕ್ಕಿ ಅವರ ಅಹಂಕಾರವನ್ನು ಮೆಟ್ಟಿ ನಿಂತಿದೆ ಎಂದು | **4 x 1 = 4** |

| | | |
|---|---|---|
| | ಕವಿಗಳು ವರ್ಣಿಸುತ್ತಾರೆ. **ಚಲನಶೀಲವಾದ ಕಾಲದ ಮಹತ್ತ್ವವನ್ನು ಅರಿತು ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳುವ ಆಶಯವು ಈ ಪದ್ಯದಲ್ಲಿ ಕಂಡುಬರುವ ಮೌಲ್ಯವಾಗಿದೆ.** | |
| **XII.**<br>**41.** | **ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.**<br>**ಲಂಡನ್ ನಗರ ವೀಕ್ಷಣೆಯಲ್ಲಿ ಲೇಖಕರು ಗುರುತಿಸಿರುವ ವಿಶೇಷತೆಗಳೇನು?**<br>**ಉತ್ತರ:–** ಲಂಡನ್ ಪಟ್ಟಣವೆಂದರೆ ಒಂದು ಸ್ವತಂತ್ರ ಜಗತ್ತು. ಇಲ್ಲಿನ ಟ್ರಾಮ್ ಬಸ್ಸುಗಳು ಭೂಗರ್ಭದಲ್ಲಿ ಸಂಚರಿಸುತ್ತವೆ. **ವೂಲ್‌ವರ್ಥ ಸ್ಟೇಷನರಿ ಅಂಗಡಿಯು ಪ್ರಾಚೀನ ಮಹಾಕಾವ್ಯದಂತೆ ಒಂದು ಮಹಾಕೋಶವಾಗಿದೆ.** ಇಲ್ಲಿ ಎಲ್ಲ ತರಹದ ಸಾಮಗ್ರಿಗಳು ದೊರಕುತ್ತವೆ. ಲಂಡನ್ ನಗರದ ಎಲ್ಲ ಅಂಗಡಿಗಳಲ್ಲಿ ಸಾಮಾನ್ಯವಾಗಿ ಹೆಣ್ಣು ಮಕ್ಕಳೇ ಕಾರ್ಯ ನಿರ್ವಹಿಸುತ್ತಾರೆ. **'ಚೇರಿಂಗ್ ಕ್ರಾಸ್'** ಎಂಬ ಓಣಿಯಲ್ಲಿ ಆಂಗ್ಲ ಸಾಮ್ರಾಜ್ಯದ ವೈಭವವು ಕಂಡುಬರುತ್ತದೆ. **'ಟ್ರಾಫಲ್ಗಾರ್ ಸ್ಕ್ವೇರ್‌ನಲ್ಲಿ ನೆಲ್ಸನ್'** ಅವರ ಮೂರ್ತಿ ಇದೆ. ಇಲ್ಲಿಯ ಹೆಣ್ಣುಮಕ್ಕಳ ಟೊಪ್ಪಿಗೆಯು ವೈವಿಧ್ಯಮಯವಾಗಿರುತ್ತದೆ. **'ವೆಸ್ಟ್‌ಮಿನ್‌ಸ್ಟರ್ ಅಬೆ'** ಎಂಬುದು ಕನಿಷ್ಠ ಒಂದು ಸಾವಿರ ವರ್ಷದಷ್ಟು ಪುರಾತನವಾದ ಪ್ರಾರ್ಥನಾ ಮಂದಿರ. ಇದನ್ನು ಸತ್ತವರ ಸ್ಮಾರಕ ಎಂದು ಕರೆಯುತ್ತಾರೆ. ಪೊಯೆಟ್ಸ್ ಕಾರ್ನರ್‌ನಲ್ಲಿ ಇಂಗ್ಲೆಂಡಿನ ಪ್ರಸಿದ್ಧ ಕವಿಪುಂಗವರ ಸಮಾಧಿಗಳಿವೆ. ಇದರ ಸಮೀಪದಲ್ಲೇ ಪ್ರಖ್ಯಾತ ವಿಜ್ಞಾನಿಗಳ, ವ್ಯಾಪಾರಿಗಳ, ವಾಸ್ತುಶಿಲ್ಪಿಗಳ, ಸರದಾರರ ಸೇನಾಪತಿಗಳ ಸಮಾಧಿಗಳೂ ಸಹ ಇವೆ. ಲಂಡನ್ ನಗರದಲ್ಲಿ ಇರುವ ಅರಮನೆಯ ಸೌಂದರ್ಯ ಹಾಗೂ ರಾಜರುಗಳ ವೈಭವ ರಾಯಲ್ ಚಾಪೆಲ್‌ನಲ್ಲಿ ಕಂಡುಬರುತ್ತದೆ. ಸಾಮ್ರಾಟರ ರಾಜ್ಯಾಭಿಷೇಕವಾಗುವಾಗ ಕೂಡುವ **'ಸ್ಟೋನ್ ಆಫ್ ಸ್ಕೋನ್'** ವಿಶಿಷ್ಟವಾದುದ್ದಾಗಿದೆ. ಈ ಮೇಲಿನ ಎಲ್ಲಾ ವಿಶೇಷತೆಗಳನ್ನು ಲಂಡನ್ ನಗರದ ವೀಕ್ಷಣೆಯಲ್ಲಿ ಲೇಖಕರು ಗುರುತಿಸುತ್ತಾರೆ.<br><br>**ಅಥವಾ**<br>**'ವೆಸ್ಟ್ ಮಿನ್‌ಸ್ಟರ್ ಅಬೆ' ಪ್ರಾರ್ಥನಾ ಮಂದಿರ ಒಂದು ವಿಶೇಷ ಸ್ಮಾರಕ ವಿವರಿಸಿ.**<br>**ಉತ್ತರ:–** ಲಂಡನ್ ನಗರದಲ್ಲಿ ಇರುವ **'ವೆಸ್ಟ್‌ಮಿನ್‌ಸ್ಟರ್ ಅಬೆ'** ಎಂಬುದು ಕನಿಷ್ಠ ಒಂದು ಸಾವಿರ ವರ್ಷದಷ್ಟು **ಪುರಾತನವಾದ ಪ್ರಾರ್ಥನಾ ಮಂದಿರ.** ಇದು ದಿವಂಗತರಾದ ಸಂತರು, ಸಾರ್ವಭೌಮರು ಹಾಗೂ ಕವಿಪುಂಗವರ ಸ್ಮಾರಕವಾಗಿದೆ. ಆದ್ದರಿಂದ ಇದನ್ನು **'ಸತ್ತವರ ಸ್ಮಾರಕ'** ಎಂದೂ ಸಹ ಕರೆಯುತ್ತಾರೆ. ಈ ಸ್ಮಾರಕವು **"ಮರ್ತ್ಯತ್ವವೇ, ಎಷ್ಟು ಗೋರಿ ಗುಂಪುಗಳು ಇಲ್ಲಿವೆ; ನೋಡಿ ಅಂಜು"** ಎಂಬ ಬ್ಯೂಮಾಂಟ್ ಕವಿಯ ಹಾಡನ್ನು ನೆನಪಿಸುತ್ತದೆ. ಗೋಲ್ಡ್‌ಸ್ಮಿತ್ ಹಾಗೂ ಎಡಿಸನ್ ಎಂಬ ಪ್ರಖ್ಯಾತ ಸಾಹಿತಿಗಳು **'ವೆಸ್ಟ್‌ಮಿನ್‌ಸ್ಟರ್ ಅಬೆ'** ಯನ್ನು ಕುರಿತು ಉತ್ತಮವಾದ ನಿಬಂಧಗಳನ್ನು ರಚಿಸಿದ್ದಾರೆ. ಇಂದಿಗೂ ವೆಸ್ಟ್‌ಮಿನ್‌ಸ್ಟರ್ ಅಬೆಯು ಕಬ್ಬಿಗರ ಸ್ಫೂರ್ತಿಯ ತವರು ಮನೆಯಾಗಿದೆ. ಈ ಕಟ್ಟಡದಲ್ಲಿ ಹೊರಗಿನಿಂದ ಶೃಂಗರಿಸಿದ ಸಣ್ಣ ಬಾಗಿಲೊಂದು ಕಾಣುತ್ತದೆ ಒಳಗೆ ಮಾತ್ರ ಭವ್ಯವಾಗಿದೆ. ಇಲ್ಲಿ ಪಾದ್ರಿಗಳು ಸತ್ತವರಿಗಾಗಿ ಪ್ರಾರ್ಥನೆ ಮಾಡುತ್ತಾರೆ. ಬಹುಜನರು ಪ್ರಾರ್ಥನೆಗಿಂತ ಪ್ರಾರ್ಥನಾ ಮಂದಿರವನ್ನು ನೋಡಲು ಬರುತ್ತಾರೆ. ನಡುವೆ ಇರುವ ಸಣ್ಣ ಹಾದಿಯ ಎಡಬಲಕ್ಕೆ ರಾಜಕಾರಣ ಚತುರರ ಶಿಲಾಮೂರ್ತಿಗಳಿವೆ. ರಾಜರಿಗಿಂತ, ಕವಿಗಳಿಗಿಂತ ಇವರೇ ಆಂಗ್ಲರ ಕೀರ್ತಿ ಧ್ವಜವನ್ನು ನಿಲ್ಲಿಸಿದರೆಂಬುದು ಇಲ್ಲಿಯವರ ಅಭಿಪ್ರಾಯವಾಗಿದೆ. ಈ ಬಂಗಾರದ ಬಣ್ಣದಿಂದ ಲೇಪಿತವಾದ ಶಿಲಾಮೂರ್ತಿಗಳು ಹಾಗೂ ಉತ್ತಮವಾದ ಕೆತ್ತನೆಯ ಕೆಲಸವು ಸಂದರ್ಶಕರ ಮನಸ್ಸನ್ನು ಸೆಳೆಯುತ್ತವೆ. | **4 x 2 = 8** |

**42.** **ಲವನು ಯಜ್ಞಾಶ್ವವನ್ನು ಕಟ್ಟಲು ಕಾರಣವೇನು?**

**ಉತ್ತರ:–** ಶ್ರೀರಾಮನು ಮಹರ್ಷಿಗಳ ಆದೇಶದಂತೆ ಅಶ್ವಮೇಧ ಯಾಗವನ್ನು ಕೈಗೊಂಡು, ಶತ್ರುಘ್ನನ ಬೆಂಗಾವಲಿನಲ್ಲಿ ಯಜ್ಞಾಶ್ವವನ್ನು ಕಳುಹಿಸಿದನು. ರಾಮನ ಆಜ್ಞೆಯಂತೆ ಹೊರಟ ಯಜ್ಞಾಶ್ವವನ್ನು ಭುಜಬಲ ಪರಾಕ್ರಮಿಗಳಾದ ರಾಜರುಗಳು ತಡೆಯಲು ಹೆದರಿ ನಮಸ್ಕರಿಸಿ ಮುಂದೆ ಹೋಗಲು ಬಿಟ್ಟರು. ಹೀಗೆ ಯಜ್ಞಾಶ್ವವು ಭೂಮಿಯಲ್ಲೆಲ್ಲ ಸಂಚರಿಸುತ್ತ ವಾಲ್ಮೀಕಿಯ ಆಶ್ರಮದ ತೋಟದ ಹಸುರಾದ ಹುಲ್ಲನ್ನು ತಿನ್ನಲು ಒಳಹೊಕ್ಕಿತು. ಆಗ ಇದನ್ನು ಕಂಡ ಲವನು **"ಇದು ಯಾವ ಕಡೆಯ ಕುದುರೆಯು, ಹೊಕ್ಕು, ಹೂತೋಟವನ್ನು ನುಗ್ಗುನುರಿಯಾಗುವಂತೆ ತುಳಿದುದು"** ಎಂದು ಕುದುರೆಯ ಕಡೆಗೆ ನಡೆದು ಬಂದು ನೋಡಿದನು. ಯಜ್ಞಾಶ್ವದ ಹಣೆಯಲ್ಲಿದ್ದ ಪಟ್ಟಿಯಲ್ಲಿ **"ಭೂಮಂಡಲದಲ್ಲಿ ಕೌಸಲ್ಯೆಯ ಮಗನಾದ ರಾಮನು ಒಬ್ಬನೇ ವೀರನು. ಇದು ಅವನ ಯಜ್ಞದ ಕುದುರೆ. ಇದನ್ನು ತಡೆಯುವ ಸಾಮರ್ಥ್ಯವುಳ್ಳವರು ಯಾರೇ ಆದರು ತಡೆಯಲಿ"** ಎಂದು ಬರೆಯಲಾಗಿತ್ತು. ಇದನ್ನು ಓದಿದ ಲವನು ಕೋಪಗೊಂಡು "ಅಹಂಕಾರವನ್ನು ಬಿಡಿಸದಿದ್ದರೆ ತನ್ನ ತಾಯಿಯನ್ನು ಎಲ್ಲ ಜನರೂ ಬಂಜೆ ಎನ್ನದಿರುವರೇ, ತನಗೆ ಇರುವ ತೋಳುಗಳು ಇವು ಏತಕೆ?" ಎಂದು ಪ್ರತಿಜ್ಞೆಯನ್ನು ಕೈಗೊಂಡು, ಯಜ್ಞಾಶ್ವವನ್ನು ತನ್ನ ಉತ್ತರೀಯದಿಂದ ಕಟ್ಟಿಹಾಕಿದನು.

**ಅಥವಾ**

**ಲವನ ನಡೆವಳಿಕೆ ಮೆಚ್ಚುಗೆಯಾಯಿತೇ? ಏಕೆ?**

**ಉತ್ತರ:–** ಲವನು ಬಾಲಕನಾಗಿದ್ದರೂ ಸ್ವಾಭಿಮಾನಿ. ಅವನ ಮಾತುಗಳು ವೀರೋಚಿತ. ಆತನ ಮಾತೃಪ್ರೇಮ ಅನನ್ಯ. ವಾಲ್ಮೀಕಿ ಮಹರ್ಷಿಗಳು ಆಶ್ರಮದಿಂದ ಹೊರಗೆ ಹೋಗುವಾಗ ಲವನಿಗೆ ಆಶ್ರಮದ ಜವಾಬ್ದಾರಿಯನ್ನು ವಹಿಸಿರುತ್ತಾರೆ. ಇಂತಹ ಸಮಯದಲ್ಲಿ ರಾಮನ ಯಜ್ಞಾಶ್ವವು ಆಶ್ರಮವನ್ನು ಪ್ರವೇಶಿಸಿ ಹೂದೋಟವನ್ನು ಹಾಳುಮಾಡುತ್ತದೆ. ಇದನ್ನು ಕಂಡು ಲವನು ಕುದುರೆಯ ಬಳಿ ಬಂದು, ಕುದುರೆಯ ನೆತ್ತಿಯ ಮೇಲೆ ಮೆರೆಯುತ್ತಿದ್ದ ಪಟ್ಟದ ಲಿಖಿತವನ್ನು ಓದಿ, **'ರಾಮನೊಬ್ಬನೇ ಜಗತ್ತಿಗೆ ವೀರ'**ನೆಂಬ ವಾಕ್ಯವನ್ನು ಕಂಡು ಕೆರಳಿ, ಇವನ ಗರ್ವವನ್ನು ಬಿಡಿಸುತ್ತೇನೆ, ಇಲ್ಲದಿದ್ದಲ್ಲಿ ನನ್ನ ತಾಯಿಯನ್ನು ಎಲ್ಲರೂ ಬಂಜೆಯೆಂದು ದೂರಿಬಿಡುತ್ತಾರೆ ಎಂದು ಚಿಂತಿಸಿ, ತನ್ನ ತೋಳ್ಬಲವನ್ನು ತೋರಿಸಿಬಿಡುತ್ತೇನೆ ಎಂದು ಕುದುರೆಯನ್ನು ಕಟ್ಟಿ ಹಾಕುತ್ತಾನೆ. ಋಷಿಮುನಿಗಳ ಮಕ್ಕಳು ಹೆದರಿಕೆಯಿಂದ ಬೇಡವೆಂದಾಗ, **"ಬ್ರಾಹ್ಮಣರ ಮಕ್ಕಳು ಯುದ್ಧಕ್ಕೆ ಹೆದರಿದರೆ; ಜಾನಕಿಯ ಸುತನು ಹೆದರುವನೇ?"** ಎಂದು ವೀರನಂತೆ ಬಿಲ್ಲಿನ ಎದೆಯೇರಿಸಿ ಝೇಂಕಾರವನ್ನು ಮಾಡಿ ನಿಂತನು. ಇಂತಹ ವೀರ ಬಾಲಕನ ಶೌರ್ಯ, ತಾಯಿಯ ಮೇಲಿನ ಮಮತೆ, ದುರಹಂಕಾರವನ್ನು ಮೆಟ್ಟುವ ಸಾಹಸ ಎಂತಹವರಿಗೂ ಮೆಚ್ಚುಗೆಯಾಗುತ್ತದೆ.

| | | |
|---|---|---|
| **XIII** | **ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**<br>ಪ್ರಕೃತಿ ಒಂದು ಅದ್ಭುತ ಸೃಷ್ಟಿ. ಪ್ರಕೃತಿಯಲ್ಲಿ ಕ್ರಿಮಿ, ಕೀಟ, ಪ್ರಾಣಿ, ಪಕ್ಷಿಗಳು ಒಂದು ಮಿತಿಯಲ್ಲಿದ್ದರೆ ಮಾತ್ರ ಪರಿಸರ ಸಮತೋಲನವಾಗಿರುತ್ತದೆ, ಇಲ್ಲದಿದ್ದರೆ ಪರಿಸರದಲ್ಲಿ ಅಸಮತೋಲನವುಂಟಾಗಿ ಜೀವರಾಶಿಗಳಿಗೆಲ್ಲ ಅಪಾಯ ಕಟ್ಟಿಟ್ಟದ್ದು. ಎಲ್ಲಾ ಪ್ರಾಣಿ ಪಕ್ಷಿಗಳು ತಮ್ಮ ಸಂತತಿ ವೃದ್ಧಿಸಿಕೊಳ್ಳಲು ಪ್ರಯತ್ನಿಸುತ್ತವೆ. ಜನಿಸಿದ ಎಲ್ಲಾ ಪ್ರಾಣಿ ಪಕ್ಷಿಗಳು ಉಳಿಯುವುದಿಲ್ಲ. ಪ್ರಾಣಿಗಳು ತಮ್ಮ ಬದುಕಿಗಾಗಿ ಇತರ ಪ್ರಾಣಿ ಪಕ್ಷಿಗಳೊಂದಿಗೆ ಹೋರಾಟ ನಡೆಸಿದಾಗ ಶಕ್ತಿಯುತವಾದವು ಉಳಿಯುತ್ತವೆ. ದುರ್ಬಲ ಪ್ರಾಣಿಗಳು ನಶಿಸಿ ಹೋಗುತ್ತವೆ. ಬದುಕುಳಿದ ಪ್ರಾಣಿ ಪಕ್ಷಿಗಳನ್ನು ಮಾನವ ದುರಾಸೆ, ಮೋಜು ಅಥವಾ ಹೊಟ್ಟೆಪಾಡಿಗಾಗಿ ನಾಶಮಾಡುತ್ತಿದ್ದಾನೆ. ಇದರಿಂದ ಪ್ರಾಣಿಗಳ ಸಂತತಿ ಕ್ಷೀಣವಾಗುತ್ತದೆ. ಪ್ರಾಣಿಗಳಂತೆ ಸಸ್ಯಗಳೂ ತಮ್ಮ ವಂಶ ಮುಂದುವರಿಯಬೇಕೆಂದು ಯತ್ನಿಸುವ ವರ್ಗಕ್ಕೆ ಸೇರಿವೆ. ಕೀಟ, ವಾಯು, ನೀರು ಮೊದಲಾದವುಗಳ ಮೂಲಕ ಬೀಜಗಳನ್ನು ವಿತರಣೆ ಮಾಡುತ್ತವೆ. ಈ ಬೀಜಗಳು ಎಲ್ಲ ಭೂಜಲ–ಪ್ರದೇಶದಲ್ಲಿ ಹರಡಿಕೊಂಡರೂ ಅವು ತಮಗೆ ಅನುಕೂಲವಾದ ವಾತಾವರಣ ದೊರೆತಾಗ ಮೊಳೆಕೆಯೊಡೆದು ವಂಶಗಳ ಬೆಳವಣಿಗೆಗೆ ಕಾರಣವಾಗುತ್ತವೆ. ವಿಪುಲವಾದ ನೀರು, ಆರ್ದ್ರತೆ ಇರುವಲ್ಲಿ ದಟ್ಟವಾದ ಕಾಡು ಬೆಳೆದರೆ, ಬಯಲು ಪ್ರದೇಶದಲ್ಲಿ ಜಾಲಿ ಗಿಡಗಳೇ ವೃಕ್ಷರಾಜ ಎನಿಸಿಕೊಳ್ಳುವುವು. ಇವೇ ಬೀಜಗಳು ಮರುಭೂಮಿ, ರಸ್ತೆ, ಕಟ್ಟಡಗಳ ಮೇಲೆ ಬಿದ್ದರೆ ಅವುಗಳ ಬೆಳವಣಿಗೆಗೆ ಅವಕಾಶವೇ ದೊರೆಯುವುದಿಲ್ಲವಾದ್ದರಿಂದ ನಾಶವಾಗುವುವು.<br>**ಪ್ರಶ್ನೆಗಳು :** | **1 x 4= 4**<br>**(2+2)** |
| **43ಅ** | **ಸಸ್ಯಗಳು ತಮ್ಮ ವಂಶವನ್ನು ಹೇಗೆ ಬೆಳೆಸುತ್ತವೆ?**<br>ಪ್ರಾಣಿಗಳಂತೆ ಸಸ್ಯಗಳೂ ತಮ್ಮ ವಂಶ ಮುಂದುವರಿಯಬೇಕೆಂದು ಯತ್ನಿಸುವ ವರ್ಗಕ್ಕೆ ಸೇರಿವೆ. ಕೀಟ, ವಾಯು, ನೀರು ಮೊದಲಾದವುಗಳ ಮೂಲಕ ಬೀಜಗಳನ್ನು ವಿತರಣೆ ಮಾಡುತ್ತವೆ. ಈ ಬೀಜಗಳು ಎಲ್ಲ ಭೂಜಲ–ಪ್ರದೇಶದಲ್ಲಿ ಹರಡಿಕೊಂಡರೂ ಅವು ತಮಗೆ ಅನುಕೂಲವಾದ ವಾತಾವರಣ ದೊರೆತಾಗ ಮೊಳೆಕೆಯೊಡೆದು ವಂಶಗಳ ಬೆಳವಣಿಗೆಗೆ ಕಾರಣವಾಗುತ್ತವೆ. | |
| **43ಆ** | **ಪ್ರಾಣಿಗಳ ಸಂತತಿ ಕ್ಷೀಣಿಸಲು ಕಾರಣಗಳಾವುವು?**<br>ಜನಿಸಿದ ಎಲ್ಲಾ ಪ್ರಾಣಿ ಪಕ್ಷಿಗಳು ಉಳಿಯುವುದಿಲ್ಲ. ಪ್ರಾಣಿಗಳು ತಮ್ಮ ಬದುಕಿಗಾಗಿ ಇತರ ಪ್ರಾಣಿ ಪಕ್ಷಿಗಳೊಂದಿಗೆ ಹೋರಾಟ ನಡೆಸಿದಾಗ ಶಕ್ತಿಯುತವಾದವು ಉಳಿಯುತ್ತವೆ. ದುರ್ಬಲ ಪ್ರಾಣಿಗಳು ನಶಿಸಿ ಹೋಗುತ್ತವೆ. ಬದುಕುಳಿದ ಪ್ರಾಣಿ ಪಕ್ಷಿಗಳನ್ನು ಮಾನವ ದುರಾಸೆ, ಮೋಜು ಅಥವಾ ಹೊಟ್ಟೆಪಾಡಿಗಾಗಿ ನಾಶಮಾಡುತ್ತಿದ್ದಾನೆ. ಇದರಿಂದ ಪ್ರಾಣಿಗಳ ಸಂತತಿ ಕ್ಷೀಣವಾಗುತ್ತದೆ. | |
| **XIV.**<br>**44.** | **ಈ ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ.**<br>ನಿಮ್ಮನ್ನು ಮಂಗಳೂರಿನ ಸರ್ಕಾರಿ ಪ್ರೌಢಶಾಲೆಯಲ್ಲಿ ಓದುತ್ತಿರುವ 'ವಿನಯ' ಎಂದು ಭಾವಿಸಿಕೊಂಡು ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಚಿಕ್ಕಬಳ್ಳಾಪುರದಲ್ಲಿರುವ ನಿಮ್ಮ ತಾಯಿ ವರುಣರವರಿಗೆ ಒಂದು ಪತ್ರ ಬರೆಯಿರಿ.<br>**ಅಥವಾ**<br>ನಿಮ್ಮನ್ನು ಮೈಸೂರಿನ ಶಾರದಾವಿಲಾಸ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಸಂಗಮೇಶ್' ಎಂದು ಭಾವಿಸಿಕೊಂಡು ನಿಮ್ಮ ಶಾಲೆಯಲ್ಲಿ ನಡೆಯುವ ಕ್ರೀಡಾಕೂಟದ ಉದ್ಘಾಟಕರಾಗಿ ಬರುವಂತೆ ಆಹ್ವಾನಿಸಿ ನಿಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆಯಿರಿ.<br>**(ಉತ್ತರಕ್ಕಾಗಿ 1, 2, 3 ರ ಅಭ್ಯಾಸ ಪತ್ರಿಕೆಯ ಉತ್ತರಗಳನ್ನು ನೋಡಿರಿ)** | **5 x 1 = 5** |

| | | |
|---|---|---|
| **XV**. | **ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** | **5 x 1 = 5** |
| **45.** | **ಸ್ವಚ್ಛ ಭಾರತ ಅಭಿಯಾನ**<br>**ಪೀಠಿಕೆ:** ಸ್ವಚ್ಛ ಎಂದರೆ ನಿರ್ಮಲವಾದದ್ದು, ಪರಿಶುದ್ಧವಾದದ್ದು ಎಂದರ್ಥ. ಸ್ವಚ್ಚ ಭಾರತ ಎಂದರೆ ಭಾರತ ದೇಶದ ಕಲುಷಿತ ಸ್ಥಳಗಳನ್ನು ನಿರ್ಮಲಗೊಳಿಸುವುದು ಎಂದರ್ಥ. ಸ್ವಚ್ಛ ಭಾರತ ಅಭಿಯಾನವು ಭಾರತ ದೇಶದ ಒಂದು ಅತ್ಯುತ್ತಮ ನೈರ್ಮಲ್ಯ ಯೋಜನೆಯಾಗಿದೆ. ಪ್ರಸ್ತುತ ಕೇಂದ್ರ ಸರ್ಕಾರದ ಮಹತ್ವಕಾಂಕ್ಷೆಯ ಯೋಜನೆಯಾಗಿದ್ದು, ಭಾರತ ದೇಶವನ್ನು ಸ್ವಚ್ಛಗೊಳಿಸುವ ನಿಟ್ಟಿನಲ್ಲಿ ಅತ್ಯಂತ ಮಹತ್ವಪೂರ್ಣ ಅಭಿಯಾನವಾಗಲಿದೆ.<br>**ವಿಷಯ ನಿರೂಪಣೆ: 'ಆರೋಗ್ಯವೇ ಮಹಾಭಾಗ್ಯ' 'ಎಲ್ಲಿದೆಯೋ ಸ್ವಚ್ಚತೆ ಅಲ್ಲಿದೆ ಆರೋಗ್ಯ'** ಎಂಬ ಹಿತ ನುಡಿಗಳಂತೆ ನಮ್ಮ ಸುತ್ತಮುತ್ತಲಿನ ಪ್ರದೇಶಗಳು ಸ್ವಚ್ಛವಾಗಿದ್ದರೆ ಅದು ನಮಗೆ ಆರೋಗ್ಯ ಭಾಗ್ಯವನ್ನು ತಂದು ಕೊಡುತ್ತದೆ.ಇಲ್ಲವಾದರೆ ಅನಾರೋಗ್ಯ ಉಂಟಾಗಿ ಕಾಯಿಲೆಗಳು ಉಲ್ಬಣಿಸಬಹುದು ಆದ್ದರಿಂದ ನಾವು ನಮ್ಮ ಸುತ್ತಮುತ್ತಲಿನ ಪ್ರದೇಶಗಳನ್ನು ನೈರ್ಮಲ್ಯದಿಂದ ಇರುವಂತೆ ನೋಡಿಕೊಳ್ಳಬೇಕು. ಭಾರತ ದೇಶವನ್ನು ಸ್ವಚ್ಛವಾಗಿಟ್ಟುಕೊಳ್ಳುವ ಉದ್ದೇಶದಿಂದ ದಿನಾಂಕ: 02.10.2014 ರಂದು ನಮ್ಮ ದೇಶದ ಪ್ರಧಾನ ಮಂತ್ರಿಯಾದ ಶ್ರೀನರೇಂದ್ರ ಮೋದಿಯವರು ಸ್ವತಃ ತಾವೇ ಭಾಗವಹಿಸುವುದರ ಮೂಲಕ ಸ್ವಚ್ಛ ಭಾರತ ಅಭಿಯಾನಕ್ಕೆ ಚಾಲನೆ ನೀಡಿದರು. ಮಹಾತ್ಮಗಾಂಧೀಜಿಯವರ ಹುಟ್ಟಿದ ದಿನ( ಅಕ್ಟೋಬರ್–2) ಈ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು ಗಾಂಧೀಜಿಯವರ ನಿರ್ಮಲ ಭಾರತ ಕನಸನ್ನು ನನಸು ಮಾಡುವ ನಿಟ್ಟಿನಲ್ಲಿ ಅತ್ಯುತ್ತಮ ಅಭಿಯಾನವಾಗಿದೆ. ಕೇಂದ್ರ, ರಾಜ್ಯ ಸರ್ಕಾರಿ ನೌಕರರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ರಾಜಕೀಯ ಮುಖಂಡರು, ಇತ್ಯಾದಿ ಭಾರತದ ನಾಗರಿಕರು ಪ್ರತಿಜ್ಞೆ ಕೈಗೊಳ್ಳುವ ಮೂಲಕ ಈ ಅಭಿಯಾನಕ್ಕೆ ಕೈಜೋಡಿಸಿದ್ದಾರೆ. **'ಸ್ವಚ್ಛತೆ ಉತ್ತಮ ಆರೋಗ್ಯದ ತಳಹದಿ'** ಆದ್ದರಿಂದ ಸ್ವಚ್ಛತೆಯಿಂದ ಕೂಡಿದ ಸ್ಥಳ ನೋಡಲು ಸುಂದರವಾಗಿರುವಂತೆ ರೋಗಮುಕ್ತವು ಆಗಿರುತ್ತದೆ. ಆದ್ದರಿಂದ ನಾವು ಮೊದಲು ನಮ್ಮ ಮನೆ, ಬೀದಿ, ಗ್ರಾಮ, ಶಾಲಾ–ಕಾಲೇಜುಗಳನ್ನು ಸ್ವಚ್ಛವಾಗಿಟ್ಟುಕೊಂಡರೆ ಈ ಅಭಿಯಾನಕ್ಕೆ ಪ್ರೋತ್ಸಾಹ ನೀಡಿದಂತೆ ಆಗುತ್ತದೆ. ನಾವುಗಳು ಪ್ರತಿನಿತ್ಯ ಸ್ವಲ್ಪ ಸಮಯವನ್ನಾದರೂ ಸ್ವಚ್ಛತೆಗೆ ಮೀಸಲಿಟ್ಟು, ಸ್ವಚ್ಛತಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ | |

ಆರೋಗ್ಯದಿಂದ ಇರೋಣ.

**ಉಪಸಂಹಾರ :" ಏಕ್ ಕದಂ ಸ್ವಚ್ಛತಾ ಕಿ ಔರ್ "** ಎಂಬ ಧ್ಯೇಯ ವಾಕ್ಯವನ್ನಿಟ್ಟುಕೊಂಡು ನಾವೆಲ್ಲರೂ ನಿರ್ಮಲ ಮನಸ್ಸಿನಿಂದ ನಮ್ಮ ದೇಶವನ್ನು ನೈರ್ಮಲ್ಯಗೊಳಿಸಿಕೊಳ್ಳಬೇಕು. ಈ ಅಭಿಯಾನದಲ್ಲಿ ಭಾಗವಹಿಸಿ, ಪ್ರೋತ್ಸಾಹಿಸಿ ಸ್ವಚ್ಛ, ಸುಂದರ ಪರಿಸರದಿಂದ ಕೂಡಿದ ಭಾರತವನ್ನು ನಿರ್ಮಿಸಿ ಗಾಂಧೀಜಿಯವರ ಕನಸನ್ನು ನನಸು ಮಾಡೋಣ ಎಂಬ ಆಶಯ ನಮ್ಮದಾಗಿರಲಿ.

**ಅಥವಾ**

**ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ**

**ಪೀಠಿಕೆ :** ಪ್ರಾಚೀನ ಸ್ಮಾರಕಗಳು ರಾಷ್ಟ್ರ ಪರಂಪರೆಯ ಹೆಗ್ಗುರುತುಗಳು. ನಮ್ಮ ಭವ್ಯ ಪರಂಪರೆಯ ಪ್ರತೀಕಗಳಾಗಿವೆ. ಗತಕಾಲದ ವೈಭವಗಳನ್ನು ಅರಿಯಲು ಆಧಾರವಾಗಿರುವಂತಹ ಅಮೂಲ್ಯವಾದ ಸಂಪತ್ತು ಎಂದೇ ಹೇಳಬಹುದು.

**ವಿಷಯ ನಿರೂಪಣೆ :** ಪ್ರಾಚ್ಯ ಎಂದರೆ ಪ್ರಾಚೀನವಾದದ್ದು ಎಂದರ್ಥ. ಪ್ರಾಚೀನ ಕಾಲದಲ್ಲಿ ನಮ್ಮ ಹಿರಿಯರು ವಿಜಯದ ನೆನಪಿಗಾಗಿ ವಿಜಯ ಸ್ಮಾರಕಗಳು, ಅಥವಾ ಇನ್ನಾವುದಾದರೂ ಸ್ಮರಣೆಗೋಸ್ಕರ ದೇವಾಲಯಗಳು, ಸ್ತಂಭಗಳು, ಶಾಸನಗಳು, ಬಸದಿಗಳು, ಮಸೀದಿಗಳು, ಮಹಲ್ಗಳು, ಮೂರ್ತಿಗಳು, ಅರಮನೆಗಳು, ಕೋಟೆ–ಕೊತ್ತಲುಗಳನ್ನು ನಿರ್ಮಿಸಿದ್ದಾರೆ. ಇವೇ ನಮ್ಮ ಪ್ರಾಚ್ಯ ಸ್ಮಾರಕಗಳು. ಅವುಗಳನ್ನು ಸಂರಕ್ಷಣೆ ಮಾಡಿಕೊಂಡು ಹೋಗುವುದು ನಮ್ಮ ಹೆಗ್ಗಳಿಗೆ. ಯಾಕೆಂದರೆ ನಮ್ಮ ಪ್ರಾಚೀನರ ಜೀವನ ವ್ಯವಸ್ಥೆಗಳನ್ನು, ಇತಿಹಾಸ ಪರಂಪರೆಯನ್ನು ಅರಿಯಲು ಮೂಲಭೂತವಾದ ಆಕರವಾಗಿರುವಂತವು. ಭಾರತೀಯರು ಕಲೆ–ವಾಸ್ತುಶಿಲ್ಪಗಳಿಗೆ ಹೆಸರುವಾಸಿಯಾಗಿರುವಂತವರು. ಪ್ರಾಚೀನ ಭಾರತೀಯರು ಕಠಿಣಶ್ರಮವಹಿಸಿ ಭಾರತದ ಪ್ರಾಚೀನ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಆದರೆ ವಿದೇಶಿಯರು ಒಂದು ಕ್ಷಣಮಾತ್ರದಲ್ಲಿ ವಾಸ್ತುಶಿಲ್ಪಗಳನ್ನು ಕೆಡವಿ ಹಾಕಿದರು. ಮತ್ತೆ ಹಾಗಾಗಬಾರದು. ನಮ್ಮ ಗತಕಾಲದ ಜೀವನದ ಮೇಲೆ ಮುಂದಿನ ಜೀವನ ನಿಂತಿರುತ್ತದೆ. ಪ್ರಾಚೀನ ಸ್ಮಾರಕಗಳ ಆಧಾರದ ಮೇಲೆ ಅಂದಿನ ಜನರ ವೈಭವದ ಜೀವನ, ರಾಜಕೀಯ, ಸಾಂಸ್ಕೃತಿಕ, ಐತಿಹಾಸಿಕ ಅಂಶಗಳನ್ನು ತಿಳಿಯಬಹುದು. ಆದ್ದರಿಂದ ಅವುಗಳನ್ನು ರಕ್ಷಿಸಬೇಕು. ಕನ್ನಡ ನಾಡಿನಲ್ಲಿ ಹಂಪೆ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ತಲಕಾಡು, ಶ್ರವಣಬೆಳಗೊಳ, ಮೈಸೂರು, ಬೀದರ್, ಬಿಜಾಪುರ ಮುಂತಾದ ಕಡೆ ಪ್ರಾಚ್ಯ ಸ್ಮಾರಕಗಳನ್ನು ನೋಡಿದಾಗ ಅಂದಿನ ರಾಜ–ಮಹಾರಾಜರ ಇತಿಹಾಸ ಮತ್ತು ಕಲೆ, ಸಂಸ್ಕೃತಿಯನ್ನು ತಿಳಿಯಬಹುದು.

**ಉಪಸಂಹಾರ :** ಭಾರತೀಯರ ಸಂಸ್ಕೃತಿಯ ದ್ಯೂತಕವಾಗಿರುವ, ಐತಿಹಾಸಿಕ ಮಹತ್ವವನ್ನು ತಿಳಿಸುವ ಪ್ರಾಚೀನ ಕಾಲದ ಸ್ಮಾರಕಗಳನ್ನು ಸಂರಕ್ಷಿಸಿಕೊಂಡು ಹೋಗಬೇಕಾದದ್ದು ನಮ್ಮ ನಿಮ್ಮೆಲ್ಲರ ಜವಬ್ದಾರಿಯಾಗಿದೆ.

***